**ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣಾ**

**ಸಾಹಿತ್ಯ ಸಂಭ್ರಮ ಮಾಲಿಕೆ : ೦೧**

# ಸಾಹಿತ್ಯ ಸಂಭ್ರಮ

**(ಕನ್ನಡ ಸಾಹಿತ್ಯ ಕೃತಿ ಕುರಿತ ಬರಹ ಸಂಕಲನ)**


**ಪ್ರಧಾನ ಸಂಪಾದಕರು**

**ಎಸ್.ಸಿ.ಕಿರಣ್‌ಕುಮಾರ್**

**ಸಂಪಾದಕರು**

**ಮಾರೇನಹಳ್ಳಿ ಲೋಕೇಶ್**



**ಪ್ರಕಾಶನ**

**ಗ್ರಾಮ ಭಾರತಿ ವಿದ್ಯಾಸಂಸ್ಥೆ**

ಶ್ರೀ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ (ರಿ.)

ಹೇಮಗಿರಿ ರಸ್ತೆ, ಕೃಷ್ಣರಾಜಪೇಟೆ – 571426, ಮಂಡ್ಯ ಜಿಲ್ಲೆ.

# ಸಾಹಿತ್ಯ ಸಂಭ್ರಮ

**ಕೃತಿಯು ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣಾ ಸಾಹಿತ್ಯ ಮಾಲಿಕೆಯ ಮೊದಲನೆಯ ಪ್ರಕಟಣೆಯಾಗಿದ್ದು ಗ್ರಾಮ ಭಾರತಿ ವಿದ್ಯಾಸಂಸ್ಥೆ ವತಿಯಿಂದ ಪ್ರಕಾಶಿಸಲ್ಪಟ್ಟಿರುತ್ತದೆ.**


| | | |
|---|---|---|
| ಮೊದಲ ಮುದ್ರಣ | : | 2023 |
| ಪ್ರಕಾರ | : | ವಿಚಾರಗೋಷ್ಠಿ ಪ್ರಬಂಧ |
| ಪ್ರಕಾಶಕರು ಮತ್ತು ಕೃತಿ ಸೌಮ್ಯ | : | ಗ್ರಾಮ ಭಾರತಿ ವಿದ್ಯಾಸಂಸ್ಥೆ<br>ಹೇಮಗಿರಿ ರಸ್ತೆ, ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ |
| ಪುಟ | : | 80 |
| ಬೆಲೆ | : | 125/– ರೂ. |
| ಪುಸ್ತಕದ ಅಳತೆ | : | 1/8 ಡೆಮ್ಮಿ ಸೈಜ್ |
| ಪೇಪರ್ | : | 80 ಜಿಎಸ್ಎಂ. ಮ್ಯಾಪ್‌ಲಿಥೋ |
| ಪುಟಗಳು | : | 82 |
| ಮುದ್ರಣ | : | ಅವಿನಾಶ್ ಗ್ರಾಫಿಕ್ಸ್<br>ರೈಲ್ವೆ ಸ್ಟೇಷನ್ ರಸ್ತೆ, ಮಂಡ್ಯ – 571401<br>ಮೊ: 9845868957 |

# ಪ್ರಾತಃ ಸ್ಮರಣೀಯರು



**ಶ್ರೀ ಎಸ್.ಸಿ.ಚಿಕ್ಕಣ್ಣಗೌಡರು (ರಾಜಣ್ಣ)**

ಜನನ : 5–12–1946 ಮರಣ : 18–12–2007

ಕರ್ನಾಟಕ ರಾಜ್ಯದಲ್ಲಿಯೆ ಅತ್ಯುತ್ತಮ ಸಹಕಾರಿ ಎಂದು ಪರಿಗಣಿಸಲ್ಪಟ್ಟಿದ್ದ ಸಹಕಾರ ಶಿಲ್ಪಿ, ಶೀಲವಂತ ರಾಜಕಾರಣಿ ಹಾಗೂ ಕೃಷ್ಣರಾಜಪೇಟೆಯ ಪ್ರಪ್ರಥಮ ಶಾಸಕರಾದ ದಿವಂಗತ ಪೂಜ್ಯ ಎಸ್.ಎಂ.ಲಿಂಗಪ್ಪನವರ ವಂಶದಲ್ಲಿ ಶೀಳನೆರೆ ಸಾಹುಕಾರ್ ಶ್ರೀ ಎಸ್.ಕೆ.ಚಿಕ್ಕಣ್ಣಗೌಡ ಮತ್ತು ಹೊನ್ನಮ್ಮನವರ ನಾಲ್ಕು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳಲ್ಲಿ ಕಿರಿಯ ಪುತ್ರರಾಗಿ ದಿನಾಂಕ: 05–12–1946 ರಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿನ ಶೀಳನೆರೆ ಗ್ರಾಮದಲ್ಲಿ ಜನಿಸಿದರು. ಇವರು ಬಾಲ್ಯವನ್ನು ತಮ್ಮ ಹುಟ್ಟೂರಾದ ಶೀಳನೆರೆಯಲ್ಲೆ ಕಳೆಯುತ್ತಾರೆ. ಇವರ ಪ್ರಾಥಮಿಕ ವಿದ್ಯಾಭ್ಯಾಸವನ್ನು ಶೀಳನೆರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿಯಲ್ಲೂ, ಪ್ರೌಢ ಶಿಕ್ಷಣವನ್ನು ತಾಲ್ಲೂಕು ಕೇಂದ್ರವಾದ ಕೃಷ್ಣರಾಜಪೇಟೆ ಸರ್ಕಾರಿ ಶಾಲೆಯಲ್ಲಿ ಪಡೆದಿರುತ್ತಾರೆ. ನಂತರ ಇವರು ಕೃಷ್ಣರಾಜಪೇಟೆಯ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಎಲೆಕ್ಟ್ರಿಕಲ್ ವಿಭಾಗಕ್ಕೆ ಪ್ರವೇಶ ಪಡೆದು ಪ್ರಥಮ ವರ್ಷವನ್ನು ಪೂರೈಸಿ ನಂತರ ಅವರ ಅಣ್ಣನವರಿಗೆ ಚಿಕ್ಕಮಂಗಳೂರಿಗೆ ವರ್ಗವಾದದ್ದರಿಂದ ಇವರು ಸಹ ಅವರೊಂದಿಗೆ ಚಿಕ್ಕಮಂಗಳೂರಿನ ಸರ್ಕಾರಿ ಪಾಲಿಟೆಕ್ನಿಕ್‌ಗೆ ವರ್ಗಾಹಿಸಿಕೊಂಡು ಅಲ್ಲಿ ದ್ವಿತೀಯ ಮತ್ತು ತೃತೀಯ ವರ್ಷವನ್ನು ಪೂರೈಸಿ ಡಿಪ್ಲೋಮೊ ಇಂಜಿನಿಯರಿಂಗ್ ಪದವಿಯನ್ನು ಗಳಿಸಿರುತ್ತಾರೆ.

ತದನಂತರದ ದಿನಗಳಲ್ಲಿ ಕೃಷ್ಣರಾಜಪೇಟೆ ತಾಲ್ಲೂಕನ್ನು ತಮ್ಮ ಸೇವಾ ಕಾರ್ಯಕ್ಷೇತ್ರವನ್ನಾಗಿಸಿ ಕೊಂಡು ಜನೋಪಯೋಗಿ ಕೆಲಸಗಳಿಗೆ ಮುನ್ನುಡಿ ಬರೆದ ಮಹನೀಯರಾಗಿ ಕಂಡು ಬಂದ ಎಸ್.ಸಿ.ಚಿಕ್ಕಣ್ಣಗೌಡ ಅವರು ಹೊಸ ಸಹಸ್ರಮಾನದ ಸಹಕಾರ, ಸಹಕಾರಿಗಳ ಬೃಹತ್ ಸಮಾವೇಶ ಪ್ರಶಸ್ತಿಯನ್ನ ಪಡೆಯುವುದರ ಮೂಲಕ ತಾವೂ ಆಯ್ದು ಕೊಂಡ ಕ್ಷೇತ್ರಕ್ಕೆ ಕೀರ್ತಿ ಸಲ್ಲಿಸಿದ್ದಾರೆ.

ರಾಜ್ಯದಲ್ಲಿಯೇ ಅತಿ ಪ್ರತಿಷ್ಠಿತ ಸಹಕಾರ ಸಂಸ್ಥೆಗಳಲ್ಲಿ ಒಂದು ಎನಿಸಿರುವ ಕೃಷ್ಣರಾಜಪೇಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಕೃಷ್ಣರಾಜಪೇಟೆ. ಈ ಸಂಘಕ್ಕೆ 1976ರಲ್ಲಿ ಪ್ರಪ್ರಥಮವಾಗಿ ನಿರ್ದೇಶಕರಾಗಿ ಪಾದಾರ್ಪಣೆ ಮಾಡಿರುತ್ತಾರೆ. (ಸದರಿ ಸಂಘವು ರಾಜ್ಯದಲ್ಲಿಯೇ ಒಂದು ಅತ್ಯುತ್ತಮ ಸಹಕಾರಿ ಸಂಘವೆಂದು ಪರಿಗಣಿಸಲ್ಪಟ್ಟಿರುತ್ತದೆ. ಈ ಸಂಘವು ಸರ್ಕಾರದಿಂದಾಗಲೀ ಯಾವುದೇ ಬ್ಯಾಂಕಿನಿಂದಾಗಲೀ ಯಾವ ರೀತಿಯ ಸಾಲವನ್ನಾಗಲೀ, ಷೇರು ಹಣವನ್ನಾಗಿ ಅಥವಾ ಯಾವುದೇ ಆರ್ಥಿಕ ನೆರವನ್ನು ಪಡೆಯದೇ ಸ್ವಾವಲಂಬಿಯಾಗಿ ಸ್ವಂತ ಬಂಡವಾಳದಿಂದಲೇ ವ್ಯವಹಾರ ನಡೆಸುತ್ತ ಬಂದಿದೆ. ಈ ಸಂಘವು ವ್ಯಾಪಾರ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರೈತಬಾಂಧವರ ಹಿತದೃಷ್ಠಿಯಿಂದ ಗೊಬ್ಬರ, ಬಿತ್ತನೆಬೀಜ, ಕ್ರಿಮಿನಾಶಕ, ಹೆಂಚು, ಜವಳಿ, ಸಿಮೆಂಟ್, ಅಕ್ಕಿಗಿರಣಿ, ಫರ್ನಿಚರ್, ವ್ಯವಸಾಯದ ಮುಟ್ಟುಗಳು, ಕಲ್ಯಾಣ ಮಂಟಪ ಇತ್ಯಾದಿ ವಹಿವಾಟುಗಳ ಜೊತೆಗೆ ಬ್ಯಾಂಕಿಂಗ್ ಶಾಖೆಯನ್ನು ತೆರೆದಿರುತ್ತದೆ. ತಾಲ್ಲೂಕಿಗೆ ಅಗತ್ಯವಾದ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ತಾಲ್ಲೂಕಿನಾದ್ಯಂತ ಸಗಟು ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ. ಈ ಮೇಲ್ಕಂಡ ಎಲ್ಲಾ ವಹಿವಾಟನ್ನು ತನ್ನ ಸ್ವಂತ ಬಂಡವಾಳದಿಂದಲೇ ನಿರ್ವಹಿಸುತ್ತಿದ್ದು ಕಳೆದ 30 ವರ್ಷಗಳಿಂದಲೂ 'ಎ' ತರಗತಿಯ ಆಡಿಟ್ ವರ್ಗೀಕರಣ ಹೊಂದಿದ್ದು ಪ್ರತಿಯೊಂದು ಶಾಖೆಯು ಲಾಭದಾಯಕವಾಗಿ ಕಾರ್ಯನಿರ್ವಹಿಸುತ್ತಿವೆ.) ಈ ರೀತಿಯಲ್ಲಿ ಸಂಸ್ಥೆಯು ಉತ್ತಮವಾಗಿ ಕೆಲಸ ಮಾಡಲು ಶ್ರೀ ಎಸ್.ಸಿ.ಚಿಕ್ಕಣ್ಣಗೌಡರ ಕಾರ್ಯದಕ್ಷತೆ ಗಣನೀಯ ಸೇವಾ ಮನೋಭಾವ, ಅವಿರತ ಕಾರ್ಯ ನಿಷ್ಠೆ, ಸಾಮಾಜಿಕ ಕಳಕಳಿಯು ಮುಖ್ಯಕಾರಣವಾಗಿರುತ್ತದೆ. ಇವರು ಸಹಕಾರಿ ರಂಗದಲ್ಲಿ 1976ರಿಂದ ತಮ್ಮನ್ನು ಗುರುತಿಸಿಕೊಂಡಿದ್ದು ಮೊಟ್ಟಮೊದಲನೆಯದಾಗಿ ಕೆ.ಆರ್.ಪೇಟೆ ಟಿ.ಎ.ಪಿ.ಸಿ.ಎಂ.ಎಸ್‌ನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಗೊಂಡಿದ್ದು ದಿನಾಂಕ: 23-12-1987 ರಿಂದ 1994ರ ವರೆಗೆ 6 ವರ್ಷಗಳ ಕಾಲ ಸತತವಾಗಿ ಅವಿರೋಧವಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ 1994ರಲ್ಲಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದು ನಿರ್ದೇಶಕರಾಗಿ ಮುಂದುವರಿದು ಮತ್ತೆ 1999ರಿಂದ 2005-06 ನೇ ಸಾಲಿನವರೆಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿ ಪ್ರಾಮಾಣಿಕ ಸೇವೆ, ಹಲವು ಅಭಿವೃದ್ಧಿ ಯೋಜನೆ ಸಾರ್ವಜನಿಕ ಬ್ಯಾಂಕಿಂಗ್ ವ್ಯವಸ್ಥೆಗೆ ನಾಂದಿ ಹಾಡಿರುತ್ತಾರೆ.

ಮೇಲಿನ ಸಂಘದಲ್ಲಿ ಸೇವೆ ಜೊತೆಗೆ ಪ್ರಾಥಮಿಕ ಸಹಕಾರ ಸಂಘಗಳಲ್ಲಿಯೂ ಹಾಗೂ ಜಿಲ್ಲಾಮಟ್ಟದ ಸಹಕಾರ ಸಂಘಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. 1976 ರಿಂದ 6 ವರ್ಷಗಳ ಕಾಲ ಶೀಳನೆರೆ VSSN ನಲ್ಲಿ ನಿರ್ದೇಶಕರಾಗಿ, ಮಂಡ್ಯ ಜಿಲ್ಲಾ ಸಹಕಾರ ಯುನಿಯನ್ ನಲ್ಲಿ ನಿರ್ದೇಶಕರಾಗಿ ಗಣನೀಯ ಸೇವೆ ಸಲ್ಲಿಸಿರುತ್ತಾರೆ. ಹಾಗೆ ಮಂಡ್ಯ ಜಿಲ್ಲಾ ಸಹಕಾರ ಕೃಷಿ ಉತ್ಪನ್ನಗಳ ಮಾರುಕಟ್ಟೆ ಒಕ್ಕೂಟದ ನಿರ್ದೇಶಕರಾಗಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಾಮಾಜಿಕ ಕ್ಷೇತ್ರದಲ್ಲಿಯು ಇವರ ಸೇವೆ ಗುರುತರವಾಗಿದೆ. 1995 ರಿಂದ 2000 ದವರೆಗೆ ಕೆ.ಆರ್.ಪೇಟೆ ತಾಲ್ಲೂಕು ಪಂಚಾಯ್ತಿಗೆ ಶೀಳನೆರೆ ಕ್ಷೇತ್ರದಿಂದ ಆಯ್ಕೆಗೊಂಡು ಅನೇಕ ಜನೋಪಯೋಗಿ ಕಾರ್ಯಗಳನ್ನು ಮಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿರುತ್ತರೆ.

ಪಾಂಡವಪುರ ತಾಲ್ಲೂಕು ಪ್ರತಿಷ್ಠಿತ ಕುಂತಿಬೆಟ್ಟದಲ್ಲಿರುವ ಕುವೆಂಪು ಟ್ರಸ್ಟ್ ನ್ನು 1977 ರಲ್ಲಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಗೊಂಡು 1996 ರಿಂದ 1999 ರವರೆಗೆ ಉಪಾಧ್ಯಕ್ಷರಾಗಿ ಸದರಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಜೊತೆಗೆ ಧಾರ್ಮಿಕ ಕ್ಷೇತ್ರದಲ್ಲಿಯು ಸೇವೆ ಸಲ್ಲಿಸಿದ್ದು ಪ್ರತಿಷ್ಠಿತ ಹೇಮಗಿರಿ ಕಲ್ಯಾಣ ವೆಂಕಟರಮಣಸ್ವಾಮಿ ದೇವಸ್ಥಾನದ ಟ್ರಸ್ಟ್‌ನಲ್ಲಿ

ಧರ್ಮದರ್ಶಿಯಾಗಿ, ಕುಂತಿಬೆಟ್ಟದ ಶಂಕರಾನಂದ ಭಾರತಿ ಆಶ್ರಮದ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಜೀರ್ಣೋದ್ಧಾರ ಕಾರ್ಯದಲ್ಲಿ ಶ್ರಮವಹಿಸಿದ್ದಾರೆ.

ಶಿಕ್ಷಣ ರಂಗದಲ್ಲಿ ಇವರ ಸೇವೆ ಅವಿರತವಾಗಿ ಸಾಗುತ್ತಿದೆ. 1976 ರಲ್ಲೇ ಕೃಷ್ಣರಾಜಪೇಟೆ ಒಕ್ಕಲಿಗ ಸಾರ್ವಜನಿಕ ವಿದ್ಯಾರ್ಥಿನಿಲಯದ ನಿರ್ದೇಶಕರಾಗಿ, ಅಧ್ಯಕ್ಷರಾಗಿ, ಸೇವೆ ಸಲ್ಲಿಸಿದ್ದಾರೆ. 1997ರಿಂದ ಶ್ರೀ ಎಸ್.ಎಂ.ಲಿಂಗಪ್ಪ ಸ್ಮಾರಕ ವಿದ್ಯಾರ್ಥಿನಿಲಯದ ಸಂಸ್ಥಾಪಕರಾಗಿ, ಅಧ್ಯಕ್ಷರಾಗಿ, ಗ್ರಾಮಾಂತರ ಪ್ರದೇಶದ ಕೆಲವು ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ಹಾಗೂ ವಸತಿ ಸೌಲಭ್ಯವನ್ನು ಒದಗಿಸಲು ಶ್ರಮಿಸಿದ್ದಾರೆ. ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್‌ನ್ನು 2005–06 ನೇ ಸಾಲಿನಿಂದ ಪೂಜ್ಯ ಎಸ್.ಎಂ.ಲಿಂಗಪ್ಪನವರ ಹೆಸರಿನಲ್ಲಿ ಅಧ್ಯಕ್ಷತೆಯಲ್ಲಿ ಸ್ಥಾಪಿಸಿ ಗಂಡು ಹಾಗೂ ಹೆಣ್ಣು ಮಕ್ಕಳನ್ನು ಒಳಗೊಂಡಂತೆ ಸುಮಾರು 150 ವಿದ್ಯಾರ್ಥಿಗಳಿಗೆ ಊಟ ಹಾಗೂ ವಸತಿ ಸೌಲಭ್ಯ ವ್ಯವಸ್ಥೆಯನ್ನು ನಡೆಸುತ್ತಿದ್ದಾರೆ. ಇದೇ ಟ್ರಸ್ಟ್ ವತಿಯಿಂದ 2006–07 ನೇ ಸಾಲಿನಿಂದ ಆಂಗ್ಲ ಮಾಧ್ಯಮ ಪ್ರೌಢಶಾಲೆಯನ್ನು ಪ್ರಾರಂಭಿಸಿರುತ್ತಾರೆ.

ಸರಳ ಸಜ್ಜನಿಕೆ ಸ್ವಾಭಿಮಾನಗಳ ಖನಿಯಾಗಿದ್ದ ಪೂಜ್ಯ ದಿವಂಗತ ಎಸ್.ಎಂ.ಲಿಂಗಪ್ಪನವರ ಕನಸಿನ ಕೂಸಾಗಿದ್ದ ಗ್ರಾಮಭಾರತಿ ವಿದ್ಯಾಸಂಸ್ಥೆಗೆ ನವಚೈತನ್ಯ ತುಂಬಿ ತಾಲ್ಲೂಕಿನಲ್ಲೇ ಖಾಸಗಿ ಶಾಲೆಗಳ ಹಿರಿಯಣ್ಣ ಎಂಬ ಹೆಸರು ಬರುವಲ್ಲಿ ಅಧ್ಯಕ್ಷ ಸ್ಥಾನದಲ್ಲಿ ನಿಂತು ಅವಿರತವಾಗಿ ಶ್ರಮಿಸಿದ ಎಸ್.ಸಿ.ಚಿಕ್ಕಣ್ಣಗೌಡರ ಪ್ರಾಮಾಣಿಕ ಸೇವೆಯೇ ಕಾರಣವಾಗಿದೆ. 1990ರಲ್ಲಿ ಎಸ್.ಎಂ.ಲಿಂಗಪ್ಪನವರ ಮರಣದ ನಂತರ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ಇವರು ಅಪ್ಪನಿಗೆ ತಕ್ಕ ಮಗನಾಗಿ ಸಂಸ್ಥೆಗೆ ದಕ್ಷತೆ, ಪ್ರಾಮಾಣಿಕತೆಯನ್ನು ಎರಕ ಹೊಯ್ದು 1997ರಲ್ಲಿ 3 ತರಗತಿಗಳಿದ್ದ ಪ್ರೌಢಶಾಲೆ ಇಂದು 9 ತರಗತಿಗಳನ್ನು ಹೊಂದಿದೆ. ಸುಮಾರು 450 ವಿದ್ಯಾರ್ಥಿಗಳು ಪ್ರೌಢಶಾಲಾ ವಿಭಾಗದಲ್ಲೂ, ಹೊಸದಾಗಿ 1997–98ರಲ್ಲಿ ಪ್ರಾರಂಭಿಸಿದ ಹಿರಿಯ ಪ್ರಾಥಮಿಕ ಹಾಗೂ 2003–04ನೇ ಸಾಲಿನಲ್ಲಿ ಪ್ರಾರಂಭಿಸಿದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 200 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. 2004–05ನೇ ಸಾಲಿನಲ್ಲಿ ಏಕಕಾಲಕ್ಕೆ ಬಿ.ಇಡಿ ಹಾಗೂ ಡಿ.ಇಡಿ ಗೆ ಹಾಗೂ 2005–06ನೇ ಸಾಲಿನಲ್ಲಿ ಪದವಿ ಪೂರ್ವ ವಿಭಾಗದ ಕಲೆ ಹಾಗೂ ವಿಜ್ಞಾನ ವಿಭಾಗಗಳಿಗೆ ಸರ್ಕಾರದಿಂದ ಅನುಮತಿ ಪಡೆದು ಈ ವಿಭಾಗಗಳಿಂದ ಸುಮಾರು 300 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇವರ ಅಧ್ಯಕ್ಷತೆಯಲ್ಲಿ ಮೈಸೂರು–ಚನ್ನರಾಯಪಟ್ಟಣ ರಸ್ತೆಯಲ್ಲಿ 3 ಎಕರೆ ವಿಶಾಲ ಮೈದಾನದಲ್ಲಿ ಸುಮಾರು 50 ಸುಸಜ್ಜಿತ ಬೋಧನಾ ಕೊಠಡಿಗಳನ್ನೊಳಗೊಂಡ ನೂತನ ರೂಪ ಪಡೆದಿರುವ ಗ್ರಾಮಭಾರತಿ ವಿದ್ಯಾಸಂಸ್ಥೆಯಲ್ಲಿ ಸುಮಾರು 50 ಮಂದಿಗೆ ಉದ್ಯೋಗಾವಕಾಶ ದೊರಕಿದೆ.

ತಮ್ಮ ಕಾಯಕ ಜೀವನವೇ ಸಮಾಜ ಸೇವೆಯ ಜೀವ ಜೀವಾಳವೆಂದು ನಂಬಿ ಬದುಕಿದ್ದ ಶ್ರೀಯುತ ಎಸ್.ಸಿ.ಚಿಕ್ಕಣ್ಣಗೌಡರು ದಿನಾಂಕ: 18–12–2007ರಂದು ಪಂಚಭೂತಗಳಲ್ಲಿ ಲೀನವಾದರು.

ಹೀಗೆ ಸನ್ಮಾನ್ಯ ಅಧ್ಯಕ್ಷರ ಹೋರಾಟಗಳು, ಪೂಜ್ಯರ ಆಶೀರ್ವಾದ, ಜನಸಾಮಾನ್ಯರ ಅರಿಕೆ ಫಲದಿಂದ ಸಹಕಾರಗೊಳ್ಳುತ್ತಿರುವುದು ಎಲ್ಲರಿಗೂ ಸಂತಸ ತಂದಿದೆ. ಹೊಸ ಹೊಸ ಕನಸುಗಳು ಇವರ ಅಂತರಂಗದಲ್ಲಿ ಚಿಗುರೊಡೆಯುತ್ತಿವೆ. ಅವುಗಳಲ್ಲಿ ಗ್ರಾಮಭಾರತಿ ವಿದ್ಯಾಸಂಸ್ಥೆಯ ನಂದನವನದಲ್ಲಿಯೇ ಎಂಬುದು ಅಪ್ಪಟ ಸತ್ಯ. ಹೀಗೆಯೇ ಈ ವಿದ್ಯಾಸಂಸ್ಥೆ ಹಿಮಾಲಯದೆತ್ತರಕ್ಕೇರಲೆಂದು ಹಾರೈಸೋಣ.

ದಿನಾಂಕ : 20–10–2023 **ಪ್ರಕಾಶಕರು**



ಸಾಹಿತ್ಯ ಸಂಭ್ರಮ – ಉದ್ಘಾಟನಾ ಸಮಾರಂಭದ ದೃಶ್ಯಗಳು










ಅತಿಥಿಗಳ ನುಡಿಗಳು ಮತ್ತು ವಿಚಾರ ಮಂಡನೆ





ವಿಚಾರಗೋಷ್ಠಿಯ ಅಧ್ಯಕ್ಷೀಯ ನುಡಿ



## ಸಾಹಿತ್ಯ ಸಂಭ್ರಮ ಪುಸ್ತಕ ಬಿಡುಗಡೆಯ ದೃಶ್ಯಗಳು

## 20–10–2023



## ಪ್ರಬಂಧ ಮಂಡಿಸಿದ ಪ್ರಶಿಕ್ಷಣಾರ್ಥಿ ಸಂಪನ್ಮೂಲ ವ್ಯಕ್ತಿಗಳು



# ಕಾರ್ಯಕ್ರಮದ ಪತ್ರಿಕಾ ವರದಿ

## ಅಧ್ಯಯನದಿಂದ ಸಾಹಿತ್ಯ ಸಿದ್ಧಿ

### ಕೆ.ಆರ್.ಪೇಟೆ: ಬಿ.ಇಡಿ ವಿದ್ಯಾರ್ಥಿಗಳಿಗಾಗಿ ಮೂರು ದಿನಗಳ ಸಾಹಿತ್ಯ ಸಂಭ್ರಮ

ಪ್ರಜಾವಾಣಿ ವಾರ್ತೆ

ಕೆ.ಆರ್.ಪೇಟೆ: ಸಾಹಿತ್ಯ ಎಂಬುದು [illegible] ಎಂದು ಸಾಹಿತಿ ಶಿ. ಕುಮಾರಸ್ವಾಮಿ ಹೇಳಿದರು.

[illegible]



ಕೆ.ಆರ್.ಪೇಟೆ ಪಟ್ಟಣದ ಎಸ್.ಎಂ. ಲಿಂಗಪ್ಪ ಬಿಎಡ್ ಕಾಲೇಜಿನಲ್ಲಿ ನಡೆಯುತ್ತಿರುವ ಮೂರು ದಿನಗಳ ಸಾಹಿತ್ಯ ಸಂಭ್ರಮಕ್ಕೆ ವಿದ್ಯಾಸಂಸ್ಥೆಯ ಅಧ್ಯಕ್ಷ ಎಸ್.ಸಿ.ಕಿರಣ್ ಕುಮಾರ್ ಚಾಲನೆ ನೀಡಿದರು.

ಸ್ವತಂತ್ರ ಸಿದ್ದಲಿಂಗೇಶ್ವರರು, [illegible] ರಂಗಸ್ವಾಮಿ ಭಟ್ಟರು, ವಿಚಾರವಾದಿ ಎ. ಎನ್. ಮೂರ್ತಿರಾಯರ ಕವಿ ಕೆ. ಎಸ್. ನರಸಿಂಹಸ್ವಾಮಿಯವರು ಈ ನಾಡಿನ ಸಾಹಿತ್ಯ ಕಣಜವನ್ನು ಸಮೃದ್ಧಗೊಳಿಸಿದವರು. ಅಂತಹ ಸಾಹಿತಿಗಳು ಬರೆದ ಕವಿತೆ, ಕತೆಗಳ ಪ್ರಮುಖ ಸಾಲುಗಳ ಕುರಿತು ಚರ್ಚೆ ನಡೆಸಿದರೂ ಅಪಾರ ಜ್ಞಾನ ದೊರೆಯುತ್ತದೆ ಎಂದರು.

ಗ್ರಾಮಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷ ಎಸ್. ಸಿ. ಕಿರಣ್ ಕುಮಾರ್ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿ, ವಿದ್ಯಾರ್ಥಿಗಳು ಈಗನಿಂದಲೇ ನಮ್ಮ ಹಿರಿಯ ಸಾಹಿತಿಗಳ ಕೃತಿಗಳನ್ನು ಓದುವುದು ಮತ್ತು ಆ ಬಗ್ಗೆ ಬರೆಯುವುದನ್ನು ರೂಢಿಸಿದರೆ ಭವಿಷ್ಯದಲ್ಲಿ ಸಾಹಿತಿಯಾಗಿ ರೂಪುಗೊಳ್ಳಬಹುದು ಎಂದರು.

ಸಮಾರೋಪ ಭಾಷಣ ಮಾಡಿದ ಸಾಹಿತಿ ಕೆ.ಎಸ್.ಸೋಮಶೇಖರ್ , ಯಾರಿಗೆ ಸಾಹಿತ್ಯ ಸಂಸ್ಕೃತಿಯ ಒಲವು ಇರುತ್ತದೋ ಅವರಿಗೆ ಅದು ಸಿದ್ಧಿಸುತ್ತದೆ ಎಂದರು. ಅತ್ತಿಗುಪ್ಪೆ ಸಾಹಿತ್ಯ ಬಳಗದ ಅಧ್ಯಕ್ಷ ಮಾರೇನಹಳ್ಳಿ ಲೋಕೇಶ್ ಮತ್ತು ಬಿಎಡ್ ಕಾಲೇಜಿನ ಪ್ರಾಂಶುಪಾಲ ಪಿ. ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಎರಡನೇ ದಿನದ ಗೋಷ್ಠಿಯ ಅಧ್ಯಕ್ಷತೆಯನ್ನು ಉಪನ್ಯಾಸಕ ಆ. ನಾ. ಶ್ಯಾಮೇಶ್ , ಮೂರನೇ ದಿನ ಶಿಕ್ಷಕ ಡಾ.ಬಿ.ಸಿ. ವಿಜಯಕುಮಾರ್ ವಹಿಸಿದ್ದರು. ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ಲೇಖಕಿ ಎಂ. ನೇತ್ರಾವತಿ ,ಪ್ರಾಧ್ಯಾಪಕರಾದ ಕೆ.ಎಸ್.

### ವಿದ್ಯಾರ್ಥಿಗಳಿಗಾಗಿ ವಿಭಿನ್ನ ಪ್ರಯತ್ನ

ತಾಲ್ಲೂಕಿನ ಸಾಹಿತಿಗಳ ಕೃತಿಗಳ ಬಗ್ಗೆ ಪ್ರಬಂಧ ಮಂಡಿಸಿದ ವಿದ್ಯಾರ್ಥಿಗಳು ಸೋಮವಾರದಿಂದ ಬುಧವಾರದವರೆಗೆ ಬಿಇಡಿ ವಿದ್ಯಾರ್ಥಿಗಳಿಗಾಗಿ ನಡೆದ ಈ ಸಾಹಿತ್ಯ ಸಂಭ್ರಮದ ವಿಚಾರ ಗೋಷ್ಠಿ ವಿಭಿನ್ನ ಪ್ರಯತ್ನ ಭಾಗವಾದರು.

ಒಂದು ತಿಂಗಳ ಮುಂಚೆಯೇ ವಿಷಯಗಳನ್ನು ಕೊಟ್ಟು ಅವರಿಂದ ಪ್ರಬಂಧ ಬರೆಯಿಸಿ, ಮಂಡಿಸಲು ಅವಕಾಶ ನೀಡಲಾಗಿತ್ತು. ವಿದ್ಯಾರ್ಥಿಗಳು ಸಾಹಿತ್ಯ ಕೃತಿಗಳನ್ನು ಓದಲು ಅವಕಾಶ ದೊರೆತಿದ್ದಲ್ಲದೆ ವಿಚಾರ ಧಾರೆ ಮಂಡಿಸಲು ಅವಕಾಶನೀಡಲಾಗಿತ್ತು, ಖ್ಯಾತ ಸಾಹಿತಿಗಳ ಅಧ್ಯಕ್ಷತೆಯಲ್ಲಿ ಪ್ರತಿ ಗೋಷ್ಠಿಯಲ್ಲೂ ಇಬ್ಬರು ವಿದ್ಯಾರ್ಥಿಗಳು ವಿಚಾರ ಮಂಡಿಸಿದರು. ಮೊದಲ ದಿನ ಬಿಇಡಿ ವಿದ್ಯಾರ್ಥಿಗಳಾದ ಜೆ. ಬಿ.



ಸಾಹಿತ್ಯ ಸಂಭ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು.

ಬಂಡಿಹೊಳೆ ರಂಗಸ್ವಾಮಿ ಭಟ್ಟರ 'ಹುಟ್ಟಿದ ಹಳ್ಳಿ' ಬಗ್ಗೆ ವಿಚಾರ ಮಂಡಿಸಿದರು. 2ನೇ ದಿನ ಎ. ಎನ್. ಮೂರ್ತಿರಾಯರ ಆಯ್ದ ಲಲಿತ ಪ್ರಬಂಧಗಳ ಬಗ್ಗೆ ಅರ್ಪಿತಾ ಮತ್ತು ಶಿಲ್ಪಾ , ಮೈಸೂರು ಮಲ್ಲಿಗೆ ಕವಿ ಕೆ. ಎಸ್. ನರಸಿಂಹಸ್ವಾಮಿ ಅವರ ಆಯ್ದ [illegible] ಪ್ರಿಯಾ ಪ್ರಬಂಧ ಮಂಡಿಸಿದರು. 3ನೇ ದಿನ ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್ ಅವರ ಕಥಾ ಸಂಕಲನ '[illegible]' ಮತ್ತು ಆಯ್ದ ಕತೆಗಳ ಬಗ್ಗೆ ಎಂ. ಪಿ. ಯೋಗೇಶ್ ಮತ್ತು ಆರತಿ , ಸಾಹಿತಿ ಮಾರೇನಹಳ್ಳಿ ಲೋಕೇಶ್ ಬರೆದ [illegible]

---

## 'ಶಿಕ್ಷಕರು ನಿತ್ಯ ಅಧ್ಯಯನಶೀಲರಾಗಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪೇಟೆ: 'ಶಿಕ್ಷಕರಾಗ ಬಯಸುವವರು ನಾಡು ನುಡಿ ಸಂಸ್ಕೃತಿ ಸಾಹಿತ್ಯವನ್ನು ನಿತ್ಯ ಅಧ್ಯಯನ ಮಾಡುವುದರ ಮೂಲಕ ವಿದ್ಯಾರ್ಥಿ ಸಮುದಾಯವನ್ನು ಸಂಪನ್ನರಿತವನ್ನಾಗಿಸಬೇಕು' ಎಂದು ಹಿರಿಯ ಸಾಹಿತಿ ಶಿ. ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಗ್ರಾಮ ಭಾರತಿ ವಿದ್ಯಾ ಸಂಸ್ಥೆಯ ಸಾಹುಕಾರ್ ಚಿಕ್ಕಣ್ಣಗೌಡ ಸಭಾಂಗಣದಲ್ಲಿ ನಡೆದಿದ್ದ ಮೂರು ದಿನಗಳ ಸಾಹಿತ್ಯ ಸಂಭ್ರಮ, ವಿಚಾರಗೋಷ್ಠಿ ಒಳಗೊಂಡ 'ಸಾಹಿತ್ಯ ಸಂಭ್ರಮ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ಉದಯರವಿ ಟ್ರಸ್ಟ್ ಅಧ್ಯಕ್ಷ ಕೆ ಎಸ್ ಸೋಮಶೇಖರ್ ಮಾತನಾಡಿ, 'ವಿದ್ಯಾರ್ಥಿ ಜೀವನದ ಸಾಂಸ್ಕೃತಿಕ ಪ್ರಜ್ಞೆ ಭವಿಷ್ಯದ ಜೀವನಕ್ಕೆ ಬುನಾದಿಯಾಗಬೇಕು' ಎಂದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಮ ಭಾರತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕಿರಣ್ ಕುಮಾರ್ ಅವರು, 'ಶಿಕ್ಷಣ ಕ್ಷೇತ್ರದಲ್ಲಿ ಸಾಹಿತ್ಯ ಸಂಗೀತ ಕ್ರೀಡಾ ಚಟುವಟಿಕೆಗಳು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರವಾಗುತ್ತದೆ' ಎಂದರು.



ಕೆ.ಆರ್.ಪೇಟೆಯ ಗ್ರಾಮ ಭಾರತಿ ವಿದ್ಯಾ ಸಂಸ್ಥೆಯ ಸಾಹುಕಾರ್ ಚಿಕ್ಕಣ್ಣಗೌಡ ಸಭಾಂಗಣದಲ್ಲಿ 'ಸಾಹಿತ್ಯ ಸಂಭ್ರಮ' ಪುಸ್ತಕವನ್ನು ಸಾಹಿತಿ ಶಿ.ಕುಮಾರಸ್ವಾಮಿ ಬಿಡುಗಡೆ ಮಾಡಿದರು

ಅತ್ತಿಗುಪ್ಪೆ ಸಾಹಿತ್ಯ ಬಳಗದಿಂದ ಎಸ್.ಎಂ.ಲಿಂಗಪ್ಪ ಕಾಲೇಜಿನ ಬಿಎಡ್ ವಿದ್ಯಾರ್ಥಿಗಳಿಗಾಗಿ ಹಿರಿಯ ಸಾಹಿತಿ ಸ್ವತಂತ್ರ ಸಿದ್ಧಲಿಂಗೇಶ್ವರ, ಅರ್ಚಕ ರಂಗಸ್ವಾಮಿ ಭಟ್ಟ, ಕೆ.ಎಸ್.ನರಸಿಂಹಸ್ವಾಮಿ, ಎ.ಎನ್. ಮೂರ್ತಿರಾಯರು, ಸಮಕಾಲೀನ ಸಾಹಿತಿ ಶಿ.ಕುಮಾರಸ್ವಾಮಿ, ಬಲ್ಲೇ ಮಂಜುನಾಥ್, ಮಾರೇ ಲೋಕೇಶ್ ಬರೆದ ಸಾಹಿತ್ಯ ಕೃತಿ ವಿದ್ಯಾರ್ಥಿಗಳು ವಿಚಾರ ಮಾಡಿದ್ದರು.

ವಿವಿಧ ಗೋ ಮಾತನಾಡಿದ ಸಂಪನ್ಮೂಲ ಭಾಷಣ, ಅಭಿಪ್ರಾಯ ಲೇಖಕರ ಅನಿಸಿಕೆಗಳನ್ನೊಳ ಭಾಷಣವನ್ನು ಮುದ್ರಿಸಿಕೊಳ್ಳ ಇವುಗಳನ್ನು ಲೇಖಕ ಮಾರ ಲೋಕೇಶ್ ಸಂಪಾದ ಗ್ರಾಮಭಾರತಿ ವಿದ್ಯಾ ಹೊರತಂದಿದ್ದು ಹಿರಿಯ ಸಾ ಕುಮಾರಸ್ವಾಮಿ ಬಿಡುಗಡೆಗೊ

ಎಸ್.ಎಂ.ಲಿಂಗಪ್ಪ ಕಾಲೇಜಿನ ಪ್ರಾಂಶುಪಾಲ ಪಿ. ಸಂಸ್ಥೆಯ ಕಾರ್ಯದರ್ಶಿ ಪುಟ್ಟ ಕೃತಿಯ ಸಂಪಾದಕ ಮಾ ಲೋಕೇಶ್ , ಕೆ.ಜಿ.ನಾಗರ ಚನ್ನೇಗೌಡ, ಚಂದ್ರು ಮತ್ತು ವಿದ್ಯಾರ್ಥಿಗಳು ಇದ್ದರು.

Bengaluru

# ಪರಿವಿಡಿ


1. ಸಾಹಿತ್ಯ ಸಂಭ್ರಮ : ಒಂದು ವಿಶಿಷ್ಟ ಪರಿಕಲ್ಪನೆ 19
**– ಬಲ್ಲೇನಹಳ್ಳಿ ಮಂಜುನಾಥ್**

2. ಸಾರ್ಥಕತೆಯ ಸಾಹಿತ್ಯ ಸಂಭ್ರಮ 22
**– ಡಾ. ಅತ್ತಿಗುಪ್ಪೆ ಶ್ಯಾಮೇಶ್**

3. ಸಾಹಿತ್ಯ ಸಂಭ್ರಮದ ಮೊದಲ ಹೆಜ್ಜೆ 25
**– ಡಾ.ಬಿ.ಸಿ.ವಿಜಯಕುಮಾರ್**

4. ನಿಜಗುರು ಸ್ವತಂತ್ರ ಸಿದ್ದಲಿಂಗೇಶ್ವರರ ಆಯ್ದ ವಚನಗಳು 30
**– ಸತೀಶ್ ಜೆ**
**– ಸಿಂಧು ಎಚ್.ಎನ್**

5. ಅರ್ಚಕ ರಂಗಸ್ವಾಮಿಭಟ್ಟರ ಹುಟ್ಟಿದಹಳ್ಳಿ 36
**– ಸಹನಾ ಡಿ**
**– ಸಚಿನ್ ಕೆ**

6. ಅನಮೂರ್ತಿರಾಯರ ಎರಡು ಪ್ರಬಂಧ ಕೃತಿಗಳು 42
**– ಶಿಲ್ಪಾ ಕೆ.ಎಸ್.**
**– ಅರ್ಪಿತ ಎಂ.ಎನ್.**

7. ಕೆ.ಎಸ್.ನರಸಿಂಹಸ್ವಾಮಿ ಅವರ ಆಯ್ದ ಕವನಗಳು 62
**– ಶಾರದಾ ಎಸ್**

8. ಶಿ.ಕುಮಾರಸ್ವಾಮಿ ಅವರ ಆಯ್ದ ಬಲ್ಲೇಶ್ವರ ವಚನಗಳು 76
**ಪ್ರಿಯಾ ಸಿ.ಬಿ**

9. ಬಲ್ಲೇನಹಳ್ಳಿ ಮಂಜುನಾಥ ಅವರ
ವಸ್ತ್ರಾಪಹರಣ ಮತ್ತು ಇತರ ಕಥೆಗಳು 81
**– ಯೋಗೇಶ್ ಎಂ.ಪಿ**

10. ಮಾರೇನಹಳ್ಳಿ ಲೋಕೇಶ್ ಅವರ ಮಕ್ಕಳ ಸಾಹಿತ್ಯ 86
**– ಪೂರ್ಣಿಮಾ ಆರ್**
**– ದೀಪ್ತಿ ಎನ್**

11. ಸಾಹಿತ್ಯ ಸಂಭ್ರಮಾವಲೋಕನ 95
**– ಶಿ.ಕುಮಾರಸ್ವಾಮಿ**

12. ಅನುಬಂಧ 97

# ಪ್ರಧಾನ ಸಂಪಾದಕರ ನುಡಿ

"ಸಾಹಿತ್ಯ ಸಂಭ್ರಮ–2023" ಪರಿಕಲ್ಪನೆ ಹುಟ್ಟಿಕೊಂಡಿದ್ದು ಎಲ್ಲಿಂದ ಎಂಬುದನ್ನು ತಿಳಿಸಬಯಸುತ್ತೇನೆ. ಕೃಷ್ಣರಾಜಪೇಟೆ ತಾಲ್ಲೂಕು ಆರನೇ ಕನ್ನಡ ಸಾಹಿತ್ಯ ಸಮ್ಮೇಳನದ ದಿನದಂದು ಬೆಳಿಗ್ಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆಗಂದು ಕೃಷ್ಣರಾಜಪೇಟೆಯ ಟೌನ್‌ನ ಬೊಮ್ಮೇಗೌಡರ ವೃತ್ತ (ಐ.ಬಿ. ಸರ್ಕಲ್) ದಿಂದ ಬೆಳಿಗ್ಗೆ 10 ಗಂಟೆಗೆ ಹೊರಡಲು ಎಲ್ಲಾ ಸಾಹಿತ್ಯಾಸಕ್ತರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಮಾವಣೆಗೊಂಡಿದ್ದೆವು. ಆದರೆ ಅಂದಿನ ಶಾಸಕರು ಮತ್ತು ಮಂತ್ರಿವರ್ಯರು ಸ್ವಲ್ಪ ತಡವಾಗಿ ಬಂದಿದ್ದರಿಂದ ನಾನು ಮತ್ತು ಮಾರೇನಹಳ್ಳಿ ಲೋಕೇಶ್ ಅವರು ಅಲ್ಲೇ ಪ್ರವಾಸಿ ಮಂದಿರದ ಹಳೇ ಕಟ್ಟಡದ ಜಗುಲಿಯ ಮೇಲೆ ಕುಳಿತು ಮಾತನಾಡಲಾರಂಭಿಸಿದೆವು.

ಮೊದಲಿಗೆ ಲೋಕಾಭಿರಾಮವಾಗಿ ಪ್ರಾರಂಭವಾದ ಮಾತು ನಂತರ ಸಾಹಿತ್ಯ ಕ್ಷೇತ್ರದ ಕಡೆಗೆ ಹೊರಳಿತು. ಆಗ ಅವರಿಂದ ಕೃಷ್ಣರಾಜಪೇಟೆ ತಾಲ್ಲೂಕಿನ ಆಯ್ದ ಸಾಹಿತಿಗಳ ಕೃತಿಗಳ ಕುರಿತು ಬಿ.ಇಡಿ. ವಿದ್ಯಾರ್ಥಿಗಳಿಂದ ಪ್ರಬಂಧ ಮಂಡನೆಯ ಬಗ್ಗೆ ಪ್ರಸ್ತಾಪಿಸಲಾಗಿ, ಅಲ್ಲೇ ಈ ಕಾರ್ಯಕ್ರಮವನ್ನು ಮಾಡಬಹುದೆನಿಸಿ, ಲೋಕೇಶ್ ಅವರಿಗೆ ಸಂಪೂರ್ಣ ಸಹಕಾರ ನೀಡತ್ತೇನೆ ನೀವು ಮುಂದುವರೆಯಿರಿ ಎಂದೆನು. ಅಂದಿನ ಮಾತುಕತೆಯ ಫಲಶೃತಿಯೇ 'ಸಾಹಿತ್ಯ ಸಂಭ್ರಮ–2023'. ಈ ಕಾರ್ಯಕ್ರಮವನ್ನು ಅತ್ತಿಗುಪ್ಪೆ ಸಾಹಿತ್ಯ ಬಳಗ, ಅಕ್ಷಯ ಪ್ರಕಾಶನ ಮತ್ತು ಗ್ರಾಮ ಭಾರತಿ ವಿದ್ಯಾಸಂಸ್ಥೆಗಳು ಜೊತೆಗೂಡಿ ಯಶಸ್ವಿಗೊಳಿಸಿದ್ದು ಹರ್ಷ ತಂದಿದೆ.

ಮುಂದುವರೆದು, ಸಾಕಷ್ಟು ಪೂರ್ವ ತಯಾರಿಯೊಂದಿಗೆ ಮೂರು ದಿನಗಳ ಕಾಲ ಜರುಗಿದ ಈ ಪ್ರಬಂಧ ಮಂಡನೆ ಕಾರ್ಯಕ್ರಮದಲ್ಲಿ ಮಂಡಿತವಾದ ಎಲ್ಲಾ ಪ್ರಬಂಧಗಳನ್ನು ಬಿ.ಇಡಿ. ಕಾಲೇಜಿನ ಸಂಸ್ಥಾಪಕರಾದ ಎಸ್.ಸಿ.ಚಿಕ್ಕಣಗೌಡರ

ಸ್ಮರಣಾರ್ಥ ಪುಸ್ತಕ ಹೊರತರಲು ತೀರ್ಮಾನಿಸಿ, ಅದಕ್ಕೆ ಬೇಕಾದ ಎಲ್ಲಾ ಸಿದ್ದತೆಗಳನ್ನು ಮಾಡಲು ಮಾರೇನಹಳ್ಳಿ ಲೋಕೇಶ್ ಅವರೊಂದಿಗೆ ಚರ್ಚಿಸಲಾಗಿ ಅದರಂತೆ ಅವರು ಕಾರ್ಯ ಪ್ರವೃತ್ತರಾಗಿದ್ದರ ಫಲವೇ ಈ 'ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣ ಸಾಹಿತ್ಯ ಸಂಭ್ರಮ – ಮಾಲಿಕೆ ಒಂದು'. ಈ ಕೃತಿಯ ಒಳಗಿನ ಪ್ರಬಂಧಗಳನ್ನು ವಿಶ್ಲೇಷಣೆ ಮಾಡುಲು ಹೋಗುವುದಿಲ್ಲ. ಸಾಹಿತ್ಯ ಸಂಭ್ರಮ ಪ್ರಾಯೋಗಿಕ ಕಾರ್ಯಕ್ರಮವಾಗಿದ್ದರಿಂದ ದಾಖಲಿಸುವ ಪ್ರಯತ್ನ ನಮ್ಮದಾಗಿದೆ.

ಕಾರ್ಯಕ್ರಮವನ್ನು ರೂಪಿಸಿದ ಮಾರೇನಹಳ್ಳಿ ಲೋಕೇಶ್ ಅವರ ಬಗ್ಗೆ ಎರಡು ಸಾಲುಗಳನ್ನು ಹೇಳಲೇಬೇಕು. ಕೃಷ್ಣರಾಜಪೇಟೆಯಲ್ಲಿ ಸದ್ಯ ನಾನು ಕಂಡಂತೆ ಯಾವ ಸ್ವಹಿತಾಸಕ್ತಿಯಿಲ್ಲದೆ ಮತ್ತು ಯಾರಿಂದಲೂ ಯಾವ ತೆರನಾದ ಪ್ರತಿಫಲಾಪೇಕ್ಷೆಯಿಲ್ಲದೆ ಸಾಹಿತ್ಯ ಕೆಲಸಗಳನ್ನು ಮಾಡುತ್ತಾ, ಯುವ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸಾಹಿತ್ಯದ ಅಭಿರುಚಿ ಮೂಡಿಸಿ, ಅವರಿಂದ ಸಾಹಿತ್ಯ ಕೃಷಿ ಮಾಡಿಸುತ್ತಿರುವವರೆಂದರೆ ಅದು ಮಾರೇನಹಳ್ಳಿ ಲೋಕೇಶ್ ಮಾತ್ರ ಎಂದರೆ ತಪ್ಪಾಗಲಾರದು.

***'ಮಾತು ಬರುವುದು ಎಂದು ಮಾತಾಡುವುದು ಬೇಡ;***
***ಒಂದು ಮಾತಿಗೆ ಎರಡು ಅರ್ಥವುಂಟು.***
***ಎದುರಿಗಿರುವವ ಕೂಡ ಮಾತ ಬಲ್ಲವ ಗೆಳೆಯ;***
***ಬರಿದೆ ಆಡುವ ಮಾತಿಗರ್ಥವಿಲ್ಲ.'***

ಮಲ್ಲಿಗೆ ಕವಿ ಕೆ.ಎಸ್.ನರಸಿಂಹಸ್ವಾಮಿಯವರ ಈ ಮೇಲಿನ ಸಾಲುಗಳು ನನ್ನ ಅಭಿಪ್ರಾಯದಲ್ಲಿ ಮಾರೇನಹಳ್ಳಿ ಲೋಕೇಶ್ ಅವರ ಸ್ವಭಾವಕ್ಕೆ ಅನ್ವರ್ಥವಾಗಿದೆ ಎಂದರೆ ತಪ್ಪಿಲ್ಲ. ಅವರ ಸಾಹಿತ್ಯ ಚಟುವಟಿಕೆಗಳಿಗೆ ಹೀಗೆಯೇ ಮುಂದೆಯೂ ಸಹ ಗ್ರಾಮಭಾರತಿ ವಿದ್ಯಾಸಂಸ್ಥೆ ಸದಾ ಅವರೊಂದಿಗಿರುತ್ತದೆ.

ಈ ವಿನೂತನ ಹಾಗೂ ವಿಶಿಷ್ಟವಾದ ಕಾರ್ಯಕ್ರಮವನ್ನು ಪ್ರತಿ ವರ್ಷವೂ ಆಯೋಜಿಸುವ ಮೂಲಕ ನಮ್ಮ ಬಿ.ಇಡಿ. ವಿದ್ಯಾರ್ಥಿಗಳಿಗೆ ವೇದಿಕೆ ಕಲ್ಪಸಬೇಕಾಗಿ ಕೋರುತ್ತೇನೆ.

**ಎಸ್.ಸಿ.ಕಿರಣ್‌ಕುಮಾರ್**
ಅಧ್ಯಕ್ಷರು
ಗ್ರಾಮ ಭಾರತಿ ವಿದ್ಯಾಸಂಸ್ಥೆ
ಕೃಷ್ಣರಾಜಪೇಟೆ
ಮೊ : 9242877708

# ಸಂಪಾದಕರ ನುಡಿ

ಕನ್ನಡದ ಮನಸುಗಳನ್ನು ಕಟ್ಟುವುದೆಂದರೆ ಕೇವಲ ಭಾಷಣ ಮಾಡುವುದೆ? ನಾನು ಹೇಳುತ್ತೇನೆ, ನೀನು ಕೇಳು ಎನ್ನುವುದೆ? ಯಾವುದು? ನನ್ನ ಪ್ರಕಾರ ಪ್ರತಿಯೊಬ್ಬರು ಕನ್ನಡದ ಮನಸ್ಥಿತಿಯನ್ನು ಅರಿಯುವಂತೆ ಮಾಡುವುದು, ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಲು ಪ್ರೇರೇಪಣೆ ನೀಡುವುದು, ಓದಿದ ವಿಷಯಗಳನ್ನು ಮಂಡನೆ ಮಾಡಿಸಿ, ಮುಖಾಮುಖಿಯಾಗಿಸಿ, ಅವರಿಗೆ ಮಾರ್ಗದರ್ಶನ ಮಾಡುವುದು. ಅಭಿವ್ಯಕ್ತಿಯ ಆಯಾಮಗಳನ್ನು ಸರಳವಾಗಿ ಪರಿಚಯ ಮಾಡಿಕೊಟ್ಟು ನಾಡು ನುಡಿ ಸಂಸ್ಕೃತಿ ಕಟ್ಟುವುದರಲ್ಲಿ ಈ ಮೂಲಕ ಸಕ್ರಿಯರಾಗಿಸುವುದು ಉಚಿತವೆಂದು ನನಗನ್ನಿಸಿತು. ಕನ್ನಡ ಸಾಹಿತ್ಯ ಪ್ರತಿಯೊಬ್ಬರ ಸಂಭ್ರಮವಾಗಬೇಕು. ಇರುವಲ್ಲೇ ಆತ ಕನ್ನಡವನ್ನು ಆಸ್ವಾದಿಸಬೇಕು, ಆರಾಧಿಸಬೇಕು. ಕನ್ನಡದ ಕಹಳೆಯನ್ನು ಊದಲು ಮೊದಲು ಓದುವ ಅವಕಾಶವನ್ನು ಕಲ್ಪಿಸಿಕೊಡುವ ಉದಾರ ಹೃದಯ ಶ್ರೀಮಂತಿಕೆ ನಮ್ಮದಾಗಬೇಕು. ಇಂತಹ ಕನ್ನಡ ಕಟ್ಟುವ ಮನಸ್ಥಿತಿಯ ಕೈಂಕರ್ಯತೆಯಾರಲ್ಲಾದರೂ ಇದೆಯೆಂದರೆ ಅದು ಗ್ರಾಮಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷರೂ, ಸ್ನೇಹಿತರೂ ಆದ ಎಸ್.ಸಿ. ಕಿರಣ್‌ಕುಮಾರ್ ಅವರಿಗಿದೆ ಎಂದರೆ ತಪ್ಪಾಗಲಾರದು.

ಕನ್ನಡ ನಾಡು ನುಡಿ ಸಾಹಿತ್ಯ ಶೈಕ್ಷಣಿಕ ವಿಚಾರಗಳನ್ನು ಕುರಿತು ಯಾವುದೇ ಕಾರ್ಯಕ್ರಮಗಳನ್ನು ಮಾಡಿದರೂ ನನ್ನ ಸಂಪೂರ್ಣ ಸಹಕಾರ, ಬೆಂಬಲ ನೀಡುವ ಅವರ ನಿಲುವಿನಾಶಯದಂತೆ ಕಾರ್ಯಕ್ರಮ ರೂಪಿಸಿಕೊಂಡು, ನಿರ್ವಹಿಸಿಕೊಂಡು ಬಂದ ಸಾಲಿನಲ್ಲೂ ಈ ಸಾಹಿತ್ಯ ಸಂಭ್ರಮ ನಿಲ್ಲುತ್ತದೆ. ಎಸ್. ಎಂ. ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದ ಬಿಇಡಿ ಪ್ರಶಿಕ್ಷಣಾರ್ಥಿಗಳಿಂದ ಮೊದಲ ಸಲ ವಿಚಾರಗೋಷ್ಠಿ ಏರ್ಪಡಿಸಿ, ಕೃಷ್ಣರಾಜಪೇಟೆ ತಾಲ್ಲೂಕಿನ ಸಾಹಿತಿಗಳ ಆಯ್ದ ಸಾಹಿತ್ಯ ಭಾಗದ

ವಿಷಯಗಳನ್ನು ನೀಡಿ ಪ್ರಬಂಧ ಸಿದ್ಧ ಮಾಡಿಸಿ ಮಂಡನೆಗೆ ಅವಕಾಶ ಕಲ್ಪಿಸಿದ ಕಾರ್ಯಕ್ರಮವೇ, "ಸಾಹಿತ್ಯ ಸಂಭ್ರಮ." ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿಗಳೇ ವಿಚಾರ ಮಂಡಿಸಿದ, ಸಂವಾದ ಮಾಡಿದ ಪ್ರಾಯೋಗಿಕ, ವಿನೂತನ ಕಾರ್ಯಕ್ರಮವಾಗಿ ಮೂರು ದಿನಗಳ ತನಕ ಮೂಡಿ ಬಂತು. ಪ್ರಶಿಕ್ಷಣಾರ್ಥಿಗಳ ಭಾಗವಹಿಸುವಿಕೆ, ಕುತೂಹಲ, ಕಲಿಯುವ ಶಿಸ್ತು, ಆತಂಕ, ಅವಕಾಶ, ಸಂವಾದದಂತಹ ಸಂವೇದನಾಶೀಲ ಗುಣಗಳು ಹೃದಯಸ್ಪರ್ಶಿಯಾಗಿ ಕಂಡಬಂದವು. ಆಯೋಜಕರಿಗೂ ಸಾರ್ಥಕತೆಯ ಸಿಕ್ಕಿತೆನ್ನಬಹುದು.

ಕೃಷ್ಣರಾಜಪೇಟೆಯ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದ ಮಾತುಕತೆಯಲ್ಲಿ, ನಾನು ಅಧ್ಯಕ್ಷರಾದ ಕಿರಣ್ ಕುಮಾರ್ ಅವರೊಂದಿಗೆ ಮಾತಿಗಿಳಿದಾಗ ಅಲ್ಲಿ ರೂಪುಗೊಂಡ ಈ ಕಾರ್ಯಕ್ರಮ. ಸಾಹಿತ್ಯದ ನಿಜಾರ್ಥವನ್ನು ಅನಾವರಣಗೊಳಿಸುವ ಮೊದಲ ಹಂತವಾಯಿತು. ದಿನಾಂಕ 13–04–2023 ರಂದು ಹೊಸಹೊಳಲಿನ ನಮ್ಮ ಕವಿ ನಮ್ಮ ಹೆಮ್ಮೆ ಡಾ. ಸುಜನಾ ಅವರ ಜನ್ಮದಿನಾರಣೆಯನ್ನು ಆಚರಿಸುವ ಮೂಲಕ ಪ್ರಾರಂಭಿಸಿದೆವು. ಡಾ. ವಿಜಯ್‌ಕುಮಾರ್ ಬಲ್ಲೇನಹಳ್ಳಿ ಅವರು ಯುಗಸಂಧ್ಯ ಮಹಾಕಾವ್ಯ ಕುರಿತು ಅದ್ಭುತ ವಿಚಾರ ಮಂಡನೆ ಮಾಡಿದರು. ಎರಡನೆಯ ಕಾರ್ಯಕ್ರಮವಾಗಿ ಈ ಸಾಹಿತ್ಯ ಸಂಭ್ರಮವನ್ನು ಏರ್ಪಡಿಸಿದೆವು. ಯುವ ಸಮುದಾಯದಕ್ಕೆ ನಮ್ಮ ಸಾಹಿತ್ಯ ಪರಂಪರೆಯನ್ನು ಪರಿಚಯ ಮಾಡಿಕೊಡದಿದ್ದರೆ ಮುಂದಿನ ಕಾಲಮಾನಗಳಲ್ಲಿ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಕಳೆದುಕೊಳ್ಳಬಾರದೆಂಬ ಸದುದ್ದೇಶದಿಂದ ಈ ಕಾರ್ಯಕ್ರಮ ಆಯೋಜನೆಗೊಂಡಿತು.

ಗ್ರಾಮಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್‌ಕುಮಾರ್ ಅವರು ತೆಗೆದುಕೊಂಡ ಒಂದು ಉತ್ತಮ ನಿರ್ಧಾರದಿಂದ ಪ್ರಶಿಕ್ಷಣಾರ್ಥಿಗಳಿಗೆ ನಮ್ಮ ತಾಲ್ಲೂಕಿನ ಸ್ವತಂತ್ರ ಸಿದ್ಧಲಿಂಗೇಶ್ವರರು; ಅರ್ಚಕ ರಂಗಸ್ವಾಮಿಭಟ್ಟರು; ಎ.ಎನ್. ಮೂರ್ತಿರಾಯರು; ಕೆ.ಎನ್. ನರಸಿಂಹಸ್ವಾಮಿಯವರು; ಎಸ್.ಕುಮಾರಸ್ವಾಮಿಯವರು; ಬಲ್ಲೇನಹಳ್ಳಿ ಮಂಜುನಾಥ್ ಹಾಗೂ ಮಾರೇನಹಳ್ಳಿ ಲೋಕೇಶ್ ಅವರ ಸಾಹಿತ್ಯದ ಆಯ್ದ ಭಾಗಗಳನ್ನು ಕುರಿತು ವಿಚಾರ ಮಂಡನೆಗೆ ಅವಕಾಶ ಮಾಡಿಕೊಳ್ಳಲಾಗಿತ್ತು.

ದಿನಾಂಕ 26–06–2023ರಿಂದ ಪ್ರಾರಂಭವಾಗಿ28–06–2023 ರಂದು ಸಮಾರೋಪಗೊಂಡಿತು. ಶ್ರೀ ಎಸ್.ಸಿ.ಸಾಹುಕಾರ್ ಚಿಕ್ಕಣ್ಣಗೌಡ ಸಭಾಂಗಣದಲ್ಲಿ ಈ ಮೂರು ದಿನ ಕನ್ನಡ ಸಾಹಿತ್ಯದ ನುಡಿ ಹಬ್ಬ ಯಶಸ್ವಿಯಾಗಿ, ಭವಿಷ್ಯದ ಶಿಕ್ಷಕರಿಂದ ನಿರ್ವಹಣೆಗೊಂಡಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ

ಗ್ರಾಮಭಾರತಿಯ ಅಧ್ಯಕ್ಷರಾದ ಎಸ್.ಸಿ.ಕಿರಣ್‌ಕುಮಾರ್, ಸಾಹಿತಿಗಳಾದ ಎಸ್.ಕುಮಾರಸ್ವಾಮಿ (ಶಿಕು), ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪಿ.ಸುರೇಶ್ ಪ್ರಾಧ್ಯಾಪಕರಾದ ಕೆ. ಮಹಾಲಿಂಗ ಅವರು ಕಾರ್ಯಕ್ರಮಕ್ಕೆ ಚಾಲಕ ಶಕ್ತಿಯಾದರೆ, ಮೂರು ದಿನಗಳ ವಿಚಾರ ಘೋಷ್ಠಿಗಳ ಅಧ್ಯಕ್ಷತೆಯನ್ನು ಕ್ರಮವಾಗಿ ಎಸ್.ಕುಮಾರಸ್ವಾಮಿ (ಶಿಕು), ಡಾ.ಅ.ಮ.ಶ್ಯಾಮೇಶ್, ಡಾ. ಬಲ್ಲೇನಹಳ್ಳಿ ವಿಜಯ್‌ಕುಮಾರ್ ಅವರು ನಡೆಸಿಕೊಟ್ಟರು. ಉದಯ ರವಿ ಟ್ರಸ್ಟ್‌ನ ಅಧ್ಯಕ್ಷರಾದ ಕೆ.ಎಸ್.ಸೋಮಶೇಖರ್, ಲೇಖಕಿ ಎಂ.ವೇದಾವತಿ, ಗಂಗಾಧರ್ ಸೇರಿದಂತೆ ಕಾಲೇಜಿನ ಸಹಪ್ರಾಧ್ಯಾಪಕರು, ಶಿಕ್ಷಕರು, ಪ್ರಶಿಕ್ಷಣಾರ್ಥಿಗಳು ಅತಿಥಿಗಳಾಗಿ, ಪ್ರೇಕ್ಷಕರಾಗಿ ಕಾರ್ಯಕ್ರಮವನ್ನು ಸಾಕ್ಷಿಕರಿಸಿದರು.

ಸಾಹಿತ್ಯ ಸಂಭ್ರಮ–23 ಮೊದಲ ಪ್ರಾಯೋಗಿಕ ಕಾರ್ಯಕ್ರಮವಾದ್ದರಿಂದ ಇರುವ ಸಾಹಿತ್ಯದ ಇತಿ–ಮಿತಿಗಳನ್ನು ಸಡಿಲಿಸಿಕೊಂಡಿದ್ದೇವೆ. ಮೊದಲಿಗೆ ಮಂಡಿತವಾದ ವಿಚಾರ ಗೋಷ್ಠಿಯ ವಿಷಯುಗಳನ್ನು ದಾಖಲಿಸಿದ್ದೇವೆ. ದಾಖಲಾಗಿರುವ ಪ್ರಬಂಧಗಳನ್ನು ಯಾವುದೇ ವಿಮರ್ಶೆ ಮಾಡಲು ಹೋಗಿಲ್ಲ. ಈ ಕೃತಿಯನ್ನು ದಿವಂಗತರಾದ ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣ ಸಾಹಿತ್ಯ ಸಂಭ್ರಮ– ಮಾಲಿಕೆ 1 ಉಪಶೀರ್ಷಿಕೆಯಡಿ ಪ್ರಕಟಿಸಲಾಗಿದೆ. ಈ ಕಾರ್ಯಕ್ರಮವನ್ನು ಪ್ರತಿ ವರ್ಷವೂ ಮುಂದುವರಿಸಲು ತೀರ್ಮಾನಿಸಿರುವುದು ಈ ಕಾರ್ಯಕ್ರಮಮದ ಹೆಗ್ಗಳಿಕೆ. ಗ್ರಾಮಭಾರತಿ ಪ್ರಕಾಶನದ ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್ ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಅವಿನಾಶ್ ಗ್ರಾಫಿಕ್ಸ್‌ನ ನಾಗರಾಜು ಅವರಿಗೆ, ಶಿಕು, ಶ್ಯಾಮೇಶ್, ಬಲ್ಲೇನಹಳ್ಳಿ ಮಂಜುನಾಥ್, ಬಲ್ಲೇನಹಳ್ಳಿ ವಿಜಯ್‌ಕುಮಾರ್ ಅವರಿಗೆ, ನನ್ನೆಲ್ಲಾ ಪತ್ರಿಕಾ ವರದಿಗಾರರಿಗೆ, ಸಂಸ್ಥೆಯ ಗುರುವೃಂದಕೆ, ವಿದ್ಯಾರ್ಥಿ ಸಮೂಹಕ್ಕೆ, ಅತ್ತಿಗುಪ್ಪೆ ಸಾಹಿತ್ಯ ಬಳಗದ ಗೆಳೆಯರಿಗೆ, ಅಕ್ಷಯ ಪ್ರಕಾಶನದವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

**ಮಾರೇನಹಳ್ಳಿ ಲೋಕೇಶ್**
ಅಧ್ಯಕ್ಷರು
ಅತ್ತಿಗುಪ್ಪೆ ಸಾಹಿತ್ಯ ಬಳಗ
ಕೃಷ್ಣರಾಜಪೇಟೆ
ಮೊ : 9902612999

ದಿನಾಂಕ : 20–10–2023

# ಸಾಹಿತ್ಯ ಸಂಭ್ರಮ – ಒಂದು ವಿಶಿಷ್ಟ ಪರಿಕಲ್ಪನೆ

ಯುವಜನರು ಮತ್ತು ವಿದ್ಯಾರ್ಥಿಗಳು ಸಾಹಿತ್ಯದ ಬಗ್ಗೆ ಪ್ರೇಮ, ಅಭಿಮಾನ ಬೆಳಿಸಿಕೊಳ್ಳಲು ಇದು ಸಹಕಾರಿಯಾಗಬಲ್ಲದು ಸಾಹಿತ್ಯದ ಬಗ್ಗೆ, ಅದರ ಸೃಷ್ಟಿಯ ಬಗ್ಗೆ ತಿಳಿಸಿಕೊಡುವ ಕಾರ್ಯಕ್ರಮಗಳು ಈಚಿನ ದಿನಗಳಲ್ಲಿ ಕಡಿಮೆಯಾಗಿವೆ. ಸಾಹಿತ್ಯ ಓದುವುದು ಬರೆಯುವುದು ಅಧ್ಯಯನ ಮಾಡುವುದು ವಿರಳವಾಗುತ್ತಿರುವ ಈ ದಿನಗಳಲ್ಲಿ ಸಮಾನ ಮನಸ್ಕರ ಕೂಟವಾದ ಅತ್ತಿಗುಪ್ಪೆ ಸಾಹಿತ್ಯ ಬಳಗ. ಸಾಹಿತ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಗಾರವನ್ನು ಮೂರು ದಿನಗಳ ಕಾಲ ಪಟ್ಟಣದ ಗ್ರಾಮ ಭಾರತಿ ವಿದ್ಯಾ ಸಂಸ್ಥೆಯ ಚಿಕ್ಕಣ್ಣಗೌಡ ಸಭಾ ಭವನದಲ್ಲಿ ಹಮ್ಮಿಕೊಂಡಿದ್ದು ಶ್ಲಾಘನೀಯ ವಿಚಾರ.

ಮೂರು ದಿನಗಳ ಕಾಲ ನಡೆದ ಈ ಸಾಹಿತ್ಯ ಸಂಭ್ರಮದಲ್ಲಿ ಬಿ .ಎಡ್ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ಕನ್ನಡ ಸಾಹಿತ್ಯದ ಹಿರಿಯ ಮತ್ತು ಸಮಕಾಲೀನ ಸಾಹಿತಿಗಳ ಕೃತಿಗಳನ್ನು ಅಭ್ಯಾಸ ಮಾಡಿ ಅವುಗಳಲ್ಲಿ ಒಂದು ವಿಷಯದ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸುವ ಮತ್ತು ಹಿರಿಯ ಸಾಹಿತಿಗಳೊಂದಿಗೆ ಸಂವಾದ ನಡೆಸುವ ಅವಕಾಶ ಕಲ್ಪಿಸಿಕೊಟ್ಟಿದ್ದು ಮೆಚ್ಚುವಂತದ್ದು

ಸಾಹಿತ್ಯ ಸೃಜನಶೀಲತೆಯ ಒಂದು ಭಾಗ. ಮನುಷ್ಯನಲ್ಲಿ ಸೃಜನಶೀಲತೆ ಹೆಚ್ಚಿದಷ್ಟು ಆತನ ಮಾನಸಿಕ ಬೆಳವಣಿಗೆ ಬಲವಾಗಿ ವ್ಯಾಪಿಸುತ್ತದೆ ಎಂದು ಮಾನಸಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸಾಹಿತ್ಯ ಕಲೆ ಸಂಸ್ಕೃತಿಗಳ ಬಗ್ಗೆ ನಡೆಯುವ ವಿಚಾರ–ವಿನಿಮಯಗಳು ಮನುಷ್ಯನ ಅಭಿವ್ಯಕ್ತಿ ವಿಕಾಸವಾಗಲು, ತನ್ನದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂಬುದು ನೆನಪಿನಲ್ಲಿ ಇಡಬೇಕಾದ ವಿಚಾರ.

ಈ ನಿಟ್ಟಿನಲ್ಲಿ ಅತ್ತಿಗುಪ್ಪೆ ಸಾಹಿತ್ಯ ಬಳಗ ಭವಿಷ್ಯದ ಶಿಕ್ಷಕರಾದ ಬಿಎಡ್ ವಿದ್ಯಾರ್ಥಿಗಳಿಗೆ ಸಾಹಿತ್ಯದ ಅಭಿರುಚಿ ಬೆಳೆಸಲು ಈ ಕಾರ್ಯಕ್ರಮದ ಮೂಲಕ ನೆರವಾಗಿದೆ. ಎಂದರೆ ಅತಿಶಯೋಕ್ತಿ ಆಗಲಾರದು.

ಮೂರು ದಿನಗಳ ಸಾಹಿತ್ಯ ಸಂಭ್ರಮದಲ್ಲಿ ಕೆ.ಆರ್.ಪೇಟೆ ತಾಲ್ಲೂಕಿನವರೇ ಆದ ಒಟ್ಟು ಏಳು ಸಾಹಿತಿಗಳ ಸಾಹಿತ್ಯವನ್ನು ಪರಿಚಯಿಸಿದ ಈ ಕಾರ್ಯಕ್ರಮದಲ್ಲಿ ಓದುವ. ಓದಿದ್ದರಲ್ಲಿ ಪ್ರಮುಖವಾದ ಒಂದು ಪ್ರಾಕಾರದ ಬಗ್ಗೆ ವಿದ್ಯಾರ್ಥಿಗಳೇ ಮನನ ಮಾಡಿಕೊಂಡು ತಮ್ಮ ಅಭಿಪ್ರಾಯಗಳನ್ನು ಮಂಡಿಸುವ. ಅವಕಾಶವನ್ನು ಕಲ್ಪಿಸಿಕೊಡಲಾಗಿತ್ತು

ಗೋಷ್ಠಿಯಲ್ಲಿ ತಾಲ್ಲೂಕಿನ ಜಾನಪದ ಸಾಹಿತಿ ಬಂಡಿಹೊಳೆ ಅರ್ಚಕ ರಂಗಸ್ವಾಮಿ ಭಟ್ಟರ ಹುಟ್ಟಿದಹಳ್ಳಿ ಕೃತಿಯ ಬಗ್ಗೆ ವಿಚಾರ ಪೂರ್ಣ ಅಭಿಪ್ರಾಯಗಳು ಮಂಡನೆ ಯಾದವು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಹೇಮಗಿರಿ ಸಮೀಪದ ಬಂಡಿಹೊಳೆಯಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ಗುರುತಿಸಿಕೊಂಡು ಅಳಿಸಿ ಹೋಗುತ್ತಿದ್ದ ಪಾಮರರ ಸಾಹಿತ್ಯವನ್ನು ಉಳಿಸಿ ಬೆಳೆಸಿದ ಕೀರ್ತಿ ಅರ್ಚಕ ರಂಗಸ್ವಾಮಿ ಭಟ್ಟರಿಗೆ ಸಲ್ಲುತ್ತದೆ. ಅವರು ಬರೆದ ಹುಟ್ಟಿದ ಹಳ್ಳಿ ಕೃತಿಯು ಇವತ್ತಿಗೂ ಜಾನಪದ ಸಾಹಿತ್ಯದಲ್ಲಿ ಅಗ್ರಪಂಕ್ತಿಯನ್ನು ಪಡೆದಿದೆ. ಒಮ್ಮೆಯಾದರೂ ಓದಲೇಬೇಕಾದ ಈ ಕೃತಿ ಮುಂದೆ ಇಂತಹ ಹಲವು ಕೃತಿಗಳಿಗೆ ತಾಯಿ ಗ್ರಂಥವಾಗಿದೆ.

ಕೃಷ್ಣರಾಜಪೇಟೆ ತಾಲ್ಲೂಕಿನ. ಪ್ರಥಮ ಸಾಹಿತಿಯೆಂದು ಗುರುತಿಸಿಕೊಂಡವರು ಕಾಪನಹಳ್ಳಿ ಗವಿಮಠದ ವಚನಕಾರರಾದ ಸ್ವತಂತ್ರ ಸಿದ್ಧಲಿಂಗೇಶ್ವರ ಅವರು 15 ನೆಯ ಶತಮಾನದಲ್ಲಿ ವಚನಗಳನ್ನು ಬರೆಯುವ ಮೂಲಕ ಸಮಾಜದ ಅಂಕುಡೊಂಕನ್ನು ತಿದ್ದಲು ಪ್ರಯತ್ನಿಸಿದರು. ಹಲವು ಕಾವ್ಯಗಳನ್ನು ಇವರು ಬರೆದಿದ್ದು, ಸದ್ಯ ಲಭ್ಯ ಇರುವ ವಚನಗಳ ಸಾರದ ಬಗ್ಗೆ ವಿಚಾರ ಮಂಡನೆ ನಡೆಯಿತು. ಈ ಮಹನೀಯರ ಸಾಹಿತ್ಯದ ಪ್ರಕಾರಗಳನ್ನು ವಿದ್ಯಾರ್ಥಿಗಳು ಅರ್ಥಪೂರ್ಣವಾಗಿ ಮಂಡಿಸಿ ಗಮನ ಸೆಳೆದರು.

ಎರಡನೆಯ ದಿನದ ಕಾರ್ಯಗಾರದಲ್ಲಿ ಕೃಷ್ಣರಾಜಪೇಟೆಯ ಹೆಮ್ಮೆಯ ಸಾಹಿತಿಗಳಾದ ಕಿಕ್ಕೇರಿಯ ಕೆ.ಎಸ್ ನರಸಿಂಹಸ್ವಾಮಿ ಅವರ ಕವಿತೆಗಳು ಮತ್ತು ಅಕ್ಕಿ ಹೆಬ್ಬಾಳಿನ. ಎ.ಎನ್ ಮೂರ್ತಿರಾಯರ ಲಲಿತ ಪ್ರಬಂಧಗಳ ಬಗ್ಗೆ ವಿಚಾರ ಮಂಡನೆ ನಡೆಯಿತು. ನರಸಿಂಹಸ್ವಾಮಿ ಅವರ ಮೈಸೂರು ಮಲ್ಲಿಗೆ ಕೃತಿಯ ಕವನ ಸಂಕಲನದ ಕವಿತೆಗಳ ಬಗ್ಗೆ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹೇಳಿದರು

ಇವತ್ತಿನ ದಿನ ಮಾನಸದಲ್ಲಿಯೂ ಮೈಸೂರು ಮಲ್ಲಿಗೆ ಸಂಕಲನದಲ್ಲಿರುವ ಕವಿತೆಗಳು ಜನಪ್ರಿಯವಾಗಿರುವುದಕ್ಕೆ ಕವಿಯ ಅಂತರಾತ್ಮದ ನುಡಿಗಳೇ ಸಾಕ್ಷಿ ಎಂದು ಅಭಿಪ್ರಾಯ ಮೂಡಿ ಬಂತು

ಖ್ಯಾತ ವಿಚಾರವಾದಿ ದೇವರು ಕೃತಿಯ ಮೂಲಕ ಮನೆಮಾತಾದ ಹಿರಿಯ ಸಾಹಿತಿ ಎ.ಎನ್.ಮೂರ್ತಿರಾಯರು ಬರೆದಿರುವ ಲಲಿತ ಪ್ರಬಂಧಗಳ ಬಗ್ಗೆ ಅಭಿಪ್ರಾಯ ಮಂಡಿಸಿದ ವಿದ್ಯಾರ್ಥಿಗಳು ಚರ್ಚೆಗೆ ಇಂಬು ನೀಡಿದರು. ದೇವರು,

ಮೂಗಿನ ತುದಿ, ಹೆಬ್ಬಾಳು, ಟೆಲಿಫೋನ್ ತಂದ ಪ್ರಸಂಗಗಳು, ಹೀಗೆ ಹಲವು ಪ್ರಬಂಧಗಳ ವಿಚಾರಗಳನ್ನು ತಿಳಿ ಹಾಸ್ಯದೊಂದಿಗೆ ಮಂಡಿಸಲಾಯಿತು

ಮೂರನೇ ದಿನ ಮಕ್ಕಳ ಸಾಹಿತಿ ಮಾರೇನಹಳ್ಳಿ ಲೋಕೇಶ್ ರವರ ಮಕ್ಕಳ ಸಾಹಿತ್ಯದ ಸಮಗ್ರ ಕೃತಿಗಳ ಬಗ್ಗೆ ಮತ್ತು ಕತೆಗಾರ. ಬಲೇನಹಳ್ಳಿ ಮಂಜುನಾಥ್ ರವರ ಕಥಾ ಸಂಕಲನ ವಸ್ತ್ರಾಪಹರಣ ಮತ್ತು ಇತರ ಕಥೆಗಳ ಬಗ್ಗೆ ಚರ್ಚೆ ನಡೆಸಿದ ವಿದ್ಯಾರ್ಥಿಗಳು ಸಂಕ್ರಮಣ, ಪಾಲು ವಸ್ತ್ರಾಪರಣ, ಉತ್ಥಾನ, ಒಂದು ಪ್ರೇಮಕ್ಕಾಗಿ ಮುಂತಾದ ಕಥೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮತ್ತು ವಿಮರ್ಶೆಯ ಮಾತುಗಳನ್ನು ಮಂಡಿಸಿದರು

ಇದೇ ಸಂದರ್ಭದಲ್ಲಿ ಮಕ್ಕಳ ಸಾಹಿತಿ ಮಾರೇನಹಳ್ಳಿ ಲೋಕೇಶ್ ರವರ ಮಕ್ಕಳ ಸಾಹಿತ್ಯ ಕೃತಿಗಳ ಬಗ್ಗೆ ವಿದ್ಯಾರ್ಥಿಗಳು ಮುಕ್ತವಾಗಿ ಮಾತನಾಡಿ ಅಭಿಪ್ರಾಯ ಹಂಚಿಕೊಂಡರು

ಮಕ್ಕಳ ಸಾಹಿತ್ಯ ಎಂಬುದು ಮಕ್ಕಳಲ್ಲಿರುವ ಸೂಕ್ತ ಪ್ರತಿಭೆಯನ್ನು ಹೊರಹೊಮ್ಮಿಸಲು ಸಹಾಯಕವಾಗಿರುವ ಒಂದು ಸಾಹಿತ್ಯದ ಬಗೆಯೆಂದು ಅಭಿಪ್ರಾಯಪಟ್ಟರು .

ನಂತರ ಹಿರಿಯ ಸಾಹಿತಿ ಶಿ.ಕುಮಾರಸ್ವಾಮಿಯವರ ಸಾಹಿತ್ಯ ಪ್ರಕಾರಗಳ ಬಗ್ಗೆ ವಿದ್ಯಾರ್ಥಿಗಳು ವಿಚಾರ ಮಂಡಿಸಿ ಅವರ ಸಮಗ್ರ ಸಾಹಿತ್ಯವನ್ನು ಮತ್ತು ಕವಿತೆಗಳನ್ನು ಒಳಗೊಂಡ ಕೃತಿಗಳ ಸಾರ ತಿಳಿಸಿದರು ಈ ವಿಚಾರ ಸಂಕಿರಣದ ಸಂದರ್ಭದಲ್ಲಿ ಸಮಕಾಲಿನ ಸಾಹಿತಿಗಳಾದ ಶ್ರೀ ಕುಮಾರಸ್ವಾಮಿ, ಬಲ್ಲೆನಹಳ್ಳಿ ಮಂಜುನಾಥ್ ಮತ್ತು ಮಾರೇನಹಳ್ಳಿ ಲೋಕೇಶ್ ಉಪಸ್ಥಿತರಿದ್ದು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸಂಶಯಗಳಿಗೆ ಮತ್ತು ಪ್ರಶ್ನೆಗಳಿಗೆ ಉತ್ತರ ನೀಡಿದರು.

ಮೂರು ದಿನಗಳ ಕಾಲ ನಡೆದ ಸಾಹಿತ್ಯ ಸಂಭ್ರಮದಿಂದ ವಿದ್ಯಾರ್ಥಿಗಳಿಗೆ ಮತ್ತು ಸಾಹಿತ್ಯಪ್ರಿಯರಿಗೆ ಹೆಚ್ಚು ಸಾಹಿತ್ಯದ ವಿಚಾರಗಳನ್ನು ತಿಳಿಯಲು ಸಾಧ್ಯವಾಯಿತು ಒಟ್ಟಾರೆಯಾಗಿ ಅತ್ತಿಗುಪ್ಪೆ ಸಾಹಿತ್ಯ ಬಳಗವು, ಜೂನ್ 26 ರಿಂದ 28 ರ ವರೆಗೆ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮ ಅತ್ಯಂತ ಉಪಯುಕ್ತವಾದುದು ಎನಿಸುತ್ತದೆ ಇಂತಹ ಕಾರ್ಯಕ್ರಮಗಳು, ಕಾಲೇಜು ಮಟ್ಟದಲ್ಲಿ ನಡೆಯುವುದರಿಂದ ಯುವ ಜನಾಂಗವನ್ನು ಸಾಹಿತ್ಯದ ಓದಿನತ್ತ ಕರೆತರಲು ಸಾಧ್ಯವಾಗುತ್ತದೆಂದು ಹೇಳಬಹುದು.

**ಬಲ್ಲೇನಹಳ್ಳಿ ಮಂಜುನಾಥ್**
ಸಾಹಿತಿ ಮತ್ತು ಉಪನ್ಯಾಸಕರು

# ಸಾರ್ಥಕತೆಯ ಸಾಹಿತ್ಯ ಸಂಭ್ರಮ

ಸಾಹಿತ್ಯ-ಸಂಭ್ರಮ ಕಾರ್ಯಕ್ರಮ ಆಯೋಜಿಸಿರುವ ಎಲ್ಲ ಸಂಘಟನೆಗಳಿಗೂ, ಸಭಾಂಗಣದಲ್ಲಿ ಉಪಸ್ಥಿತರಿರುವ ಎಲ್ಲ ಸಾಹಿತ್ಯಾಸಕ್ತರಿಗೂ ನಮಸ್ಕಾರ.

ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಧ್ಯಯನ ಹಾಗೂ ವಿಚಾರ ಮಂಡನೆಯ ಕೌಶಲಗಳನ್ನು ರೂಢಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿದೆ. ಈ ಮೂಲಕ ಇಲ್ಲಿ ವಿಷಯ ಮಂಡನೆ ಮಾಡಿದ ಪ್ರಶಿಕ್ಷಣಾರ್ಥಿಗಳು ಕನ್ನಡ ಸಾಹಿತ್ಯದ ಪ್ರಮುಖ ಬರಹಗಾರರ ಜೊತೆಗೆ, ಸ್ಥಳೀಯ ಲೇಖಕರ ಕೃತಿಗಳನ್ನು ಗಂಭೀರವಾಗಿ ಗಮನಿಸಿ ಗ್ರಹಿಸಿದ ಅಂಶಗಳನ್ನು ಸಂಕ್ಷಿಪ್ತವಾಗಿ ಹಾಗೂ ಅರ್ಥಪೂರ್ಣವಾಗಿ ಪ್ರಸ್ತುತಪಡಿಸಿದ ಪರಿ ಗಮನಾರ್ಹವಾಗಿತ್ತು. ದೊಡ್ಡ ವೇದಿಕೆಗಳಲ್ಲಿ ನಡೆಯುವ ಪ್ರಧಾನ ಗೋಷ್ಠಿಗಳಿಗೆ ಸಿದ್ಧರಾಗಿ ಬರುವ ವಿದ್ವಾಂಸರಂತೆಯೇ, ಇಲ್ಲಿನ ವಿಷಯ ಮಂಡನೆಕಾರರಲ್ಲಿಯೂ ಅಗತ್ಯ ಸಿದ್ಧತೆ ಕಂಡುಬಂದಿತು ಎಂದರೆ ಅತಿಶಯೋಕ್ತಿಯಾಗಲಾರದು. ಅಲ್ಲದೆ ವಿಷಯ ಮಂಡಿಸಿದ ಕೆಲವರು ತಮ್ಮ ಅಭಿಪ್ರಾಯಗಳಿಗೆ ಪೂರಕವಾಗಿ ಅನ್ಯ ಭಾಷೆಯ, ಅನ್ಯ ಲೇಖಕರ ಕೃತಿಗಳನ್ನು ಉದಾಹರಿಸಿ ಹೋಲಿಕೆ ಮಾಡಿದ್ದು, ಅವರ ತಯಾರಿಯ ಶ್ರಮವನ್ನು ಪ್ರತಿಬಿಂಬಿಸುವಂತಿತ್ತು.

ಕನ್ನಡದ ಖ್ಯಾತ ವಿಮರ್ಶಕರಾದ ಶ್ರೀ ಎ.ಎನ್.ಮೂರ್ತಿರಾಯರ ಆಯ್ದ ಲಲಿತ ಪ್ರಬಂಧಗಳ ಕುರಿತು ಇಲ್ಲಿ ಕು.ಅರ್ಪಿತ ಮತ್ತು ಕು.ಶಿಲ್ಪ ತಮ್ಮ ವಿಚಾರ ಮಂಡಿಸಿದ್ದಾರೆ. ಮೊದಲಿಗೆ ರಾಯರ 'ಹಗಲುಗನಸುಗಳು' ಪ್ರಬಂಧದ ಬಗೆಗಿನ ತಮ್ಮ ಗ್ರಹಿಕೆಗಳನ್ನು ತೆರೆದಿಟ್ಟ ಶಿಲ್ಪ ಅವರು, ನಿಜ ಜೀವನದಲ್ಲಿ ಏನೇ ಕಷ್ಟ ದುಃಖಗಳು ತುಂಬಿದ್ದರೂ, ಭವಿಷ್ಯ ಜೀವನವು ಇದೇ ರೀತಿ ಇರಬೇಕು ಎಂಬ ಕನಸುಗಳ ಬುತ್ತಿಯನ್ನು

ಕೂಡಿರುವುದೇ ಹಗಲುಗನಸು ಎಂಬ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಜೊತೆಗೆ ಲೇಖಕರ ಪ್ರಕಾರ ಹಗಲುಗನಸಿನ ವ್ಯಾಖ್ಯೆ, ಅರೇಬಿಯನ್ ನೈಟ್ಸ್ ಕಥೆಗಳು ಚಿಕ್ಕ ವಯಸ್ಸಿನಲ್ಲೇ ಅವರ ಮೇಲೆ ಬೀರಿದ ಪ್ರಭಾವ, ಕಥೆಗಳ ಕಾರಣದಿಂದ ಅವರು ಇಹಲೋಕವನ್ನೇ ಮರೆಯುತ್ತಿದ್ದುದು, ಆ ಮೂಲಕ ತಮ್ಮ ದೈನಂದಿನ ನೀರಸ ವಾಸ್ತವ ಪ್ರಪಂಚದಿಂದಾಚೆಗೆ ಹೋಗಿ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದುದನ್ನು ಗುರುತಿಸಿದ್ದಾರೆ. ಲೇಖಕರಿಗೆ ವಯಸ್ಸು ಬಲಿಯುತ್ತಾ ಹೋದಂತೆಲ್ಲಾ, ಅವರ ಕನಸುಗಳ ಸ್ವರೂಪ ಮತ್ತು ವ್ಯಾಪ್ತಿ ಬದಲಾಗುತ್ತಾ ಹೋಗುವುದು, ಸಾಹಸ ಕಾರ್ಯಗಳೆಡೆಗೆ, ಕೀರ್ತಿ ಸಂಪಾದನೆಯ ಕಡೆಗೆ ಅವರ ಮನಸ್ಸು ಹೊರಳುವುದು, ಇಂತಹ ಕನಸುಗಳು ಲೇಖಕರ ಮನಸ್ಸಿಗೆ ಸುಖಕರ ಅನುಭವಗಳನ್ನು ನೀಡಿದ್ದನ್ನು ಗ್ರಹಿಸುತ್ತಲೇ, ಇವೆಲ್ಲವೂ ಕೇವಲ ಹಗಲುಗನಸುಗಳು, ವಾಸ್ತವವಾದವಲ್ಲ ಎಂಬ ಸತ್ಯ ಲೇಖಕರಲ್ಲಿ ಹತಾಶೆ ಹಾಗೂ ಅತೃಪ್ತಿಯ ಭಾವನೆಗಳನ್ನು ಮೂಡಿಸಿತ್ತು ಎಂಬುದನ್ನು ದಾಖಲಿಸಿದ್ದಾರೆ. ಈ ಮೂಲಕವಾಗಿ ಮಂಡನೆಕಾರರು ಕೃತಿಯ ಆಳಕ್ಕಿಳಿದು ಗಮನಿಸಲು ಪ್ರಯತ್ನಿಸಿದ್ದಾರೆ.

ನಂತರ ಮೂರ್ತಿರಾಯರ 'ಅಲೆಯುವ ಮನ' ಪ್ರಬಂಧ ಸಂಕಲನದ ಬಗ್ಗೆ ತಮ್ಮ ವಿಚಾರಗಳನ್ನು ಹಂಚಿಕೊಂಡ ಅರ್ಪಿತ ಅವರು, ಇಲ್ಲಿ ಬರುವ ಕೆನ್ನಿಂಗ್ಟನ್ ಪಾರ್ಕ್, ಹೋಟೆಲುಗಳು, ಹೆಂಡತಿಯ ಹೆಸರು, ದಿವಾನಖಾನೆಯ ಅಂದ ಚಂದ, ವ್ಯಾಘ್ರಗೀತೆ ಪ್ರಬಂಧಗಳ ಬಗ್ಗೆ ಬೆಳಕುಚೆಲ್ಲಿದ್ದಾರೆ. ಮನಸ್ಸಿಗೆ ಇಷ್ಟವಾಗದ ಕೆಲಸಗಳನ್ನು ಯಾರಿಂದಲಾದರೂ ಮಾಡಿಸಿದರೆ ಅದು ಪ್ರಯೋಜನವಾಗುವುದಿಲ್ಲ ಎಂಬ ಸಂದೇಶ ನೀಡುವ ಕೆನ್ನಿಂಗ್‌ಟನ್ ಪಾರ್ಕ್, 'ಹೋಟೆಲ್ ನ ಊಟ ಅದರಕ್ಕೆ ಸಿಹಿ, ಉದರಕ್ಕೆ ಕಹಿ' ಎಂಬ ಎಚ್ಚರಿಕೆಯ ಜೊತೆಗೆ, ಮನೆಯಲ್ಲಿ ಹೆಂಡತಿ ಊಟ ಬಡಿಸುವಾಗ ಆಡುವ ಮಾತುಗಳು ಬಿಟ್ಟಿ ಉಪನ್ಯಾಸವಲ್ಲ, ಕಾಳಜಿಯ ನುಡಿಗಳು ಎಂಬ ಸಂದೇಶ ನೀಡುವ ಹೋಟೆಲುಗಳು, ಹಿಂದಿನ ದಿನಮಾನದಲ್ಲಿ ಗಂಡ ಹೆಂಡತಿಯ ಹೆಸರನ್ನು, ಹೆಂಡತಿಯು ಗಂಡನ ಹೆಸರನ್ನು ಗಟ್ಟಿಯಾಗಿ ಎಲ್ಲರ ಎದುರಿಗೆ ಕರೆಯಲು ಅಂಜಿಕೊಳ್ಳುತ್ತಿದ್ದುದನ್ನು, ಒಬ್ಬರಿಗೊಬ್ಬರು ಸಂಭಾಷಿಸಲು ಇತರರ ಸಹಾಯ ಪಡೆಯುತ್ತಿದ್ದುದನ್ನು ತಿಳಿಸುವ ಹೆಂಡತಿಯ ಹೆಸರು, ಗದ್ದಲದಿಂದ ದೂರವಾಗಿ ಏಕಾಂತ ಬಯಸುವ ಮನಕ್ಕೆ ಸಮಾಧಾನ ದೊರಕಿಸುವ ನಿಟ್ಟಿನಲ್ಲಿ ಶ್ರಮದಿಂದ ಕಟ್ಟಿಸಿದ, ಸುಂದರವಾಗಿ ಸಿಂಗಾರಗೊಂಡ ದಿವಾನಖಾನೆ, ನಂತರ ಎಲ್ಲಿ ಹಾಳಾಗಿ ಬಿಡುವುದೋ ಎಂಬ ಆತಂಕದಿಂದ ಲೇಖಕರನ್ನೇ ಅದು ಅಲ್ಲಿಂದ ದೂರಮಾಡಿದ ಪರಿಯನ್ನು ತಿಳಿಸುವ ದಿವಾನಖಾನೆಯ ಅಂದಚಂದ, ಪ್ರಾಣಿ ಮಾತ್ರವಾದವುಗಳು ಧರ್ಮ ಸತ್ಯಗಳ ಪರಿಪಾಲನೆಯಲ್ಲಿ ಮುಂದಿರುವಾಗ, ಪ್ರಾಣಿ ಜಗತ್ತಿನ ಶ್ರೇಷ್ಠರೆನಿಸಿದ ಮಾನವರೂ ಧರ್ಮ ಪರಿಪಾಲನೆ ಮಾಡಬೇಕಲ್ಲವೇ ಎಂಬ ಪ್ರಶ್ನೆ ಮುಂದಿಡುವ

ವ್ಯಾಘ್ರಗೀತೆ ಕುರಿತು ಮಂಡನೆಕಾರರು ಉತ್ತಮ ವಿಚಾರಗಳನ್ನು ಹೆಕ್ಕಿ ತೆಗೆದಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರೇಮಕವಿ ಎಂದು ಖ್ಯಾತರಾಗಿರುವ ಶ್ರೀ ಕೆ.ಎಸ್.ನರಸಿಂಹಸ್ವಾಮಿಯವರ ಆಯ್ದ ಕವನಗಳ ಕುರಿತು ವಿಚಾರ ಮಂಡನೆ ಮಾಡಿದ, ಶ್ರೀಮತಿ ಎಸ್ ಶಾರದಾ ಅವರು ನವಪಲ್ಲವ, ದುಂಡು ಮಲ್ಲಿಗೆ ಸಂಕಲನಗಳ ಬಗ್ಗೆ ಪ್ರಸ್ತಾಪಿಸಿದರು. ಕವಿಯು ತಮ್ಮ ಕಾವ್ಯ ಕೃಷಿಯ ಮೂರನೆಯ ಘಟ್ಟದಲ್ಲಿ ರಚಿಸಿರುವ ಈ ಕೃತಿಗಳಲ್ಲಿ ಅಶಾಶ್ವತವಾದ ಮಾನವ ಜೀವನ, ಸುಖ ಜೀವನದ ಸೆಲೆಯಾದ ಮಧುರ ದಾಂಪತ್ಯ, ವೈವಿಧ್ಯಮಯ ಜೀವನಾನುಭವ, ಹಾಸ್ಯಪ್ರಜ್ಞೆ, ಟೀಕಾಕಾರರಿಗೆ ಮಾರುತ್ತರಗಳನ್ನು ಕಾವ್ಯಮಯವಾಗಿ ಹಿಡಿದಿಟ್ಟಿರುವುದನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ.

ಲೇಖಕರಾದ ಮಾನ್ಯ ಶಿ.ಕುಮಾರಸ್ವಾಮಿ (ಶಿ.ಕು) ಅವರ ಕೃಷ್ಣರಾಜಪೇಟೆ ಸಂಪದ ಕುರಿತು ವಿಷಯ ಮಂಡಿಸಿದ ಕು.ನಿಶ್ಚಿತ ಅವರು, ನಮ್ಮ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿರುವ ಜನಪದ ವೈದ್ಯಪದ್ಧತಿಯ ಪ್ರಾಮುಖ್ಯತೆ ಕುರಿತು ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಅಸ್ತಿತ್ವದಲ್ಲಿರುವ ನಾಟಿಔಷಧಿಗಳು ಜನ, ಜಾನುವಾರುಗಳ ಕಾಯಿಲೆ, ಕಸಾಲೆಗಳನ್ನು ಸಂಜೀವಿನಿಯಂತೆ ಗುಣಪಡಿಸುತ್ತಿರುವ ಬಗ್ಗೆ ಈ ಕುರಿತು ಮಾಹಿತಿ ಸಂಗ್ರಹಿಸಿರುವ ಲೇಖಕರ ಪರಿಶ್ರಮದ ಬಗ್ಗೆ ಬೆಳಕು ಚೆಲ್ಲಿದರು. ಇದೇ ಲೇಖಕರ ಎಳಮಿಂಚು ವಚನ ಸಂಕಲನದ ಕುರಿತು ಮಾತನಾಡಿದ ಕು.ಪ್ರಿಯ ಅವರು ಬಲ್ಲೇಶ್ವರನ ವಚನಗಳು ಶೀರ್ಷಿಕೆಯಡಿಯಲ್ಲಿ ಲೇಖಕರು ತಮ್ಮ ಹುಟ್ಟೂರು ಉದ್ಯೋಗದ ಸ್ಥಳ ಕನ್ನಡ ನಾಡು ನುಡಿ ಸೇರಿದಂತೆ ವೈವಿಧ್ಯಮಯ ವಿಷಯಗಳ ಬಗ್ಗೆ ವಚನಗಳ ರೂಪದಲ್ಲಿ ವ್ಯಕ್ತಪಡಿಸಿರುವ ಭಾವನೆಗಳನ್ನು ಗುರುತಿಸಿದ್ದಾರೆ.

ಇಂದಿನ ಆಧುನಿಕ ಜಗತ್ತಿನಲ್ಲಿ ನಾಗರಿಕತೆ ಹೆಸರಿನಲ್ಲಿ ಇಂಟರ್ನೆಟ್, ಆನ್‌ಲೈನ್ ಗೇಮ್, ಮೊಬೈಲ್ ಫೋನ್, ಸೋಶಿಯಲ್ ಮೀಡಿಯಾಗಳ ಗೀಳಿಗೆ ದಾಸರಾಗಿರುವ ನಮ್ಮ ಯುವಜನರನ್ನು ಅಲ್ಲಿಂದ ಆಚೆಗೆ ತಂದು ಗಂಭೀರ ಓದಿಗೆ ಹಚ್ಚುವ, ಅವರಲ್ಲಿ ಸಾಹಿತ್ಯ ಅಭಿರುಚಿ ಬೆಳೆಸುವ ಪ್ರಯತ್ನವು, ಸಾಹಿತ್ಯ ಸಂಭ್ರಮ ಕಾರ್ಯಕ್ರಮದ ಮೂಲಕ ಸಾಧ್ಯವಾಗಿದೆ. ಇಲ್ಲಿ ಪ್ರಸ್ತಾಪಿಸಿದ ಕೃತಿಗಳಲ್ಲಿ ಈಗಾಗಲೇ ಗುರುತಿಸಲ್ಪಟ್ಟಿರುವ ವಿಚಾರಗಳನ್ನು ಹೊರತುಪಡಿಸಿ, ಹೊಸ ಹೊಳಹುಗಳನ್ನು ಗುರುತಿಸುವ ನಿಟ್ಟಿನಲ್ಲಿ ಮೂಡಿದ ಯುವ ವಿಷಯ ಮಂಡನೆಕಾರರ ಹೊಸ ಹೆಜ್ಜೆಗಳು ಕಾರ್ಯಕ್ರಮದ ಸಾರ್ಥಕತೆಯನ್ನು ದೃಢಪಡಿಸಿವೆ. ಎಲ್ಲರಿಗೂ ಧನ್ಯವಾದಗಳು.

**ಡಾ.ಶ್ಯಾಮೇಶ್**
ಅತ್ತಿಗುಪ್ಪೆ, ಮೈಸೂರು
ಮೊ : 9964242434

# ಸಾಹಿತ್ಯ ಸಂಭ್ರಮ

ದಿನಾಂಕ–25–06–2023 ರಿಂದ 28–06–2023 ರ ವರಗೆ ಶ್ರೀ ಎಸ್.ಸಿ ಸಾಹುಕಾರ್ ಚಿಕ್ಕಣ್ಣಗೌಡ ಸಭಾಂಗಣ, ಗ್ರಾಮ ಭಾರತಿ ವಿದ್ಯಾ ಸಂಸ್ಥೆ, ಕೃಷ್ಣರಾಜಪೇಟೆಯಲ್ಲಿ ನಡೆದ ಸಾಹಿತ್ಯ ಸಂಭ್ರಮ ಕಾರ್ಯಕ್ರಮವು ಬಹು ವಿಶಿಷ್ಟ ಮತ್ತು ವಿನೂತನವಾದ ಪ್ರಯೋಗವಾಗಿದೆ. ತಾಲ್ಲೂಕಿನ ಹಿರಿಯ ಮತ್ತು ಇತ್ತೀಚೆಗೆ ಸಾಹಿತ್ಯ ಕೃಷಿಯ ಮೂಲಕ ನಾಡಿಗೆ ಪರಿಚಯವಾಗುತ್ತಿರುವ ಸಾಹಿತಿಗಳ ಕೃತಿಯೊಳಗಿನ ಸಾರವನ್ನು ವಿವಿಧ ಗೋಷ್ಠಿಗಳ ಮೂಲಕ ಸಾಹಿತ್ಯ ರಸದೂಟವನ್ನು ಉಣ ಬಡಿಸಲಾಗಿದೆ. ನಾಡಿನ ಭಾವಿ ಶಿಕ್ಷಕರಾಗ ಬಯಸಿ ತರಬೇತಿ ಪಡೆಯುತ್ತಿರುವ ಪ್ರಶಿಕ್ಷಣಾರ್ಥಿಗಳಿಂದ ವಿಚಾರ ಮಂಡನೆಯ ಪ್ರಯೋಗ ಮಾಡಿಸಿದ್ದು  ಶಕ್ತ ಓದುಗರನ್ನು ಸೃಷ್ಟಿಸಿದ್ದಂತಾಗಿದೆ. ಮೂರು ದಿನಗಳ ಈ ಸಾಹಿತ್ಯ ಸಂಭ್ರಮದಲ್ಲಿ ವಿಭಿನ್ನ ಸಾಹಿತಿಗಳು ಮತ್ತು ವಿಭಿನ್ನವಾದ ಸಾಹಿತ್ಯ ರಚನೆಯ ಚರ್ಚೆ ಸುಧೀರ್ಘವಾಗಿ ನಡೆದಿದೆ. ಗುಣಾತ್ಮಕ ಓದುಗನ ಮತ್ತು ಸಹೃದಯರ ಸಂಖ್ಯೆ ಹೆಚ್ಚಳಕ್ಕೆ ಇದೊಂದು ದಿಕ್ಸೂಚಿಯಾಗಿದೆ. ವಿಚಾರ ಮಂಡನೆಯ ನಂತರ ನಡೆದಿರುವ ಸಂವಾದಗಳು ಧನಾತ್ಮಕ ಚಿಂತನೆಗೆ ಒಳಗುಮಾಡಿವೆ. ಪ್ರಶಿಕ್ಷಾರ್ಥಿಗಳನ್ನು ಪ್ರೋತ್ಸಾಹಿಸುವ ಮೂಲಕ ಆರೋಗ್ಯ ಸಮಾಜದ ನಿರ್ಮಾಣಕ್ಕೆ ಉತ್ತಮ ವೇದಿಕೆಯಾಗಿದೆ. ವಿದ್ಯಾರ್ಥಿಗಳ ಪರಾಮರ್ಶನಾ ಗ್ರಂಥಗಳ ಅಧ್ಯಯನ ಬಹಳ ಮುಖ್ಯ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಅಧ್ಯಯನ ಮತ್ತು ಅಧ್ಯಾಪನದ ನಿರಂತರ ಪ್ರಕ್ರಿಯೆಗಳು ಜ್ಞಾನವನ್ನು ವೃದ್ಧಿಸಿಕೊಳ್ಳಲು ಸಹಾಯಕವಾಗಿವೆ ಎಂಬ ಅರಿವನ್ನು ಪುನರುಚ್ಚಿಸಿದಂತಾಗಿದೆ. ಈ ಕಾರ್ಯಕ್ರಮವು ನಾಡಿನ ಬಹು ದೊಡ್ಡ ಸಾಹಿತಿಗಳಾದ ಪ್ರೊ. ಸುಜನಾ ರವರ ಹುಟ್ಟು ಹಬ್ಬದ ಸಹಾಯಾರ್ಥ ನಡೆಯುವ ಮೂಲಕ ತಾಲ್ಲೂಕಿನ ಪ್ರಸಿದ್ಧ ಕವಿ ಶ್ರೀ ನರಸಿಂಹಶೆಟ್ಟಿ (ಪ್ರೊ.ಸುಜನಾ)ರವರ ಸಂಸ್ಮರಣೆಯು ಜೊತೆಗೂಡಿದೆ.

ಪ್ರೊ. ಸುಜನಾರವರ ರಚಿಸಿರುವ ಸಾಹಿತ್ಯಗಳಲ್ಲಿ ಬಹು ಶ್ರೇಷ್ಠ ಕೃತಿ ಎನಿಸಿರುವ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿಯಾದ " ಯುಗಸಂಧ್ಯಾ" ಕೃತಿಯು ಕನ್ನಡ ಸಾಹಿತ್ಯದಲ್ಲಿ ಸಂಚಲನ ಮೂಡಿಸಿದೆ. ದ್ವಾಪರಯುಗದ ಅಂತ್ಯ ಮತ್ತು ಕಲಿಯುಗಗಳ ಆರಂಭದ ಕಥೆಯನ್ನು ಎಣೆಯಲಾಗಿದೆ. ಬಹು ಮುಖ್ಯವಾಗಿ ದ್ವಾಪರ ಯುಗದಲ್ಲಿ ನಡೆದಿರುವ ತಪ್ಪುಗಳು ಮರುಕಳಿಸಿದರೆ ಭಯಂಕರ ಸರ್ವನಾಶ ಕಟ್ಟಿಟ್ಟ ಬುತ್ತಿಯಾಗಿದೆ ಎಂಬ ಎಚ್ಚರಿಕೆಯ ಸಂದೇಶವನ್ನು ರವಾನಿಸಲಾಗಿದೆ. ಈ ಕೃತಿಯಲ್ಲಿ ಕಂಡು ಬರುವ ಪ್ರಮುಖ ಅಂಶಗಳೆಂದರೆ ಎಲ್ಲಾ ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ ಮತ್ತು ಗಾಂಧಾರಿಯರ ದುಖಃ ಮುಗಿಲು ಮುಟ್ಟಿದ ಆಕ್ರಂದನವಾಗಿ ಕಂಡು ಬರುತ್ತದೆ. ಪುತ್ರ ಮಾಡುತ್ತಿದ್ದ ಎಲ್ಲಾ ಕೃತಿಮಗಳು ಗಮನಕ್ಕೆ ಬಂದರೂ ಕುರುಡು ಪುತ್ರ ವ್ಯಾಮೋಹ ಪರೋಕ್ಷವಾಗಿ ಪ್ರಚೋದನೆಗೊಳಿಸಿ ಸರ್ವನಾಶಕ್ಕೆ ಕಾರಣವಾದ ಬಗ್ಗೆ ಪಶ್ಚತ್ತಾಪ ಎದ್ದು ಕಾಣುತ್ತದೆ. 99 ಮಕ್ಕಳು ಅಳಿದರೂ ಚಿಂತೆಯಿಲ್ಲ ಆದರೆ ದುರ್ಯೋಧನ ಉಳಿದಿದ್ದರೆ ಸಾಕಾಗಿತ್ತು ಎಂಬ ಆತನ ಮನದಾಳದ ಮಾತು ಪಾಂಡವರ ಮೇಲಿನ ದ್ವೇಷ ದೂರವಾಗಿಲ್ಲವೆಂಬುದನ್ನು ಖಾತ್ರಿ ಪಡಿಸುತ್ತದೆ. ಸಾಮ್ರಾಟತನದ ವ್ಯಾಮೋಹ ರಕ್ತ ಸಂಬಂಧವನ್ನು ದೂರವಿರಿಸಿ ಆಳುವ ಮನಸ್ಥಿತಿ ಸದಾ ಎದ್ದು ಕಾಣುತ್ತದೆ. ಮತ್ತು ಗಾಂಧಾರಿಯು ಕಣ್ಣಿದ್ದು  ಪ್ರತಿವ್ರತೆತನಕ್ಕಾಗಿ ಕಣ್ಣಿಗೆ ಬಟ್ಟೆ ಕಟ್ಟಿ ಕುಳಿತುಕೊಳ್ಳುವ ಪ್ರಸಂಗ ಇಂದಿನ ಪೋಷಕರಿಗೆ ಮಕ್ಕಳನ್ನು ಉತ್ತಮ ರೀತಿಯಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಿ ಪೋಷಿಸದಿದ್ದರೆ ಎಲ್ಲಾ ದುರ್ಯೋಧನಾದಿಗಳೇ ಸೃಷ್ಠಿಯಾಗುತ್ತಾರೆ ಎಂಬ ಸತ್ಯವನ್ನು ಅನಾವರಣಗೊಳಿಸಿದೆ. ಮಕ್ಕಳನ್ನು ತಿದ್ದುವ ಅವಕಾಶವಿದ್ದರು ಕಣ್ಮುಚ್ಚಿ ಕುಳಿತರೆ ಮನೆಯೊಳಗೆ ನಿರೀಕ್ಷಿಸದ ಅನಾಹುತಗಳು ಹೆಚ್ಚುತ್ತವೆ ಎಂಬ ಸಂದೇಶ ರವಾನೆಯಾಗಿದೆ.

20 ಮತ್ತು 21ನೇ ಶತಮಾನದ ಕೊಂಡಿಯಾಗಿದ್ದ ಪ್ರೊ.ಸುಜನಾರವರು ದ್ವಾಪರಯುಗದೊಂದಿಗೆ ಕಲಿಯುಗದ ಪ್ರಚಲಿತ ವಿದ್ಯಾಮಾನಗಳನ್ನು ಸಂಯೋಜನೆ ಮಾಡಿ ಕಥೆಯನ್ನು ಎಣೆಯಲಾಗಿದೆ. ಘೋಷಕರ ಜವಾಬ್ದಾರಿ ಹೇಗಿರಬೇಕು, ಮಕ್ಕಳನ್ನು ಬೇಳೆಸುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳು, ಮಕ್ಕಳ ಮೇಲಿಟ್ಟಿರುವ  ಪ್ರೀತಿಯಲ್ಲಿ ಅತಿಯಾದ ಕಾಳಜಿಯ ಅನರ್ಥ ಜೀವನದ ಸೋಲಿಗೆ ಕಾರಣವಾಗುತ್ತದೆ. ದಾಯಾದಿ ಮತ್ಸರ ಯುದ್ಧದ ಭೀಕರ ಪರಿಣಾಮಗಳು ಅಂತಿಮವಾಗಿ ದೈವದ ಅನುಗ್ರಹವಿದ್ದರೆ ಸರ್ವವು ಯಶಸ್ಸು ಎಂಬ ದೈವಶಕ್ತಿ ಕೃಷ್ಣ ಮಾನವತಾರಿಯಾಗಿ ಕೆಲಸ ಮಾಡಿರುವುದು ಕಂಡು ಬರುತ್ತದೆ.

ಹೊಸ ಮನ್ವಂತರಕ್ಕೆ ದಿಕ್ಸೂಚಿಯಾಗಿರುವ ಈ ಕೃತಿಯು ವಿಶಿಷ್ಟವಾದ ಸ್ಥಾನಕ್ಕೇರಿದೆ. ಮೂಲ ವ್ಯಾಸ ಭಾರತ, ಪಂಪ ಭಾರತ ಮತ್ತು ಕುಮಾರ ವ್ಯಾಸ ಭಾರತದ ಕಥೆಗಳನ್ನು ಆಧಾರವಾಗಿರಿಸಿಕೊಂಡು ಪ್ರಸ್ತುತ ಕಾಲಘಟ್ಟಕ್ಕನುಗುಣವಾಗಿ ರಚಿಸಿದ್ದಾರೆ. ಪಾಂಡವರು ಮತ್ತು ಕೌರವರ ಜನನ, ಬೆಳವಣಿಗೆ, ವಿದ್ಯಾಭ್ಯಾಸ,  ಶಾಸ್ತ್ರ ವಿದ್ಯೆ

ಮತ್ತು ಶಸ್ತ್ರ ವಿದ್ಯೆಯ ಸಂದರ್ಭದಲ್ಲಿ ಕೌರವರು ಬೆಳೆಸಿಕೊಂಡ ವೈಮನಸ್ಸಿನ ಬಗ್ಗೆ ಪ್ರಸ್ತುತ ಸಾಮಾಜಿಕತೆಯಲ್ಲಿ ನಡೆಯುತ್ತಿರುವ ಘಟನೆಗಳನ್ನು ಸಂಯೋಜಿಸಿ ಸಂಭವಿಸಬಹುದಾದ ಅನಾಹುತಗಳ ಬಗ್ಗೆ ಮಾರ್ಮಿಕವಾಗಿ ಸತ್ಯವನ್ನು ಬಿಚ್ಚಿಟ್ಟಿದ್ದಾರೆ. ಈ ಕೃತಿಯು ಯುದ್ಧೋತ್ತರ ಘಟನೆಗಳನ್ನು ಪಾತ್ರಗಳ ಮೂಲಕ ಅಭಿವ್ಯಕ್ತಿಸುವ ಕೆಲಸ ಮಾಡಿದೆ. ಯುದ್ಧದ ಬದಲು ಯುದ್ಧವೇ ಬರದಂತೆ ಎಚ್ಚರ ವಹಿಸುವ ನೀತಿಯನ್ನು ತಿಳಿಸುತ್ತದೆ. ದ್ವಾಪರಯುಗದ ರಾಜಕೀಯ ಸ್ಥಿತ್ಯಂತರವನ್ನು ಇಂದಿನ ರಾಜಕೀಯದ ಜೊತೆ ಸಮೀಕರಿಸುವ ಮೂಲಕ ಸಾಮಾಜಿಕ ಅರಾಜಕತೆಯನ್ನು ಎತ್ತಿ ಹಿಡಿದ್ದಾರೆ. ಈ ಕೃತಿಯಲ್ಲಿ ಕೃಷ್ಣನ ಪಾತ್ರ ದೈವ ಮಾನವನಾಗಿರುವುದಕ್ಕಿಂತ ಸಾಮಾನ್ಯ ಮಾನವನ ಸಹಜ ವರ್ತನೆ ಪ್ರತಿಮೆಯಾಗಿ ಕಂಡು ಬರುತ್ತದೆ.

ಪ್ರೊ.ಸುಜನಾರವರು ತಮ್ಮ ಗುರುಗಳಾದ ಕುವೆಂಪುರವರ ಅಂತರಂಗದ ಶಿಷ್ಯರಾಗಿದ್ದರು."ಯುಗ ಸಂಧ್ಯಾ" ಕೃತಿಯು ತಮ್ಮ ಗುರುಗಳು ಬರೆದ ಮಹಾಕಾವ್ಯ "ಶ್ರೀ ರಾಮಾಯಣ ದರ್ಶನಂ" ಕೃತಿಯಂತೆ ಸರಳ ರಗಳೆಯಲ್ಲಿದೆ ಮತ್ತು ಮಹಾ ಛಂದಸ್ಸಿನ ದಾಟಿಯನ್ನು ಒಳಗೊಂಡಿದೆ. ಕೃತಿಯಲ್ಲಿ ಯುದ್ಧೋತ್ತರದ ಮಹಾಭಾರತದ ಕಥಾ ಹಿನ್ನಲೆಯಿದ್ದರು ಪ್ರಸ್ತುತ ಸಾರ್ವಜನಿಕ ಮತ್ತು ಸಾರ್ವತ್ರಿಕ ಜೀವನದ ಹಿನ್ನಲೆಯನ್ನು ಮೇಳೈಸಿದ್ದಾರೆ. ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ ಮತ್ತು ಗಾಂಧಾರಿಯರ ಪಾತ್ರಗಳಿಗೆ ಅರಿವಾಗಿ ಪಾಂಡವರ ಜೊತೆ ತಮ್ಮ ಅಂತಿಮ ದಿನಗಳನ್ನು ಕಳೆಯಲು ಬಯಸುವುದನ್ನು ಸೋದಾಹರಣವಾಗಿ ಚಿತ್ರಿಸಿದ್ದಾರೆ. ಇಲ್ಲಿ ಕುಂತಿಯು ಕೂಡ ತನ್ನ ಮಕ್ಕಳಿಗೆ 12 ವರ್ಷ ವನವಾಸ ಮತ್ತು 1 ವರ್ಷ ಅಜ್ಞಾತವಾಸವನ್ನು ಅನುಭವಿಸಲು, ಜೂಜಿನಲ್ಲಿ ಮೋಸದಿಂದ ಸರ್ವಸ್ವವನ್ನು ಕಳೆದುಕೊಂಡು ಮತ್ತು ಮಗಳ ಸಮಾನಳಾದ ದ್ರೌಪದಿಯ ವಸ್ತ್ರಾಪಹರಣಕ್ಕೆ  ಹಿನ್ನಲೆಗೆ ಕಾರಣರಾದ ಧೃತರಾಷ್ಟ್ರ ಮತ್ತು ಗಾಂಧಾರಿಯನ್ನು ಬಹಳ ಪ್ರೀತಿಯಿಂದ ಆತಿಥ್ಯ ಮತ್ತು ಆಶ್ರಯ ನೀಡುವ ಮೂಲಕ ಇದುವರೆಗೂ ಏನು ನಡೆದಿಲ್ಲವೆಂಬಂತೆ ನಡೆದುಕೊಂಡು ಹೋಗುವ ಔದಾರ್ಯ ಈ ಕೃತಿಯಲ್ಲಿ ಧ್ವನಿತವಾಗಿದೆ.

ಈ "ಯುಗ ಸಂಧ್ಯಾ" ಕೃತಿಯು ಎಲ್ಲಾ ವರ್ಗದ ಜನತೆಗೂ ಹಿತವೆನಿಸುವ ಶುದ್ಧವಾದ ಬದುಕನ್ನು ನಿರ್ವಹಿಸಲು ಸೂಕ್ತ ಮಾರ್ಗದರ್ಶನ ನೀಡುವಂತಿದೆ. ಇಲ್ಲಿ ಕೃಷ್ಣನ ಪಾತ್ರ ದೇವರಾಗುವುದಕ್ಕಿಂತ ಸಾಮಾನ್ಯರಲ್ಲಿ ಸಾಮಾನ್ಯನಾಗಿ ನಡೆದುಕೊಳ್ಳುವ ಬಗೆ ವಿಶೇಷವಾಗಿದೆ. ಯುದ್ಧಾನಂತರ ಪ್ರತಿ ಪಾತ್ರಗಳ ಪಾಪ–ಪುಣ್ಯಗಳನ್ನು ಲೆಕ್ಕಚಾರ ಮಾಡಿಸುವುದಷ್ಟೇ ಅಲ್ಲ ಅವುಗಳ ವ್ಯಕ್ತಿತ್ವದ ತೌಲನಿಕ ಆತ್ಮವಲೋಕನವನ್ನು ಮಾಡಿಸಿದ್ದಾರೆ. ಅಳಿದುಳಿದ ಪಾತ್ರಗಳ ಬಾಯಲ್ಲಿ ತಾವು ಮತ್ತು ತಮ್ಮ ಕುಟುಂಬದವರು ಮಾಡಿದ ದುರಾಚಾರಗಳ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ. ಪ್ರತಿಯೊಬ್ಬರ ಕರ್ಮ

ಫಲಗಳ ಮೇಲೆ ಸಾವು–ನೋವುಗಳು ಎದರಾಗುತ್ತವೆ ಎಂಬುದನ್ನು ಖಚಿತ ಪಡಿಸಿದಂತಿದೆ.

ಯುಗ ಸಂಧ್ಯಾ ಕೃತಿಯು ಹೊಸ ಮನ್ವಂತರಕ್ಕೆ ಭಾಷ್ಯ ಬರೆಯುವುದರ ಜೊತೆಗೆ ಕಲಿಯುಗದ ನಡೆಯ ಬಗ್ಗೆಯು ಮಾರ್ಗದರ್ಶನವಿದೆ. ಈ ಕಾವ್ಯದಲ್ಲಿ ಬರುವ ಧೃತರಾಷ್ಟ್ರ ಮತ್ತು ಗಾಂಧಾರಿಯರ ಪ್ರಲಾಪ ಎಲ್ಲಾ ಪೋಷಕರಿಗೂ ಎಚ್ಚರಿಕೆಯ ಘಂಟೆಯಾಗಿದೆ. ನಾವು ಮಕ್ಕಳನ್ನು ಬೆಳೆಸುವಲ್ಲಿ ಎಚ್ಚರ ತಪ್ಪಿ ಹಾಳಾಗಿದ್ದೇವೆ ಮತ್ತು ಕುರುಡು ಪುತ್ರ ವ್ಯಾಮೋಹವು ಪೋಷಕರಿಗೆ ದುರ್ಗತಿ ತರುತ್ತದೆ ಎಂಬುದನ್ನ ಆ ಪಾತ್ರಗಳ ಮೂಲಕವೇ ಪ್ರಸ್ತಾಪಿಸಿ ಹೇಳಿಸಲಗಿದೆ. ಕಣ್ಣಿದ್ದು ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳುವ ಮೂಲಕ ಮಕ್ಕಳನ್ನು ತಿದ್ದುವಲ್ಲಿ ವಿಫಲವಾಗಿರುವ ಬಗ್ಗೆ ತನ್ನ ಬಗ್ಗೆ ತಾನೇ ಅಸಹ್ಯ ಪಟ್ಟುಕೊಂಡು ಅನೀತಿ ಅನುಸರಿಸಿದ್ದರ ಬಗ್ಗೆ ಜಗತ್ತಿಗೆ ತಾಯಿಯ ಜವಬ್ದಾರಿಯನ್ನು ಎಚ್ಚರಿಸಿದೆ. ಅದೇ ರೀತಿ ತಂದೆಯ ಪಾತ್ರವು ಮುಖ್ಯವಾಗಿದೆ. ಅರಗಿನ ಮನೆಯಲ್ಲಿ ಪಾಂಡವರನ್ನು ಸುಡುವ ಕುತಂತ್ರದ ಬಗ್ಗೆ ತಂದೆಯ ಬಳಿ ಹೇಳಲು ಬಂದು ಹೊರ ಬಾಗಿಲಿನಿಂದಲೇ  ಹಿಂತಿರುಗುತ್ತಿದ್ದ ದುರ್ಯೋಧನನು ಏಕಾಂತವಾಗಿ ತಂದೆಯ ಬಳಿ ಯಾರು ಇಲ್ಲದ ಸಮಯದಲ್ಲಿ ಬಂದು ತನ್ನ ಕುತಂತ್ರವನ್ನು ತಿಳಿಸುತ್ತಾನೆ. ದುರ್ಯೋಧನನನ್ನು ಕುರಿತು ಧೃತರಾಷ್ಟ್ರ ಈಗಾಗಲೇ ನಾಲ್ಕೈದು ಬಾರಿ ಒಳಗೆ ಬರಲು ಪ್ರಯತ್ನಸಿ ಏಕೆ ವಾಪಸ್ಸಾದೆ ಎಂದು ಕೇಳುತ್ತಾನೆ  ಅದಕ್ಕೆ ದುರ್ಯೋಧನನು ನಿಮ್ಮ ಬಳಿ ಸತ್ಯಸಂಧ ವಿಧುರ ಇದ್ದುದ್ದರಿಂದ ಕುತಂತ್ರದ ಬಗ್ಗೆ ಹೇಳಲು ಮನಸ್ಸಾಗಲಿಲ್ಲ ಎಂದು ಹೇಳುತ್ತಾನೆ. ಇದನ್ನು ಗಮನಿಸಿದಾಗ ಸತ್ಯಕ್ಕೆ ತಲೆ ಬಾಗುತ್ತಿದ್ದ ರೀತಿ ತಿಳಿದು ಬರುತ್ತದೆ. ಇಲ್ಲಿ ಕುರುಡು ತಂದೆಗೆ ಮಗ ಬಂದು ಹೋಗಿರುವ ಸಂಗತಿ  ಒಳ ಮನಸ್ಸಿನಿಂದ ತಿಳಿದು ಪ್ರಶ್ನಿಸುವ ಕಲೆಗಾರಿಕೆ ಬಗ್ಗೆ ಲೇಖಕರು ಸೂಕ್ಷ್ಮವಾಗಿ ಉಲ್ಲೇಖಿಸಿದ್ದಾರೆ. ಮಗ ತಪ್ಪು ಮಾಡುತ್ತಿದ್ದಾನೆ ಎಂಬುದು ತಿಳಿದರು ಅದನ್ನು ವಿರೋಧಿಸದೆ ಮೌನವಾಗುತ್ತಾನೆ. ಇದು ದುರ್ಯೋಧನನ ದುಷ್ಟ ಕೆಲಸಕ್ಕೆ ಕುಮ್ಮಕ್ಕು ನೀಡಿದಂತಾಗಿದೆ. ಮಕ್ಕಳನ್ನು ಬೆಳೆಸುವಾಗ ತಂದೆ ತಾಯಿಯರ ಪಾತ್ರ ಸಮಾನವಾಗಿರುತ್ತದೆ ಎಂಬುನ್ನ ಒತ್ತಿ ಹೇಳಿದ್ದಾರೆ. ಬಾಲ್ಯದಲ್ಲಿಯೇ ಮಕ್ಕಳನ್ನು ಸನ್ಮಾರ್ಗ ಮತ್ತು ಸಂಸ್ಕಾರಗಳನ್ನು ಕಲಿಸದಿದ್ದರೆ ಮುಂದೊಂದು ದಿನ ನಮ್ಮಂತೆ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಪೋಷಕರಿಗೆ ಎಚ್ಚರಿಸಿದ್ದಾರೆ. ಧರ್ಮರಾಯನ ಪಟ್ಟಾಭಿಷೇಕವಾದ ಮೇಲೆ ಎಲ್ಲಾ ಪಾಂಡವರು ಧೃತರಾಷ್ಟ್ರ ಮತ್ತು ಗಾಂಧಾರಿಯನ್ನು ಪ್ರೀತಿಯಿಂದ ಕಾಣುವ ಬಗೆ ಅತ್ಯಂತ ವಿನಮ್ರವಾಗಿ ಕಂಡು ಬರುತ್ತದೆ. ಕೃಷ್ಣನಿಗೂ ಮಾನವನಂತೆ ಸಾವು ಸಂಭವಿಸುವ ಮೂಲಕ ದ್ವಾಪರಯುಗದ ಅಂತ್ಯಕ್ಕೆ ಸಾಕ್ಷಿಯಾಗಿದೆ. ಮನೋವಿಕಾರಗಳು ದೂರ ಸರಿಯದ ಹೊರತು ಸನ್ಮಾರ್ಗ ಸಾಧ್ಯವಿಲ್ಲವೆಂಬುದು

ಕೃತಿಯಲ್ಲಿ ಘನೀಕೃತವಾಗಿದೆ. ಯುಗ ಸಂಧ್ಯಾ ಕೃತಿಗಿಂತ ಮುನ್ನ ರಚಿತವಾದ ಎಲ್ಲಾ ಮಹಾಭಾರತ ಕಥೆಗಳು ಕುರುಕ್ಷೇತ್ರದ ನಂತರ ವಿಶೇಷವಾಗಿ ಗಮನ ಸೆಳೆದಂತೆ ಕಾಣುವುದಿಲ್ಲ. ಆದರೆ ಈ ಕೃತಿಯು ಮಹಾಭಾರತದ ಮತ್ತೊಂದು ದಿವ್ಯ ದರ್ಶನವನ್ನು ನೀಡುತ್ತದೆ. ಧರ್ಮರಾಯನನ್ನು ಬಿಟ್ಟು ಉಳಿದ ಪಾಂಡವರ ಭೀಕರ ಅಂತ್ಯವನ್ನು ತಿಳಿಸಿದ್ದಾರೆ. ಮನಸ್ಸಿನ ದ್ವೇಷ ಎಲ್ಲರನ್ನು ನಾಶ ಮಾಡುವ ಜೊತೆಗೆ ದ್ವೇಷಿಸುವವರನ್ನು ಭೀಕರವಾಗಿ ನಾಶಗೊಳಿಸುತ್ತದೆ ಎಂಬುದನ್ನು ಸಾರಿದೆ. ಈ ಕೃತಿಯಲ್ಲಿ ಪ್ರತಿ ಪಾತ್ರದ ಆತ್ಮಾವಲೋಕನವನ್ನು ಆಯಾಯ ಪಾತ್ರಗಳ ಮೂಲಕ ಮಾಡಿಸಿ ನಾವು ಇಂತಹ ತಪ್ಪನ್ನು ಮಾಡಿ ಅನಾಹುತವನ್ನು ಹೆದರಿಸಿದ್ದೇವೆ ನಮ್ಮ ಜೊತೆ ನಮ್ಮ ಕುಟುಂಬದವರನ್ನು ಸಂಕಷ್ಟಕ್ಕೆ ತಳ್ಳಿದ್ದೇವೆ ಎಂದು ವಿನಮ್ರವಾಗಿ ಹೇಳುವ ನಡೆಯನ್ನು ಇಲ್ಲಿ ಕಾಣುತ್ತೇವೆ. ನಮ್ಮ ದುರ್ಗತಿಗೆ ನಾವೇ ಕಾರಣರು. ನಮ್ಮ ಆಲೋಚನೆ, ನಮ್ಮ ಬೆಳೆಯುವ ಪರಿಸರ ಪ್ರಭಾವ, ಪೋಷಕರ ಸೂಕ್ತ ಮಾರ್ಗದರ್ಶನದ ಕೊರತೆ ಮತ್ತು ಸಹವಾಸ ದೋಷ ಇವು ತಳಹದಿಯಾಗಿ ಕೆಲಸ ಮಾಡುತ್ತವೆ. ದುರ್ಯೋಧನನ ಪೋಷಕರಿಗೆ ತಮ್ಮ ತಪ್ಪಿನ ಅರಿವಾಗುವ ವೇಳೆಗೆ ಊಹಿಸಲಾಗದ ಅನಾಹುತಗಳು ನಡೆದೇ ಹೋಗಿದ್ದವು. ಈ ಕೃತಿಯಲ್ಲಿ ಯುದ್ಧಾನಂತರದ ಘಟನೆಗಳನ್ನು ಹೇಳುವ ಜೊತೆಗೆ ಎಲ್ಲಾ ಪಾತ್ರಗಳ ಅವಲೋಕನ ಮತ್ತು ಸಮ್ಮಿಲನ ಪರ್ವವೇ ಕಂಡು ಬರುತ್ತದೆ.

**ಡಾ.ಬಿ.ಸಿ.ವಿಜಯಕುಮಾರ್**

ಬಲ್ಲೇನಹಳ್ಳಿ

ಮೊ : 9008879719

# ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರ ಆಯ್ದ ವಚನಗಳು

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಕಾಪನಹಳ್ಳಿ ಸಮೀಪದ ಗಜರಾಜಗಿರಿ ಏಕಶಿಲಾ ಬೆಟ್ಟದಲ್ಲಿ ಬಂದು ನೆಲೆಸಿ, ಅದನ್ನು ತಪೋ ಭೂಮಿಯನ್ನಾಗಿಸಿ ತಮ್ಮ ಜೀವಿತದ ಅಂತ್ಯದವರೆಗೂ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರ ಯತಿಗಳು ತೋಂಟದ ಸಿದ್ದಲಿಂಗೇಶ್ವರ ಯತಿಗಳ ಶಿಷ್ಯರೆಂದು ಹೇಳಲಾಗಿದೆ. ಯಾವುದೇ ವಚನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರ ಕಾಲ ದೇಶ ಅಥವಾ ಪೂರ್ವಪರ ಮಾಹಿತಿಗಳ ದಾಖಲೆಗಳು ಲಭ್ಯವಿಲ್ಲ. ಕ್ರಿ.ಶ. 1584 ಶ್ರೀ ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ ಇವರನ್ನು ತೋಂಟದ ಸಿದ್ದಲಿಂಗರ ಶಿಷ್ಯರೆಂದು ಉಲ್ಲೇಖಿಸಲಾಗಿದೆ. ಚೆನ್ನಂಜೆದೇವ (1580), ಯಳಮಲೆ ಗುರುಶಾಂತದೇವ (1600), ಮತ್ತು ಸಂಪಾದನೆ ಸಿದ್ದವೀರಣ್ಣ ಒಡೆಯ ದೇವರುಗಳು (1600) ತಮ್ಮ ಕೃತಿಗಳಲ್ಲಿ ಸ್ವತಂತ್ರ ಸಿದ್ದಲಿಂಗೇಶ್ವರರ ಬಗ್ಗೆ ಉಲ್ಲೇಖಿಸಿರುವುದರಿಂದ ಇವರ ಕಾಲವನ್ನು 15ನೇ ಶತಮಾನದ ಅಂತ್ಯ ಭಾಗ ಅಥವಾ 16ನೇ ಶತಮಾನದ ಆದಿ ಭಾಗವೆಂದು ವಿದ್ವಾಂಸರು ಗುರುತಿಸಿದ್ದಾರೆ.

ಸ್ವತಂತ್ರ ಸಿದ್ಧಲಿಂಗೇಶ್ವರರು ಸುಮಾರು 700ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆಂದು ಹೇಳಲಾಗುತ್ತಿದ್ದರೂ ಪ್ರಸ್ತುತ ಲಭ್ಯವಿರುವ 435 ವಚನಗಳನ್ನು ಕಾಪನಹಳ್ಳಿ ಗವಿಮಠದ ನಿಜಗುರು ಪ್ರಕಾಶನಾಲಯದಿಂದ ಪ್ರಕಟಿಸಿದ್ದಾರೆ.

ವಚನಗಳಲ್ಲದೆ, ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರು ಜಂಗಮ ರಗಳೆ ಮತ್ತು 21 ವಚನಗಳ ಮುಕ್ತ್ಯಾಂಗನಕಂಠಮಾಲೆಯನ್ನು ಬರೆದಿದ್ದಾರೆ.

ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರು ಯತಿಗಳು, ಶರಣರು, ಶಿವಭಕ್ತರು, ಪವಾಡ ಪುರುಷರು ಆಗಿದ್ದರು.ಇವರು ತಮ್ಮ ವಚನಗಳಲ್ಲಿ ಆಧ್ಯಾತ್ಮದ ಬಗ್ಗೆ ಗುರು–ಶಿಷ್ಯರ ಸಂಬಂಧದ ಬಗ್ಗೆ ಭಾವ–ನಿರ್ಭಾವ, ಶಿವ–ಶರಣ, ಪೂಜೆ–ಯೋಗ, ಮುಕ್ತಿ–ಸಂಸಾರ, ಷಟ್‌ಸ್ಥಳ ಮುಂತಾದ ವಿಚಾರಗಳ ಬಗೆಗೆ ಪ್ರಸ್ತುತ ಪಡಿಸಿದ್ದಾರೆ.

ಪ್ರಸ್ತುತ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರ ಯತಿಗಳ ಕೆಲ ಆಯ್ದ ವಚನಗಳ ಬಗೆಗೆ ವಿಚಾರ ಮಂಡಿಸಲಿದ್ದೇನೆ.

ಇವರ ವಚನಗಳ ಅಂಕಿತನಾಮ 'ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ'. ಮೊದಲಿಗೆ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ಯತಿಗಳ ವಚನಗಳಲ್ಲಿ ಕಂಡು ಬರುವ ಗುರು–ಶಿಷ್ಯರ ಸಂಬಂಧದ ಬಗ್ಗೆ ತಿಳಿಯುವುದಾದರೆ,

*ಗುರುವೇ ನಮೋ ನಮೋ*
*ಶರಣಾಗತರಕ್ಷಕ ಗುರುವೇ ನಮೋ ನಮೋ*
*ಕೀಡಿಕುಂಡಲಿಯ ಉಪದೇಶದಂತೆ ಎನ್ನ*
*ನಿಮ್ಮಂತೆ ಮಾಡಿದ ಗುರುವೆ ನಮೋ ನಮೋ*
*ನಿತ್ಯ ಪರಮೈಶ್ವರ್ಯದ ಮುಕ್ತಿ ರಾಜ್ಯವ*
*ಕೊಟ್ಟ ಗುರುವೆ ನಮೋ ನಮೋ*
*ಸಕಲವನೆನ್ನೊಳಗಿರಿಸಿ ಸಕಲದೊಳಹೊರಗೆ*
*ಎನ್ನ ವ್ಯಾಪಕವ ಮಾಡಿ ತೋರಿದ*
*ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಗುರುವೇ ನಮೋ ನಮೋ॥*

ಈ ವಚನದಲ್ಲಿ ಗುರುವಿನ ಮಹತ್ವದ ಬಗ್ಗೆ ಚಿತ್ರಿಸಲಾಗಿದೆ.

ಪ್ರಾಚೀನ ಭಾರತೀಯ ಕಾಲಘಟ್ಟದಿಂದಲೂ ಗುರುವಿಗೆ ಉನ್ನತವಾದ ಸ್ಥಾನವಿದೆ. ಹಿಂದೆ ಮತ್ತು ಪ್ರಸ್ತುತ ಸಂದರ್ಭಗಳಲ್ಲಿಯೂ ಶಿಷ್ಯರಿಗೆ ಸಚ್ಚಾರಿತ್ರ್ಯ, ಸನ್ಮಾರ್ಗ, ಉತ್ತಮ ವ್ಯಕ್ತಿತ್ವ, ಮುಕ್ತಿಯ ಬಗೆಗೆ ತಮ್ಮ ವಿಚಾರ ಮತ್ತು ವಿದ್ಯೆಯನ್ನು ಧಾರೆಯೆರೆಯುತ್ತಿದ್ದಾರೆ. ಹೀಗಿರುವಾಗ ಯಾವ ಶಿಷ್ಯ, ಗುರುವಿಗೆ ಶರಣಾಗುತ್ತಾನೋ, ಆತನನ್ನು ನಂಬುತ್ತಾನೋ, ಆತನಿಗೆ ವಿಧೇಯನಾಗಿರುತ್ತಾನೋ ಆತನನ್ನು ಗುರು ರಕ್ಷಿಸುತ್ತಾನೆ. ಆ ಶಿಷ್ಯನಲ್ಲಿ ತನ್ನಂತೆ ಸಚ್ಚಾರಿತ್ರ್ಯ, ಸನ್ಮಾರ್ಗ, ಉತ್ತಮ ವ್ಯಕ್ತಿತ್ವ, ಪಾಂಡಿತ್ಯಗಳು ನೆಲೆಯೂರುವಂತೆ ಮಾಡುತ್ತಾರೆ. ಮುಕ್ತಿಯ ದಾರಿಯನ್ನ ಗುರುವಾದವನು ತೋರಿಸುತ್ತಾನೆ. ಹೀಗೆ ಸಕಲ ಉತ್ತಮವಾದುದ್ದನೆಲ್ಲವನ್ನು ಧಾರೆಯೆರೆಯುವ ಗುರುಗಳಿಗೆ ಶಿಷ್ಯರು ವಿಧೇಯರಾಗಿರಬೇಕು. ಅವರನ್ನು ಗೌರವ, ಭಕ್ತಿ ಮತ್ತು ಪ್ರೀತಿಯಿಂದ ಕಾಣಬೇಕು ಎಂಬುದು ವಚನದ ಆಶಯವಾಗಿದೆ.

ಪ್ರಸ್ತುತ ಸನ್ನಿವೇಶದಲ್ಲಿ ಗುರು ಶಿಷ್ಯರ ಸಂಬಂಧ ಹಿಂದಿನಷ್ಟು ಪ್ರಬಲವಾಗಿಲ್ಲವೆಂಬುದು ನನ್ನ ಭಾವನೆ. ಕಾಲ ಬದಲಾದಂತೆ ಗುರುವಿನ ಮಹತ್ವ, ಗೌರವದಲ್ಲಿ ವ್ಯತ್ಯಯಗಳುಂಟಾಗಿವೆ. ಆದರೂ ವಿದ್ಯೆ, ಬುದ್ಧಿ, ಉತ್ತಮ ಚಾರಿತ್ರ್ಯ ರೂಪಿಸಿದ ಗುರುಗಳಿಗೆ ವಿಧೇಯನಾಗಿರಬೇಕಾದುದು ಶಿಷ್ಯನ ಆದ್ಯ ಕರ್ತವ್ಯ.

*ಗುರುವ ನರಭಾವದಲಿ ಕಂಡಡೆ, ನರಕ ತಪ್ಪದು ನೋಡಯ್ಯಾ*
*ಗುರುವ ಹರಭಾವದಲಿ ಕಂಡಡೆ, ಮೋಕ್ಷ ತಪ್ಪದು ನೋಡಯ್ಯಾ*
*ಗುರು ಪೂಜೆಯ ಹರ ಪೂಜೆಯಂದರಿದು*

*ಗುರು ಪೂಜೆಯ ಮಾಡಿದೆಡೆ*
*ಹರಪೂಜೆ ತಪ್ಪದು ನೋಡಯ್ಯಾ*
*ಗುರುವಿನ ಒಲುಮೆಯೇ, ಹರನ ಒಲುಮೆ*
*ಇದು ಸತ್ಯ, ನೀನೆ ಬಲ್ಲೆ*
*ನಿಜಗುರು ಸ್ವತಂತ್ರ ಸಿದ್ದಲಿಂಗೇಶ್ವರ*
*ನಿಮ್ಮ ಭಕ್ತನ ಗುರುಭಕ್ತಿಯಿದು.*

ಈ ವಚನವು "ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೋ ಮಹೇಶ್ವರ, ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ" ಎಂಬ ಉಕ್ತಿಗೆ ಸೂಕ್ತ ಉದಾಹರಣೆಯಂತಿದೆ.

ಗುರುವನ್ನ ಸಾಮಾನ್ಯರಂತೆ, ನಿಕೃಷ್ಠವಾಗಿ ಕಂಡರೆ ನರಕ ತಪ್ಪದು, ಅದೇ ಗುರುವನ್ನು ಹರಭಾವ ಅಥವಾ ದೈವ ಭಾವದಿಂದ ಕಂಡಾಗ ಆತನಿಗೆ ಮುಕ್ತಿ ತಪ್ಪದು. ಹೀಗಿರುವಾಗ ಗುರು ಭಕ್ತಿಯೇ ಹರ ಭಕ್ತಿಯೆಂದು ತಿಳಿಯಬೇಕು, ಗುರು ಪೂಜೆಯೇ ಹರ ಪೂಜೆಯೆಂದು ತಿಳಿಯಬೇಕು. ಗುರುವೇ ಸಾಕ್ಷಾತ್ ದೇವರಂತಿರುವಾಗ ಗುರುವಿನ ಮೇಲಿನ ಭಕ್ತಿ, ಪ್ರೀತಿ, ಶಿವನ ಮೇಲಿನ ಭಕ್ತಿ, ಪ್ರೀತಿಯಂತೆ. ಗುರುವನ್ನು ಭಕ್ತಿಯಿಂದ ಕಂಡರೆ ದೈವ ಮೆಚ್ಚುವುದು ಅಷ್ಟೇ ಅಲ್ಲದೇ ಗುರುವಿನ ಪ್ರೀತಿಯೇ ಶಿವನ ಪ್ರೀತಿ ಎಂಬುದನ್ನು ಈ ವಚನದ ಮೂಲಕ ತಿಳಿಸಿದ್ದಾರೆ.

ಅಂದರೆ ದೈವ ಸ್ವರೂಪಿಯಾದ ಗುರುಗಳನ್ನು ದೇವರ ಸಮಾನರೆಂದು ತಿಳಿಯಬೇಕು.ಗುರುಗಳನ್ನು ಭಕ್ತಿ, ಪ್ರೀತಿ. ಗೌರವದಿಂದ ಕಂಡಲ್ಲಿ ಅಂತಹ ಶಿಷ್ಯರನ್ನು ಶಿವ ಮೆಚ್ಚುವನು ಎಂಬುದು ವಚನದ ಆಶಯವಾಗಿದೆ.

ನುಡಿ ಅಥವಾ ವಚನದ ಬಗೆಗೆ ಸ್ವತಂತ್ರ ಸಿದ್ದಲಿಂಗೇಶ್ವರರ ವಚನ

*ಹಾವಾಡಿಗ ಹಾವನಾಡಿಸುವಲ್ಲಿ, ತನ್ನ ಕಾಯ್ದುಕೊಂಡು*
*ಹಾವನಾಡಿಸುವಂತೆ,*
*ಆವ ಮಾತನಾಡಿದಡೂ, ತನ್ನ ಕಾಯ್ದು ಆಡಬೇಕು.*
*ಅದೆಂತಂದಡೆ,*
*ತನ್ನ ವಚನವೇ ತನಗೆ ಹಗೆಯುವುದಾಗಿ*
*ಅನ್ನಿಗರಿಂದ ಬಂದಿತ್ತೆನ್ನಬೇಡ*
*ಅಳಿವುದು ಉಳಿವುದು ತನ್ನ ವಚನದಲ್ಲಿಯೇ ಅದೇ*
*ನಿಜಗುರು ಸ್ವತಂತ್ರ ಸಿದ್ದಲಿಂಗೇಶ್ವರ*
*ಹಗೆಯು, ಕೆಳೆಯು ತನ್ನ ವಚನವೇ ಬೇರಿಲ್ಲ.*

ಈ ವಚನವು ಮಾತುಗಾರಿಕೆಯ ಮಹತ್ವವನ್ನು ತಿಳಿಸುತ್ತದೆ. ಈ ಹಿಂದೆ ಬಸವಣ್ಣನವರ "ನುಡಿದರೆ ಮುತ್ತಿನ ಹಾರದಂತಿರಬೇಕು" ಎಂಬ ವಚನದಂತೆ, ಇಲ್ಲಿ ನುಡಿ ಹೇಗಿರಬೇಕೆಂದು ಸ್ವತಂತ್ರ ಸಿದ್ದಲಿಂಗೇಶ್ವರರು ತಿಳಿಸಿದ್ದಾರೆ.

ಹಾವಾಡಿಸುವವ ಹೇಗೆ ತನ್ನ ರಕ್ಷಣೆಯನ್ನು ಮಾಡಿಕೊಂಡು ಹಾವನಾಡಿಸುವನೋ ಅಂತೆಯೇ ಯಾವುದೇ ವ್ಯಕ್ತಿ ನುಡಿಯುವಾಗ, ಮಾತನಾಡುವಾಗ ಆ ಮಾತಿನಿಂದ ಉಂಟಾಗಬಹುದಾದ ಪರಿಣಾಮದ ಬಗೆಗೆ ಎಚ್ಚರವನ್ನಿಟ್ಟುಕೊಂಡು ಮಾತನಾಡಬೇಕು. ಏಕೆಂದರೆ ಆ ಮಾತುಗಳಿಂದಲೇ ಗೆಳೆತನವನ್ನು ಬೆಳೆಸಿಕೊಳ್ಳಬಹುದು ಹಾಗೆಯೇ ಹಗೆತನವನ್ನು ಬೆಳೆಸಬಹುದು. ಆದ್ದರಿಂದ ಉತ್ತಮ ನುಡಿಯ ಮೂಲಕ ಸ್ನೇಹವನ್ನು ಬೆಳೆಸುವುದು ಮುಖ್ಯವೇ ಹೊರತು ವೈರತ್ವವನ್ನಲ್ಲ.

ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರ ಲೌಕಿಕ ವಚನಗಳು

*ಆಸೆಯೆಂಬ ವೇಶಿ ಆರನಾದರೂ ತನ್ನತ್ತ ಕರೆವಳು*
*ಈ ಆಸೆಯೆಂಬವಳು ಆರನಾದರೆಯೂ ಫಾಸಿ ಮಾಡಿ*
*ತನು ಮನವ ವ್ರಯವ ಮಾಡುವಳು*
*ಈ ಆಸೆಯೆಂಬ ವೇಶ್ಯೆಯ ಒತ್ತೆಯ ಕೊಡದ*
*ನಿರಾಶಿಗಳೆಂಬುವರನಾರನೂ ಕಾಣೆ,*
*ನಿಜಗುರು ಸ್ವತಂತ್ರ ಸಿದ್ದಲಿಂಗೇಶ್ವರ.*

"ಆಸೆಯೇ ದುಃಖಕ್ಕೆ ಮೂಲ" ಎಂಬ ಗೌತಮ ಬುದ್ಧರ ಮಾತಿನಂತೆ ಆಸೆಯೆಂಬುದು ಮನುಷ್ಯನ ದೇಹ ವ್ಯಕ್ತಿತ್ವವನ್ನು ಹಾಳು ಮಾಡಬಲ್ಲದು.

ಈ ಆಸೆಯೆಂಬುದು ದೇಹವನ್ನು, ಮನಸ್ಸನ್ನು, ಸಮಯವನ್ನು ವ್ಯರ್ಥ ಮಾಡುತ್ತದೆ. ಆಸೆಯು ಮನಸ್ಸಿಗೆ ನೋವನ್ನುಂಟು ಮಾಡುತ್ತದೆ.ಇದು ತಿಳಿದಿದ್ದರೂ ಸಹ ನಮ್ಮ ಜನರು ಈ ಆಸೆಯೆಂಬ ಮೋಹದಿಂದ ಹೊರಬರುವುದೇ ಇಲ್ಲ. ಆಸೆಯೆಂಬುದು ನಮ್ಮ ನೋವಿಗೆ ಮೂಲ ಕಾರಣ. ಇದನ್ನರಿತು ನಾವು ಆಸೆಗೆ ಕಡಿವಾಣ ಹಾಕಿಕೊಳ್ಳಬೇಕೇಂಬುದು ಈ ವಚನದ ಆಶಯವಾಗಿದೆ.

*ಆಚಾರವನನಾಚಾರವ ಮಾಡಿ ನುಡಿವರು*
*ಅನಾಚಾರವನಾಚಾರವ ಮಾಡಿ ನುಡಿವರು*
*ಸತ್ಯವನಸತ್ಯವ ಮಾಡಿ ನುಡಿವರು*
*ಅಸತ್ಯವಸತ್ಯವ ಮಾಡಿ ನುಡಿವರು*
*ವಿಷವ ಅಮೃತವೆಂಬರು, ಅಮೃತವ ವಿಷವೆಂಬರು*
*ಸಹಜವನರಿಯದ ಅಸಹಜರಿಗೆ*
*ಶಿವನೊಲಿಯೆಂದೆಡೆ ಎಂತೊಲಿವನಯ್ಯ*
*ನಿಜಗುರು ಸ್ವತಂತ್ರ ಸಿದ್ದಲಿಂಗೇಶ್ವರ*
*ನೀ ಮಾಡಿದ ಮಾಯವ ನೋಡಿ ನಾ ಬೆರಗಾದೆನು॥*

ಇಂದಿನ ಸಮಾಜದಲ್ಲಿ ಸತ್ಯಕ್ಕಿಂತ ಸುಳ್ಳು ಬೇಗ ಪ್ರಚುರವಾಗುತ್ತದೆ. ಆಚಾರವನ್ನು ಅನಾಚಾರವೆಂತಲೂ, ಅನಾಚಾರವನ್ನು ಆಚಾರವೆಂತಲೂ ಕರೆಯುವ ಪರಿಸ್ಥಿತಿ

ಎದುರಾಗಿದೆ. ಬಂಡವಾಳಶಾಹಿಗಳು, ಶ್ರೀಮಂತ ವರ್ಗದವರು, ದುರ್ಜನರು ಸಹಜವಾದವನ್ನು ಅರ್ಥ ಮಾಡಿಕೊಳ್ಳದೆ ಸಮಾಜದ ಶೋಷಣೆಯಲ್ಲಿ ತೊಡಗುತ್ತಿದ್ದಾರೆ. ಇಂತಹ ಜನರು ದೇವರ ಬಳಿ ಒಳಿತಾಗಲಿ ಎಂದು ಪ್ರಾರ್ಥಿಸಿಕೊಂಡರೆ ದೇವರು ಒಲಿವನೇ, ಖಂಡಿತಾ ಸಾಧ್ಯವಿಲ್ಲ.

ಸಂಸಾರದ ಬಗೆಗೆ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರ ವಚನ

***ಸಂಸಾರ ಸೌಖ್ಯವಲ್ಲ, ಸಂಸಾರ ಸೌಖ್ಯವಿಲ್ಲ***
***ಇಹಲೋಕ, ಪರಲೋಕ ಸೌಖ್ಯವಲ್ಲ, ಸ್ಥಿರವಲ್ಲ***
***ಗೃಹಪಾಶ, ಕ್ಷೇತ್ರ ಭ್ರಮೆ ಬಳಸಿ ಬಳಸಿ ಬರುತ್ತಿದೆ***
***ಬಿಡುಬಿಡು ವಾಂಛೆಯ ಆಗ ಹುಟ್ಟಿ ಬೇಗ ಸಾವವರ ಕಂಡು***
***ಮತ್ತೇಕೆ ಸಂಸಾರದಾಸೆ?***
***ನಿನ್ನ ದೇಹ ಸ್ಥಿರವಲ್ಲ, ನೀ ಬಂದುದನರಿದು***
***ಹೋಹ ಗತಿ ಪಥವ ತೆರಹು ಮಾಡು***
***ನಿಜಗುರು ಸ್ವತಂತ್ರ ಸಿದ್ದಲಿಂಗೇಶ್ವರನಲ್ಲಿ ಒಂದಹರೆ॥***

ಸಂಸಾರವೇ ಜೀವನದ ಮುಖ್ಯ ಭಾಗವಲ್ಲ, ಸುಖವೂ ಅಲ್ಲ. ಇಹಲೋಕ, ಪರಲೋಕವೂ ಸ್ಥಿರವಲ್ಲ. ಹೀಗಿರುವಾಗ ಮಾನವನು ಸಂಸಾರವೆಂಬ ಆಸೆಗೆ ಮರುಳಾಗಿ ಬದುಕುತ್ತಿದ್ದಾನೆ. ಆಗತಾನೆ ಹುಟ್ಟಿ ಬೇಗ ಸಾಯುವವರನ್ನು ಕಂಡರೂ ಮನುಷ್ಯ ಸಂಸಾರದಾಸೆಯನ್ನು ಬಿಡುವುದೇ ಇಲ್ಲ. ಆದರೆ ಮನುಷ್ಯ ತನ್ನ ದೇಹ, ಸಂಸಾರ, ಇಹಲೋಕ, ಪರಲೋಕ ಸ್ಥಿರವಲ್ಲವೆಂದು ಅರಿತು ತಾನು ಬಂದ ಕಾರ್ಯವನ್ನು ಮಾಡಿ ಹೋಗಬೇಕು ಎಂಬುದು ಈ ವಚನದ ಆಶಯ.

ಮುಕ್ತಿಯ ಬಗೆಗೆ ಸ್ವತಂತ್ರ ಸಿದ್ದಲಿಂಗೇಶ್ವರರ ವಚನ

***ಶಮೆ ದಮೆ ವಿವೇಕ ವೈರಾಗ್ಯ ಪರಿಪೂರ್ಣಭಾವ ಶಾಂತಿ***
***ಕಾರುಣ್ಯ, ಶ್ರದ್ಧೆ, ಸತ್ಯ, ಸದ್ಭಕ್ತಿ, ಶಿವಜ್ಞಾನ, ಶಿವಾನಂದ***
***ಉದಯವಾದ ಮಹಾಭಕ್ತನ ಹೃದಯದಲ್ಲಿ ಶಿವನಿಪ್ಪ***
***ಆತನ ದರ್ಶನ, ಸ್ಪರ್ಶನ, ಸಂಭಾಷಣೆಯಿಂದ***
***ಕೇವಲ ಮುಕ್ತಿಯೆಪ್ಪುದು ತಪ್ಪದಯ್ಯಾ***
***ನಿಜಗುರು ಸ್ವತಂತ್ರ ಸಿದ್ದಲಿಂಗೇಶ್ವರ॥***

ಯಾವುದೇ ವ್ಯಕ್ತಿ ಪರಿಪೂರ್ಣನಾಗಬೇಕಾದರೆ ಆತನಲ್ಲಿ ಕ್ಷಮೆ, ನಿಗ್ರಹ ಗುಣ, ವಿವೇಕ, ವೈರಾಗ್ಯದಂತಹ ಗುಣಗಳು ನೆಲೆಗೊಂಡಿರಬೇಕು. ಕರುಣೆ, ಶ್ರದ್ಧೆ, ಸತ್ಯ, ಸದ್ಭಕ್ತಿ, ಶಿವಜ್ಞಾನದಿಂದ ಆಧ್ಯಾತ್ಮ ಶಾಂತಿ ದೊರೆತು ಶಿವ ಆನಂದದಿಂದ ಆತನ ಹೃದಯದಲ್ಲಿ ನೆಲೆಸುತ್ತಾನೆ. ಇಂತಹ ವ್ಯಕ್ತಿಗಳ ದರ್ಶನದಿಂದ, ಸ್ಪರ್ಶದಿಂದ ಮತ್ತು

ಸಂಭಾಷಣೆಯಿಂದ ಮುಕ್ತಿಯೆಂಬುದು ದೊರೆಯುತ್ತದೆ ಎಂಬುದು ವಚನದ ಆಶಯ.

## ವಿಚಾರಗೋಷ್ಠಿ ಕಾರ್ಯಕ್ರಮದ ಬಗ್ಗೆ ನನ್ನ ಅಭಿಪ್ರಾಯ :–

ನಾನು ನನ್ನ ವಿಚಾರ ಮಂಡನೆಯ ವಿಷಯವಾಗಿ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರ ಆಯ್ದ ವಚನಗಳನ್ನು ಆರಿಸಿಕೊಂಡಿದ್ದೆ. ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ ನನಗೆ ಇವರ ಹೆಸರಿನ ಪರಿಚಯವೇ ಇರಲಿಲ್ಲ. ಅದರಲ್ಲೂ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರು ಆಧ್ಯಾತ್ಮ ಚಿಂತಕರೂ ಮತ್ತು ವಚನಕಾರರೆಂದು ತಿಳಿದಿರಲಿಲ್ಲ.

ಅದೃಷ್ಟವಶಾತ್ ಮಾರೇನಹಳ್ಳಿ ಲೋಕೇಶ್ ಅವರು ಸ್ಥಳೀಯ ಕವಿಗಳ ಬಗೆಗೆ ಹೊಂದಿರುವ ಆಸಕ್ತಿ, ಅವರ ಸಾಹಿತ್ಯವನ್ನು ತಾಲ್ಲೂಕಿನ ಸುಶಿಕ್ಷಿತರಿಗೆ ಮನದಟ್ಟು ಮಾಡುವ ಮತ್ತು ವ್ಯಾಪಕ ಮಾಡುವ ಉದ್ದೇಶದಿಂದ ಕವಿಗೋಷ್ಠಿ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಈ ಕಾರ್ಯಕ್ರಮದಿಂದಾಗಿ ನಾನು ಆಯ್ದುಕೊಂಡ ವಿಷಯದ ಕುರಿತು ಅಧ್ಯಯನ ಮಾಡಿದಾಗ ಸ್ಥಳೀಯ ವಚನಕಾರರಾದ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರ ಬಗ್ಗೆ ಮಾಹಿತಿಗಳು ದೊರೆತವು. ನಮ್ಮ ಸ್ಥಳೀಯವಾಗಿರುವ ಸಾಹಿತಿಗಳ ಸಾಹಿತ್ಯವನ್ನು ಅರಿಯದ ಹೊರತು ಯಾವ ಸಾಹಿತಿಗಳ ಬಗ್ಗೆ ಓದಿದರೂ ಅದು ಪರಿಪೂರ್ಣವಲ್ಲ ಎಂಬುದು ನನ್ನ ಅಭಿಪ್ರಾಯ. ಅಷ್ಟೇ ಅಲ್ಲದೇ ನಾನು ಆಯ್ದುಕೊಂಡಿದ್ದ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರರ ಆಯ್ದ ವಚನಗಳನ್ನು ಗ್ರಹಿಸಿದಾಗ ಅಲ್ಲಿರುವ ಆಧ್ಯಾತ್ಮಿಕ ಚಿಂತನೆ, ಪದಪ್ರಯೋಗ, ಜೀವನದ ತತ್ವಗಳು ನನ್ನ ಮನಸೂರೆಗೊಂಡವು.

**ಸತೀಶ್ ಜೆ.ಬಿ.**
ದ್ವಿತೀಯ ಬಿ.ಇಡಿ.
ಜಕ್ಕನಹಳ್ಳಿ, ಬೂಕನಕೆರೆ ಹೋ,
ಕೃಷ್ಣರಾಜಪೇಟೆ.
ಮೊ: 7892827980

# ಅರ್ಚಕ ರಂಗಸ್ವಾಮಿ ಭಟ್ಟರು

ಹೊಯ್ಸಳ ಶಿಲ್ಪಕಲೆಯ ತೊಟ್ಟಿಲೆನಿಸಿಕೊಂಡ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು ಹೇಮಾವತಿ ನೀರಿನಿಂದ ಹಾಗೂ ಮಳೆ ಆಶ್ರಯದ ಅರೆ ಬೇಸಾಯ ಪದ್ಧತಿಯ ಒಣ ಭೂಮಿಯ ತಾಲ್ಲೂಕುಗಳಲ್ಲಿ ಒಂದು.

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಬಂಡಿಹೊಳೆ ಗ್ರಾಮದಲ್ಲಿ 1900 ರಲ್ಲಿ ಜನಿಸಿದರೆಂದು ಯಕ್ಷಗಾನ ಅಕಾಡೆಮಿಯವರ ಪ್ರಕಟಿತ ಕೃತಿಯಲ್ಲಿ ಪ್ರಕಟಿತಗೊಂಡಿದೆ ಮತ್ತೊಂದೆಡೆ 1895 ರಲ್ಲಿ ಜನಿಸಿದರು ಎಂದು ತಿಳಿಸಲಾಗಿದೆ. ರಂಗಸ್ವಾಮಿ ಭಟ್ಟರ ತಂದೆ ನಾರಾಯಣಭಟ್ಟರು ತಾಯಿ ಶೇಷಮ್ಮನವರು ತಂದೆ ನಾರಾಯಣಭಟ್ಟರಿಗೆ ಐದು ಮಕ್ಕಳು ಅದರಲ್ಲಿ ರಂಗಸ್ವಾಮಿ ಭಟ್ಟರು ಮೂರನೆಯವರು.

ರಂಗಸ್ವಾಮಿಯವರ ವಿದ್ಯಾಭ್ಯಾಸವು ಬಂಡಿಹೊಳೆಯಲ್ಲೆ ಪ್ರಾರಂಭವಾಯಿತು ಪ್ರಾಥಮಿಕ ಶಾಲೆಯ ನಾಲ್ಕನೆಯ ತರಗತಿಯವರೆಗೆ ಬಂಡಿಹೊಳೆಯಲ್ಲೆ ವ್ಯಾಸಂಗ ಮಾಡಿದ್ದಷ್ಟೆ ಉಳಿದಂತೆ ಬಾಲಕನಾಗಿದ್ದಗಲೆ ತಂದೆಯವರಿಂದ ಬಾಯಿಪಾಠವಾಗಿದ್ದ ಅಮರಕೋಶ ಮುಂತಾದ ಪಾಠಗಳಿಂದಾಗಿ ಅವರು ಮೈಸೂರಿನ ಸಂಸ್ಕೃತ ಪಾಠಶಾಲೆಗೆ ಕಳುಹಿಸಲ್ಪಟ್ಟರು.

ಮೈಸೂರಿನಲ್ಲಿ ಅರಮನೆಯ ಆಶ್ರಯದಲ್ಲಿ ಒಂದು ಉಚಿತ ವಿದ್ಯಾರ್ಥಿ ನಿಲಯ ನಡೆಯುತ್ತಿತ್ತು ಅದನ್ನು 'ರಾಮಾನುಜಕೂಟ' ಎಂದು ಕರೆಯುತ್ತಿದ್ದರು. ಆ ರಾಮಾನುಜಕೂಟದಲ್ಲಿ ರಂಗಸ್ವಾಮಿಯವರು ಹನ್ನೆರಡು ವರ್ಷ ಇದ್ದರು ನಂತರ ವ್ಯಾಸಂಗ ಇನ್ನು ಮುಗಿದಿರುವುದಿಲ್ಲ ಆದ್ದರಿಂದ ನಾಲ್ಕು ವರ್ಷ ಭಟ್ಟರ ತಂದೆಯ

ಹಿತೈಷಿಗಳಿಂದ ವಾರಾನ್ನ ಬರುತ್ತಿತ್ತು ಆದರೆ ಕೊನೆಯ ನಾಲ್ಕು ವರ್ಷ ಭಟ್ಟರ ಸ್ವತ: ತಾವೆ ಅಡುಗೆ ಮಾಡಿ ಊಟ ಮಾಡಿಕೊಂಡು ವ್ಯಾಸಂಗ ಮುಗಿಸಿದರು.

ಹೀಗೆ ಮುಕ್ತಾಯವಾದ ಇಪ್ಪತ್ತು ವರ್ಷಗಳ ವ್ಯಾಸಂಗದಲ್ಲಿ ರಂಗಸ್ವಾಮಿಯವರು ಮೂರು ನಿಟ್ಟಿನಲ್ಲಿ ವಿದ್ವತ್ತನ್ನು ಗಳಿಸಿದರು ಅವು ಯಾವುವೆಂದರೆ

1) **ಯಜುರ್ವೇದದ ಪೂರ್ಣ ಅಧ್ಯಯನ**

2) **ಸಂಸ್ಕೃತದಲ್ಲಿ ನಾಟಕಾಂತ ಸಾಹಿತ್ಯ**

3) **ಆಗಮದಲ್ಲಿ ವಿದ್ವತ್ತು**

ವ್ಯಾಸಂಗ ಮುಗಿಸಿ ಪ್ರಾಚಾರ್ಯರ ಹುದ್ದೆಗು ಸೇರುತ್ತಾರೆ ಆದರೆ ತಮ್ಮ ತಂದೆ ವಂಶಪಾರಂಪರ್ಯವಾಗಿ ಬಂದ ಅರ್ಚಕ ವೃತ್ತಿ ಮಾಡಬೇಕೆಂದು ತಿಳಿಸಿದ ಕಾರಣ ರಂಗಸ್ವಾಮಿಯವರು ಶ್ರೀ ಹೇಮಗಿರಿಯ ಕಲ್ಯಾಣ ವೆಂಕಟರಮಣ ಸ್ವಾಮಿ ಪೂಜೆಗೆ ಮೀಸಲಾಗುತ್ತಾರೆ.

ತಂದೆ ನಾರಾಯಣ ಭಟ್ಟರು ರಂಗಸ್ವಾಮಿಯವರಿಗೆ 21 ವರ್ಷ ಇದ್ದಾಗ 14 ವರ್ಷದ ಬಾಲೆ ಕಮಲಮ್ಮನೊಡನೆ ವಿವಾಹ ಮಾಡುತ್ತಾರೆ ಆದರೆ ಕಮಲಮ್ಮ ಪ್ಲೇಗಿಗೆ ತುತ್ತಾಗುತ್ತಾರೆ ನಂತರ ಕಮಲಮ್ಮನವರ ತಂಗಿಯೊಡನೆ ವಿವಾಹವಾಗುತ್ತಾರೆ ಆದರೆ ಸೀತಾಲಕ್ಷಮ್ಮ ಎರಡು ಹೆಣ್ಣು ಮಕ್ಕಳಿಗೆ ಜನ್ಮ ನೀಡಿ ಮೂರನೆಯ ಹೆರಿಗೆ ಸಂದರ್ಭದಲ್ಲಿ ತೀರಿಹೋಗುತ್ತಾರೆ ನಂತರ ರಂಗಸ್ವಾಮಿಯವರು ಜಯಮ್ಮನವರೊಡನೆ ವಿವಾಹವಾಗುತ್ತಾರೆ ಈ ದಂಪತಿಗಳಿಗೆ ಐದು ಜನ ಹೆಣ್ಣು ಮಕ್ಕಳು ಹಾಗೂ ಎರಡು ಗಂಡು ಮಕ್ಕಳಾಗುತ್ತಾರೆ.

ಹಿಂದೆ ಅರ್ಚಕ ಒಕ್ಕಲಿನವರಿಗೆ ದೇವರ ಜಮೀನು ಇರುತ್ತಿತ್ತು ಅಂತಹ ಜಮೀನು ಭಟ್ಟರ ಹೆಸರಿನಲ್ಲೂ 12ಎಕ್ಕರೆ ಇತ್ತು. ಭಟ್ಟರು ಗ್ರಾಮದವರಿಗೆ ಗುತ್ತಿಗೆಗೆ ವಾರಕ್ಕೆ ಈ ಜಮೀನನ್ನು ನೀಡಿದ್ದರು ಆದ್ದರಿಂದ ಸಮಯಕ್ಕೆ ಸರಿಯಾಗಿ ಒಪ್ಪಂದವಾಗಿದ್ದಂತೆ ದವಸ ಧಾನ್ಯ ಮನೆಯಲ್ಲಿರುತ್ತಿತ್ತು ಆದರೆ ಆಗಿನ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಉಳುವವನೇ ಭೂ ಒಡೆಯ ಮಸೂದೆ ಜಾರಿಗೊಳಿಸಿದ್ದರಿಂದ ಭಟ್ಟರು ತಮ್ಮ ಸಂಪೂರ್ಣ ಜಮೀನು ಕಳೆದುಕೊಂಡರು.

ಆದರೂ ಜೀವನದಲ್ಲಿ ಧೃತಿಗೆಡದೆ ಬೆಟ್ಟದ ರಂಗನ ಪೂಜೆ ಮಾಡುವುದರ ಜೊತೆಗೆ ನಾಮಕರಣ, ತಿಥಿ, ಶವಸಂಸ್ಕಾರ, ಲಗ್ನಪತ್ರಿಕೆ ಇತ್ಯಾದಿ ಮಾಡುವುದರ ಮೂಲಕ ಮಕ್ಕಳನ್ನು ಓದಿಸಿದರು ನಂತರ ಎಸ್.ಎಂ.ಲಿಂಗಪ್ಪನವರಿಂದ ಇವರಿಗೆ ಎರಡು ಎಕರೆ ಜಮೀನು ಕೂಡ ಸಿಗುತ್ತದೆ.

ಭಟ್ಟರಿಗೆ ಭಕ್ತರು ಗೋವೊಂದನ್ನು ದಾನವಾಗಿ ನೀಡಿದರು ಭಟ್ಟರು ಆ ಗೋವನ್ನು ತಮ್ಮ ಜಮೀನಿನಲ್ಲಿ ಮೇಯಿಸುವಾಗ ಒಂದು ದಿನ ಆ ಗೋವು ಇವರಿಗೆ ತಿವಿದು ಗಾಯಗೊಳಿಸುತ್ತದೆ. ಇದನ್ನು ಅರಿತ ರಂಗಸ್ವಾಮಿಯವರ ಮಕ್ಕಳು ಭಟ್ಟರನ್ನು ಉನ್ನತ ಚಿಕಿತ್ಸೆಗೆ ಉನ್ನತ ವೈದ್ಯರ ಬಳಿ ಕರೆದುಕೊಂಡು ಹೋಗುತ್ತಾರೆ. ಆದರೆ ಭಟ್ಟರು ಆ ವೈದ್ಯರು ಹಿಂದುಳಿದ ವರ್ಗದವರೆಂದು ಚಿಕಿತ್ಸೆ ನಿರಾಕರಿಸುತ್ತಾರೆ. ಆದರೆ ಮಕ್ಕಳು ಬುದ್ಧಿವಾದ ಹೇಳಿ ಚಿಕಿತ್ಸೆ ನೀಡಿಸುತ್ತಾರೆ ಆಗ ಭಟ್ಟರು ಹೌದಲ್ಲವೇ ಇಂದು ವೈದ್ಯರು ದೇವರಂತೆ ಬಂದು ನನ್ನನ್ನು ಉಳಿಸಿದರು ನಾನು ಬ್ರಾಹ್ಮಣತನ ಎಂಬ ಜಾತಿನಿಷ್ಠೆ ಸಡಿಲಗೊಂಡು ಮಾನವತನವನ್ನು ಜನಸಾಮಾನ್ಯರಲ್ಲಿ ಬೆರೆಯಲು ನಿರ್ಧಾರ ಮಾಡಿಕೊಂಡರು.

ಭಟ್ಟರು ಹೆಚ್ಚು ಓದಿದವರು, ಜ್ಞಾನಿಗಳು, ಬುದ್ಧಿವಂತರ ವಿಶೇಷ ಗೌರವಾದರಗಳಿಗೆ ಕಾರಣೀಭೂತರಾಗಿದ್ದರು.ಇವರನ್ನು ಜನರು ಅರ್ಚಕ ಎಂದು ಹೆಚ್ಚಾಗಿ ಕರೆಯುತ್ತಿದ್ದ ಕಾರಣ ಇವರು ಅರ್ಚಕ ರಂಗಸ್ವಾಮಿ ಭಟ್ಟ ಎಂದು ಬಂಡಿಹೊಳೆಯಲ್ಲಿ ಪ್ರಸಿದ್ಧಿ ಹೊಂದ್ದಿದರು.

ಯಾವುದೇ ಹಬ್ಬ, ಹರಿದಿನ ವಿಶೇಷ ಆಚರಣೆಗಳು, ಶಾಲಾ ಸಾಂಸ್ಕೃತಿಕ ಮುಂತಾದವುಗಳೆಲ್ಲ ಬಂಡಿಹೊಳೆಯಲ್ಲಿ ನೆಡೆಯಬೇಕಾದರೆ ಇವರ ಸಮ್ಮುಖದಲ್ಲಿ ನಿರ್ಧಾರವಾಗುತ್ತಿತ್ತು ಒಮ್ಮೆ ದೇವಾಲಯದಲ್ಲಿ ಕಳ್ಳತನವಾದ ಕಾರಣ ಭಟ್ಟರನ್ನು ಪೋಲಿಸರು ಬಂಧಿಸಿ ಜೈಲಿಗೆ ಹಾಕಿದರು ಇದನ್ನರಿತ ಗ್ರಾಮಸ್ಥರು ಆರಕ್ಷಕ ಠಾಣೆಗೆ ಮುತ್ತಿಗೆ ಹಾಕಿದರು ಅಂದು ಶಾಸಕರಾಗಿದ್ದ ಎಸ್.ಎಂ. ಲಿಂಗಪ್ಪನವರು ಠಾಣೆಗೆ ಹೋಗಿ ಭಟ್ಟರನ್ನು ಬಿಡಲು ತಿಳಿಸಿದರು ನಂತರ ಪೋಲಿಸರು ಅವರನ್ನು ಮನೆಗೆ ಬಿಟ್ಟು ಬರುತ್ತಾರೆ. ಇಷ್ಟೆಲ್ಲ ಸಂಸ್ಕೃತ ವಿದ್ವತ್ತನ್ನು ಗಳಿಸಿ ಆಗಮದ ಪ್ರೊಫೆಸರ್ ಆಗಬಹುದಾಗಿದ್ದ ಇಂಥ ವಿದ್ವಾಂಸರಲ್ಲಿ ಜನಪದ ಸಾಹಿತ್ಯದ ಬಗ್ಗೆ ಆಸಕ್ತಿ ಹುಟ್ಟಿದ್ದು ಹೇಗೆ ಎಂಬುದನ್ನು ನೋಡುವುದಾದರೆ ಭಟ್ಟರ ಸಂಸ್ಕೃತ ವಿದ್ಯಾಭ್ಯಾಸದ ಕಾಲದಲ್ಲಿ ನಡುನಡುವೆ ಸಿಕ್ಕುತ್ತಿದ್ದ ಅಧ್ಯಯನ ರಜೆಯಲ್ಲಿ ಊರಿಗೆ ಬಂದಾಗ ದೊಡ್ಡಮ್ಮನ ಹಬ್ಬ ಎಂಬ ಹಬ್ಬದ ಸಂಧರ್ಭಗಳಲ್ಲಿ ಅಲ್ಲಿ ಹಾಡುತ್ತಿದ್ದ ಹಾಡು, ಕುಣಿತಗಳನ್ನು ನೋಡುತ್ತಿದ್ದರು. ಸುಗ್ಗಿಯ ಕಾಲದಲ್ಲಿ ಬರುತ್ತಿದ್ದ ದೊಂಬಿ ದಾಸರು, ತೊಗಲ ಗೊಂಬೆಯವರು ಮುಂತಾದವುಗಳು ಬೇರ್ಪಡಿಸಬೇಕೆಂಬ ಆಸೆ ಬರುತ್ತದೆ.

ವಿಶ್ವ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ ಪಾಮರ ಸಾಹಿತ್ಯ ಉದಾಸೀನ ಬೇಡ ಎಂಬ ಮನವಿ ಮೇರೆಗೆ ಪಾಮರ ಸಾಹಿತ್ಯವಾದ ಜಾನಪದ ಸಾಹಿತ್ಯವನ್ನು ದಕ್ಷಣ ಕರ್ನಾಟಕದಲ್ಲೆ ಪ್ರಪ್ರಥಮ ಬಾರಿಗೆ ಬಂಡಿಹೊಳೆ ಗ್ರಾಮವನ್ನು ಒಂದು

ಘಟಕವನ್ನಾಗಿಸಿಕೊಂಡು 1931 ರಲ್ಲಿ "ಹುಟ್ಟಿದಹಳ್ಳಿ ಹಳ್ಳಿಯ ಹಾಡು" ಜಾನಪದ ಕ್ಷೇತ್ರ ಕಾರ್ಯದ ಮೊದಲ ಕೃತಿಯಾಗಿ ಪ್ರಕಟಿಸಿದರು.

ಈ ಕೃತಿಯನ್ನು ಬರೆಯುವಾಗ ಮತ್ತು ಮಾಹಿತಿ ಸಂಗ್ರಹಿಸುವಾಗ ಹಲವಾರು ಸಮಸ್ಯೆಗಳು ಬರುತ್ತವೆ. ತಂದೆಯವರು ಭಟ್ಟರಿಗೆ ಯಾವ ಪ್ರತಿಕ್ರಿಯೆ ನೀಡುವುದಿಲ್ಲ ಹಾಗೂ ಇವರ ಮೈಸೂರಿನ ಪಾಠಶಾಲೆಯ ಸಹಪಾಠಿಗಳು ಇವರನ್ನು ವ್ಯಂಗ್ಯ ಮಾಡುತ್ತಿರುತ್ತಾರೆ ಆದರೆ ಇವುಗಳ ನಡುವೆಯು ಹುಟ್ಟಿದ ಹಳ್ಳಿಯ ಹಾಡು ಕೃತಿಯನ್ನು ಪ್ರಕಟಿಸಿದ್ದರು. ಈ ಕೃತಿಯಲ್ಲಿ ಬಂಡಿಹೊಳೆಯಲ್ಲಿ ಮತ್ತು ಹೇಮಗಿರಿಯಲ್ಲಿನ ವಿಶೇಷಗಳು, ಸಂಸ್ಕೃತಿ, ಆಗಿನ ಸಂಪ್ರದಾಯಗಳು, ರೀತಿ – ನೀತಿಗಳು, ಹೇಮಗಿರಿಯ ಬೆಟ್ಟ, ಗುಡ್ಡ, ಆಗ ಇದ್ದ ಜಾನಪದ ಹಾಡುಗಳು, ಗಾದೆಗಳು ಮುಂತಾದವುಗಳನ್ನು ಕಾಣಬಹುದಾಗಿದೆ.

ರಂಗಸ್ವಾಮಿ ಭಟ್ಟರ ಕೃತಿಗಳೆಂದರೆ ಹುಟ್ಟಿದಹಳ್ಳಿ ಹಳ್ಳಿಯ ಹಾಡು, ಹೇಮಗಿರಿ ಮಹಾತ್ಮೆ, ರಾಮಾಯಣದ ಕೆಲವು ವಿಚಾರಗಳು, ವೈಖಾನಸ ಆಗಮ ಶಾಸ್ತ್ರದ ಪಕ್ಷಿನೋಟಗಳಾಗಿವೆ.

ರಂಗಸ್ವಾಮಿ ಭಟ್ಟರ ಸಂಸ್ಕೃತ ಕೃತಿಗಳೆಂದರೆ ಆಲಯಾರಾಧನಾ ಪದ್ಧತಿ, ಉಪಯುಕ್ತಾಂಶ ಸಂಗ್ರಹಣ, ಯಜುರ್ವೇದದ ಸಂಧ್ಯಾವಂದನ, ಆಲಯಂಕುರಾರ್ಪಣ, ಪುರಾಣತ್ರಯಗಳಾಗಿವೆ.

ಭಟ್ಟರ ಕೆಲವು ಕೃತಿಗಳು ಪ್ರಕಟಿತವಾಗುವುದಿಲ್ಲ ಈ ಅಪ್ರಕಟಿತ ಕೃತಿಗಳೆಂದರೆ ಹುಟ್ಟಿದ ಹಳ್ಳಿ ಭಾಗ –02, ನೌಡಗೌಡತಿ ಕೆಂಪಮ್ಮ, ಸನಾತನ ಧರ್ಮ ಹಾಗೂ ವೈಖಾನಸ ಆಗಮೋಕ್ತದ ಪ್ರಾಚಿನತೆಗಳಾಗಿವೆ.

1980ರಲ್ಲಿ ಭಟ್ಟರಿಗೆ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕರ್ನಾಟಕ ಸರ್ಕಾರ, ಬೆಂಗಳೂರು ಇವರು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ ಕನ್ನಡ ಸಾಹಿತ್ಯ ಪರಿಷತ್ತು ಕೃಷ್ಣರಾಜಪೇಟೆ ತಾಲ್ಲೂಕು ಘಟಕ ಕೂಡ ಭಟ್ಟರಿಗೆ ಗೌರವ ಸನ್ಮಾನ ಮಾಡಿದೆ.

ಒಟ್ಟಾರೆ ರಂಗಸ್ವಾಮಿಯವರ ಬಗ್ಗೆ ನನ್ನ ಅಭಿಪ್ರಾಯ ಹೇಳುವುದಾದರೆ ರಂಗಸ್ವಾಮಿ ನಿಸ್ವಾರ್ಥ ವ್ಯಕ್ತಿ ಆಗಿದ್ದರು .ಇವರು ತಮ್ಮ 12 ಎಕರೆ ಜಮೀನನ್ನು ವಾರಕ್ಕೆ ಕೊಟ್ಟಿರಲ್ಲಿಲ್ಲ ಎಂದು ವಾದಿಸಿ ಜಮೀನು ಉಳಿಸಿಕೊಳ್ಳಬಹುದಿತ್ತು ಆದರೆ ಇವರು ನ್ಯಾಯವಾಗಿ ನಿಜ ಒಪ್ಪಿಕೊಂಡು ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ನಂತರವು ಸಹ ಜನರ ಮೇಲೆ ದ್ವೇಷ, ಅಸೂಹೆ, ಕೋಪ ತೋರದೆ ಪ್ರೀತಿಯಿಂದ ಜನರೊಡನೆ ಬೆರೆಯುತ್ತಾರೆ.

ಇನ್ನು ಪ್ರೋಫೆಸರ್ ಆಗಿ ಸುಖಮಯ ಜೀವನವನ್ನು ಸಾಗಿಸುವ ಅವಕಾಶ ಇದ್ದರು ಸಹ ತಂದೆಯ ಮಾತಿಗೆ ಬೆಲೆಕೊಟ್ಟು ಅರ್ಚಕ ವೃತ್ತಿಯನ್ನು ಒಪ್ಪಿಕೊಂಡು ಜೀವನ ಪೂರ್ತಿ ಅದನ್ನೇ ಮುಂದುವರೆಸುತ್ತಾರೆ.

ರಂಗಸ್ವಾಮಿಯವರ ತಂದೆಯ ಬಗ್ಗೆ ನಿಜಕ್ಕೂ ಬಹಳ ಹೆಮ್ಮೆಯಾಗುತ್ತದೆ ಏಕೆಂದರೆ ಅಂದು ಕಷ್ಟಗಳನ್ನು ಅನುಭವಿಸುತ್ತಿದ್ದರು ಸಹ ಹಠ ಛಲ ಬಿಡದೆ ಮಗನನ್ನು ಓದಿಸುತ್ತಾರೆ ಒಬ್ಬ ತಂದೆಯಾದವನು ಇದಕ್ಕಿಂತ ಇನ್ನೇನು ಮಾಡಬೇಕು ಅಲ್ವಾ? ಹೆಮ್ಮೆಯಾಗುತ್ತದೆ ನಾರಾಯಣ ಭಟ್ಟರ ಮೇಲೆ.

ರಂಗಸ್ವಾಮಿ ಭಟ್ಟರು ಬಹಳ ಶ್ರಮ ಜೀವಿಯಾಗಿದ್ದರು ಇನ್ನೊಬ್ಬರಿಗೆ ಮೋಸ ಮಾಡಬೇಕೆಂಬುದು ಇವರಿಗೆ ಎಂದು ಸಹ ಬಂದಿರಲಿಲ್ಲ ಭಟ್ಟರಿಗೆ ತಮ್ಮ ಊರಿನ ಮೇಲೆ ಬಹಳ ಪ್ರೀತಿಯಿತ್ತು ಅಲ್ಲಿನ ಸಂಸ್ಕೃತಿ ಬೆಳೆಸಬೇಕು ಮುಂದಿನ ಜನಾಂಗಕ್ಕೆ ತಿಳಿಸಬೇಕೆಂಬ ಹಂಬಲವಿತ್ತು.

ರಂಗಸ್ವಾಮಿ ಭಟ್ಟರು ನಮ್ಮ ಸಾಹಿತ್ಯ ಬೀಳೆಂದು ಬಿಟ್ಟು ಬಿಡಬಾರದು ಹಾಗೆಂದು ಆಂಗ್ಲ ಸಾಹಿತ್ಯವನ್ನು ಮಾತೃಭಾಷೆಯನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ ನಮ್ಮದರಲ್ಲಿನ ಮುರಿದ ಭಾಗವನ್ನು ಸರಿಪಡಿಸಿಕೊಳ್ಳಬೇಕು ಎರಡೂ ಬಗೆಯ ಸಾಹಿತ್ಯವನ್ನು ಸಹ ಬೆಳೆಸಬೇಕು ಎಂದು ತಮ್ಮ ಸಾಹಿತ್ಯ ಪ್ರೇಮವನ್ನು ವ್ಯಕ್ತಪಡಿಸುತ್ತಾರೆ.

ರಂಗಸ್ವಾಮಿ ಭಟ್ಟರು ಪಾಮರ ಸಾಹಿತ್ಯವನ್ನು ಬೆಳೆಸಬೇಕೆಂಬ ಆಸೆಯನ್ನು ಇಟ್ಟಿಕೊಂಡಿರುತ್ತಾರೆ ರಂಗಸ್ವಾಮಿ ಭಟ್ಟರು ತಮ್ಮ ಸಜಪಾಠಿಗಳು ಇವರನ್ನು ವ್ಯಂಗ್ಯಮಾಡುವಾಗ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ ವ್ಯಂಗ್ಯವು ಕೂಡ ಸದುಪಯೋಗವಾಗಬೇಕು ಇನ್ನೊಬ್ಬರ ಮನನೋಯಿಸುವಂತಹ ವ್ಯಂಗ್ಯ ಬೇಡ ಎನ್ನುತ್ತಾರೆ ತುಂಬಾ ಒಳ್ಳೆಯ ವಾಖ್ಯೆ ಇದು.

ಭಟ್ಟರು ಎಷ್ಟೆ ಕಷ್ಟಪಟ್ಟು ಬರೆದಂತಹ ಯಾವ ಕೃತಿಯೂ ಸಹ ಪ್ರಸಿದ್ಧಿಯಾಗಲಿಲ್ಲ ಆದರೂ ಸಹ ಭಟ್ಟರು ಪ್ರಸಿದ್ಧಿಗಾಗಿ ತಲೆಕೆಡೆಸಿಕೊಳ್ಳದೆ ತಮ್ಮ ಮನ ತೃಪ್ತಿಗಾಗಿ ಕೃತಿ ಬರೆಯುತ್ತಾ ಹೋದರು ಭಟ್ಟರ ಯಾವುದೇ ಕೃತಿಗಳು ಮರುಮುದ್ರಣದ ಬಗ್ಗೆ ಯಾವುದೇ ಸಂಘ, ಸಂಸ್ಥೆಗಳು ಮತ್ತು ಗ್ರಾಮಸ್ಥರು ತಲೆಕೆಡಸಿಕೊಳ್ಳದೆ ಇರುವ ಕಾರಣ ಭಟ್ಟರು ಎಲೆಮರೆಕಾಯಿಯಂತೆ ಉಳಿದುಹೋದರು.

ಶೂದ್ರರ ನೆರಳು ಸೋಂಕದ ಬ್ರಾಹ್ಮಣ ಸಮುದಾಯವಿದ್ದ ಕಾಲದಲ್ಲೇ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಿಂದ ಹೊರಬಂದು ಶೂದ್ರರ ಜೋಪಡಿಗಳಿಗೆ ಹೋಗಿ ಮಾಹಿತಿ

ಸಂಗ್ರಹಿಸಿ ಜಾನಪದ ಸಾಹಿತ್ಯ ಕಣಜಕ್ಕೆ 1930ರ ದಶಕದಲ್ಲೇ ಸಾಹಸಮಯವಾಗಿ ಸೇವೆ ಸಲ್ಲಿಸಿರುವುದು ಬಹಳ ದೊಡ್ಡ ವಿಷಯವಾಗಿದೆ.

ಭಟ್ಟರನ್ನು ಹಿಂದಿನವರಿಂದ ಇಂದಿನವರಿಗೆ ಪರಿಚಯಿಸಿ ಮುಂದಿನನವರಿಗೆ ಪರಿಚಯಿಸಬೇಕಾದ ಕರ್ತವ್ಯ ನಮ್ಮೆಲ್ಲರ ಮೇಲಿದೆ ಅವರ ಸಾವಿನ ಸಂದರ್ಭದಲ್ಲೂ ಸಹ ಅನೇಕ ಸಂಘರ್ಷಗಳಾಗುತ್ತವೆ. ಆದರೂ ಭಟ್ಟರಿಗೆ ಇದ್ದ ತಮ್ಮ ಊರಿನ ಮೇಲೆ ಪ್ರೇಮದಂತೆ ನಾವು ಸಹ ನಮ್ಮ ನಮ್ಮ ಊರಿನ ಮೇಲೆ ಪ್ರೀತಿ ಬೆಳೆಸಿಕೊಂಡು ಊರಿಗಾಗಿ ಏನಾದರೂ ಮಾಡಬೇಕು ಎಂಬುದು ನನ್ನ ಭಾವನೆಯಾಗಿದೆ.

ಅವರವರು ಅವರವರ ಹುಟ್ಟಿದ ಹಳ್ಳಿ ಬಗ್ಗೆ ಔಚಿತ್ಯ ಪೂರ್ಣವಾದ ಜಾನಪದ ಕ್ಷೇತ್ರಕಾರ್ಯ ಕಿಂಚಿತ್ ನಡೆಸಿದರೂ ಭಟ್ಟರಿಗೆ ಸಾರ್ಥಕತೆ ದೊರಕುತ್ತದೆ.

**ಸಹನ ಡಿ. D/o ದಿನೇಶ್**
ಅಕ್ಕಿಹೆಬ್ಬಾಳ್(ಹೋ),
ಕೃಷ್ಣರಾಜಪೇಟೆ
ಮೊ. 9945802358

# ಹುಟ್ಟಿದ ಹಳ್ಳಿ – ಹಳ್ಳಿಯ ಹಾಡು ಕೃತಿ ಪರಿಚಯ

ಬಡ ರಾಷ್ಟ್ರವಾದರೇನಂತೆ ಶ್ರೀಮಂತಿಕೆ ಎಂಬುದು ಕಾಣಬೇಕಾದುದು ಮನದಿಂದ ಶ್ರೀಮಂತವಾದ ರಾಷ್ಟ್ರ ನಮ್ಮದು ಇಂತಹ ರಾಷ್ಟ್ರಮಾತೆಯು ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ನರು, ಬೌದ್ಧ, ಜೈನರಂತಹ ಅನೇಕ ಮಕ್ಕಳ ಸಾಕಿ ಸಲಹುತ್ತಿರುವ ದೈವೀ ರಾಷ್ಟ್ರವೇ ಸರಿ ಇಂತಹ ರಾಷ್ಟ್ರದೊಳಗೆ ಒಂದು ಘನೀ ರಾಜ್ಯವೊಂದಿದೆ ಅದುವೇ ಕರುಣೆಯ ನಾಡು,ಕರುನಾಡು ಮೂಲತ: ಭಾಷೆ ಕನ್ನಡ ಸುಮಾರು 6 ಕೋಟಿ ಜನರ ಜೀವಂತ, ಸ್ವಾಭಿಮಾನ ಭಾಷೆ, 2000 ವರ್ಷಕ್ಕಿಂತಲು ಹೆಚ್ಚಿನ (ಹಿಂದಿನ) ಇತಿಹಾಸ ಹೊಂದಿರುವ ಭಾಷೆ.

ಈ ಭಾಷೆಯ ವಿಚಾರ ಯಾಕಪ್ಪ ಬಂತು ಎಂದ್ರೆ 6 ಕೋಟಿ ಜನಸಂಖ್ಯೆಯ ಕರ್ನಾಟಕದಲ್ಲಿ ಅತಿ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆ ಸಕ್ಕರೆ ನಾಡು ಮಂಡ್ಯ ಸಾಮಾನ್ಯವಾಗಿ ಹೇಳುವುದಾದರೆ ಒಂದು ಜಿಲ್ಲೆ ವಿಶೇಷವಾಗಿ ಹೇಳುವುದಾದರೆ ಕರ್ನಾಟಕದ ಕನ್ನಡದ ಕನ್ನಡಿಗರ ಹೆಮ್ಮೆ ಮಂಡ್ಯ ಎಂದ ಕೂಡಲೇ ನೆನಪಾಗುವ ಕನ್ನಡದ ಪದ ಸ್ವಾಭಿಮಾನ, ಕೆಚ್ಚೆದೆ ಕಾವೇರಿ ಜೀವಜಲ, ಅವಳೇ ಸಕಲ ಅಂತೆಯೇ ಕಾವೇರಿ ನದಿಯ ಉಪನದಿಯೊಂದಾದ ಹೇಮಾವತಿ ನದಿತೀರದಲ್ಲಿ ಜನ್ಮ ತಾಳಿದ ಮಹಾನ್ ಚೇತನರ ಬಗ್ಗೆ ತಿಳಿದುಕೊಳ್ಳುವುದು ಔಚಿತ್ಯವೂ ಹೌದು. ಹೌದು ಮಂಡ್ಯ ಜಿಲ್ಲೆಯಲ್ಲಿ ಅನೇಕ ನಟರು ವಿದ್ವಾಂಸರು ಸಂಗೀತಗಾರರು, ವಾದ್ಯ ಪ್ರವೀಣರು, ರಾಜಕಾರಣಿಗಳು, ಅಂತೆಯೇ ಸಾಹಿತಿಗಳನ್ನು ಉತ್ಪಾದಿಸುತ್ತಿರುವ ಜಿಲ್ಲೆ ಮಂಡ್ಯ ಎಂದರೆ ತಪ್ಪಾಗಲಾರದು.

ಇಂತಹ ಜಿಲ್ಲೆಯಲ್ಲಿ ಕೃಷ್ಣರಾಜಪೇಟೆ ಎಂಬ ತಾಲ್ಲೂಕು, ಕಬ್ಬು, ಭತ್ತ, ತೆಂಗು ಬೆಳೆಯುವ ಒಂದು ಪ್ರದೇಶ ಹೇಮಾವತಿ ನದಿ. ತಾಲ್ಲೂಕಿನಲ್ಲಿ ಹರಿಯುವ ಪ್ರಮುಖ ನದಿಗಳಲ್ಲೊಂದು ಇಂತಹ ನದಿಯ ತಪ್ಪಲಿನಲ್ಲಿ ನಯನ ಮನೋಹರವೆನಿಸುವ ಒಂದು ನಿಸರ್ಗ ಧಾಮ, ಸಮೀಪದಲ್ಲೆ ಒಂದು ಬೆಟ್ಟ ಅದುವೇ ಹೇಮಗಿರಿ ಅಲ್ಲಿಂದ ಸ್ವಲ್ಪ ಮುಂದೆ ಹೋದರೆ ಒಂದು ಸಣ್ಣ ಗ್ರಾಮ ಬಂಡಿಹೊಳೆ ಈ ಊರಿನಲ್ಲಿ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಪಾಮರ ಸಾಹಿತ್ಯವನ್ನು ದಕ್ಷಿಣ ಕರ್ನಾಟಕಕ್ಕೆ ಮೊಟ್ಟ ಮೊದಲು ಪರಿಚಯಿಸಿಕೊಟ್ಟ ಮಹಾನ್ ಸಾಹಿತಿ ಶ್ರೀ ಅರ್ಚಕ ಬಿ.ರಂಗಸ್ವಾಮಿರವರು. ಶ್ರೀಯುತರು 02–01–1895 ರಲ್ಲಿ ಬಂಡಿಹೊಳೆಯಲ್ಲಿ ಜನಿಸಿದರು. ಇವರು ಹುಟ್ಟಿದ ಹಳ್ಳಿ ಹಳ್ಳಿಯ ಹಾಡು, ಶ್ರೀ ವೈಖಾನಸ ಆಲಯಾರಾಧನಾ ಪದ್ಧತಿ, ಹೇಮಗಿರಿಯ ಮಹಾತ್ಮೆ, ಯಜುರ್ವೇದ ಸಂಧ್ಯಾವಂದನ, ಆಲಯಂಕುರಾರ್ಪಣ, ಪುರಾಣತ್ರಯ ಸನಾತನ ಧರ್ಮ, ನಾಡಗೌಡತಿ, ಕೆಂಪಮ್ಮ ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಹುಟ್ಟಿದ ಹಳ್ಳಿ – ಹಳ್ಳಿಯ ಹಾಡು ಕೃತಿಗೆ ಪ್ರಧಾನ ಪ್ರೇರಣೆ ಪಾಮರ ಸಾಹಿತ್ಯ ಉದಾಸೀನ ಮಾಡಬೇಡಿ ಎಂಬುದಾಗಿತ್ತು. ಈ ಕೃತಿಯು ಸುಮಾರು 200 ಪುಟಗಳನ್ನು ಒಳಗೊಂಡ ಕೃತಿಯಾಗಿದೆ. ಸಂಪೂರ್ಣವಾಗಿ ಈ ಕೃತಿಯಲ್ಲಿ ಬಂಡಿಹೊಳೆ ಗ್ರಾಮವನ್ನು ಘಟಕವನ್ನಾಗಿಸಿ ಅಲ್ಲಿನ ವಿವಿಧ ಮಜಲುಗಳನ್ನು ತೋರುವ ಪ್ರಯತ್ನ ಮಾಡಿದ್ದಾರೆ ಕೃತಿಯನ್ನು ತೆರೆಯುತ್ತಿದ್ದಂತೆ ಗ್ರಾಮದ ಉಗಮದ ಇತಿಹಾಸದ ಕುರಿತು ಹೇಳುತ್ತಾರೆ .ಈ ಗ್ರಾಮವನ್ನು ರಾಜಮಾತೆಯಾದ ಮಾತೃಶ್ರೀ ದೇವರಾಜಮ್ಮಣ್ಣಿಯವರು ದಾನಮಾಡಿದರು ಎಂದು ಪ್ರತೀತಿ. ದಾನದ ನಂತರ ಇಂದಿನ ರೀತಿಯಂತೆ ತಾಲ್ಲೂಕು, ಹೋಬಳಿಗಳನ್ನು ಮಾಡುತ್ತಾರೆ ಅದರನ್ವಯದಂತೆ ಮಡುವಿನಕೋಡಿ, ತೆಡಗರಹಳ್ಳಿ, ಹರಿಹರಪುರ, ಮೆಳಹಳ್ಳಿ, ಅಕ್ಕಿಹೆಬ್ಬಾಳು, ಆಲಂಬಾಡಿ, ಬಸವನಹಳ್ಳಿ , ಮಾಂಬಳ್ಳಿ , ದಡದಹಳ್ಳಿ ಮಾಚವಳಲು ಗ್ರಾಮಗಳು ಸೇರಿದಂತೆ 13 ಗ್ರಾಮಗಳಿಗೆ ಕೆರೆ – ಕಟ್ಟೆ, ಕಾಲುವೆಗಳನ್ನು ನಿರ್ಮಿಸುವಂತೆ ಸೂಚನೆ ನೀಡಿ ಶಾಸನ ಹೊರಡಿಸುತ್ತಾರೆ. ಊರಿನ ಒಳಗೆ ಬಂದರೆ ಇರುವ ಸೋಮೇಶ್ವರ ದೇವಾಲಯ ಚೋಳರಾಯನು ಕಟ್ಟಿದ್ದನೆಂದು ಅದರ ವಿಶಿಷ್ಟತೆಯನ್ನು ಸವಿಸ್ತಾರವಾಗಿ ಆಗಿನ ಶ್ಯಾನುಭೋಗರು ಹೇಳಿದಂತೆ ವಿವರಿಸಿರುವರು. ಇವರ ಕಾಲಘಟ್ಟದಲ್ಲಿಯೆ ಅಲ್ಲಿನ ಸೇತುವೆ ನಿರ್ಮಾಣವಾಗಿದ್ದೆಂದು ಇವರು ಉಲ್ಲೇಖನದಿಂದ ತಿಳಿದು ಬರುತ್ತದೆ. ಇನ್ನು ಸನಿಹದ ಆಚರಣೆಯಲ್ಲೊಂದಾದ ಜೋಯಿಸರ ಕೇಳುವುದು ಇಲ್ಲಿ ಹಸುವಿನ ಅನಾರೋಗ್ಯಕ್ಕೆ ಮದುವೆಯಾಗದ ಗಂಡು ಹೆಣ್ಣನ್ನು ದೂಷಿಸುವ ವಾಡಿಕೆಯಿತ್ತು. ಇದರಿಂದ ಹಸುಗಳಿಗೆ ಮದುವೆ ಮಾಡುವಂತ ಆಚರಣೆಗಳು ನಡೆಯುತ್ತಿದ್ದವು. ಗ್ರಾಮದ ಸುತ್ತಮುತ್ತ ಪ್ರಮುಖವಾಗಿ ಗ್ರಾಮದಲ್ಲಿ

ನೆರವೇರಿಸುತ್ತಿದ್ದ ವಿವಾಹ ಕಾರ್ಯಗಳ ಬಗ್ಗೆ ಗಂಡು ಹೆಣ್ಣಿನ ಅಲಂಕಾರ ವಸ್ತ್ರ ವಿನ್ಯಾಸಗಳ ಬಗ್ಗೆ ಉತ್ತಮವಾಗಿ ಚಿತ್ರಿಸಿದ್ದಾರೆ.

ಜನಪದ ಎಂದಾಗ ಜನರ ಜೀವನ ಶೈಲಿ – ಆಚಾರ ವಿಚಾರಗಳನ್ನೊಳಗೊಂಡದ್ದಾಗಿದೆ. ಅಂತೆಯೇ ಬಂಡಿಹೊಳೆ ಗ್ರಾಮದಲ್ಲಿ ಆಚರಿಸುತ್ತಿದ್ದ ಪ್ರಮುಖವಾಗಿ ಹೆಣ್ಣು ದೊಡ್ಡವಳಾದಾಗ ಗುಡ್ಲು ಕೂರ್ರೋದು ವ್ಯವಸಾಯ, ವ್ಯವಸಾಯದಲ್ಲಿ ಅವರದೇ ಕಮಿಟ್‌ಮೆಂಟ್‌ಗಳು ಭತ್ತ, ಹುಲ್ಲು ಕುಯ್ಯುವ ವರ್ಷ ಪೂರ್ತಿ ವಾದ್ಯ, ದಾಸಯ್ಯ, ಇಂತೋರಲ್ಲಿ ಕಾರ್ಯ ಮಾಡಂಗೆ ಮಾತಾಡ್ಕೋಳ್ಳದು. ಇದಿಷ್ಟೇ ಅಲ್ಲ ಈ ಕೃತಿಯಲ್ಲಿ ಕೋಲಾಟದ ಪದ್ಯಗಳು, ದೇವರ ಪದಗಳು, ಸತ್ತವರ ಪಾರ್ಥಿವ ಶರೀರಕ್ಕೆ ಅಂತ್ಯ ಸಂಸ್ಕಾರ ಮಾಡುವ ವಿಧಾನ, ಬೀಸುವ ಪದಗಳು ಕೆಲವೊಂದು ಶೀರ್ಷಿಕಾ ಕವಿತೆಗಳು, ಇನ್ನೂ ಗಾದೆಗಳು ಅಂದಿನ ಕಾಲಘಟ್ಟದಲ್ಲಿ ಚಾಲ್ತಿಯಲ್ಲಿದ್ದ ಸುಮಾರು 664 ಗಾದೆಗಳನ್ನು ಪಟ್ಟಿ ಮಾಡಿದ್ದಾರೆ. ಬಹುಷ್ಯ ಅದನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ ಒಂದು ಗಾದೆಗಳ ನಿಘಂಟೇ ಆಗಿ ಬಿಡುತ್ತಿತ್ತೇನೋ. ಅಷ್ಟೇ ಅಲ್ಲದೆ ಹಳ್ಳಿಯ ಜನ ಮಾತನಾಡುವ ರೀತಿಯನ್ನು ಸಹ ಅವರು ನೀಡಿದ್ದಾರೆ, ಅದನ್ನು ಓದುತ್ತಿದ್ದರೆ, ಅನುಭವಿಸುತಿದ್ದರೆ ನಾನು ಮತ್ತು ನನ್ನ ಸಂಗಡಿಗರು ಮಾತನಾಡುವ ಬಗೆಯೇ ಕಣ್ತುಂಬಿ ಬರುತ್ತದೆ ಆಗಿನ ಭಾಷಾ ಬಳಕೆಗೂ ಈಗಿನ ಭಾಷಾ ಬಳಕೆಗೂ ಇರುವ ಒಂದಿಷ್ಟು ಸಂಬಂಧಗಳನ್ನು ಕಂಡಾಗ ಮನದೊಳಗೆ ಏನೋ ಒಂಥರ ಸಂತೋಷ. ಇನ್ನು ರೈತ ಕೇಂದ್ರ ಗ್ರಾಮವಾದ ಅಲ್ಲಿ ವ್ಯವಸಾಯ ಪ್ರಮುಖವಾದುದು ಅದರಲ್ಲಿ ಭತ್ತ ಕುಯ್ಲು ಮಾಡಿ ಕಟ್ಟುವಾಗ ಹಾಡುಗಳು ಭತ್ತದ ರಾಶಿಯ ಪೂಜೆ ಮುಂತಾದವು ಮನಸೆಳೆಯುವಂತಹವು.

ಇನ್ನು ಮದುವೆಯಾದಂತಹ ಶುಭ ಸಂದರ್ಭದಲ್ಲಿ ಅರಿಶಿನ ಹಚ್ಚುವ ಹಾಡು, ಎಣ್ಣೆ ನೀರು, ಬಳೆ ತೋಡಿಸುವಾಗ, ಗಂಡು ಬರುವಾಗ ಹಾಡು, ಹಸೆಯನಿಕ್ಕುವ ಹಾಡು, ಮಣೆ ಹಾಕುವಾಗ ಹೇಳುವ ಹಾಡು, ಗಂಡು ಹೆಣ್ಣು ಮುಖ ನೋಡುವ ಹಾಡು, ಧಾರೆ ಉಯ್ಯುವಾಗ, ಆರತಿ ಮಾಡುವಾಗ, ರಂಗ ಪ್ರಾರ್ಥನೆ ಬಗ್ಗೆ ಒಂದಷ್ಟು ಚಿತ್ರಿಸಿ ಕೃತಿಯ ಕೊನೆಯಲ್ಲಿ ಅರ್ಥಕೋಶ ಸೂಚಿ ಪತ್ರಗಳನ್ನು ನೀಡಿದ್ದಾರೆ. ಒಟ್ಟಾರೆಯಾಗಿ ಈ ಕೃತಿಯನ್ನು ಅವಲೋಕಿಸುವುದಾದರೆ ಒಬ್ಬ ಬ್ರಾಹ್ಮಣನಾಗಿ ಜನಜೀವನದ ಅದರಲ್ಲಿ ಸಾಮಾನ್ಯರ ಜೀವನವನ್ನು ಒಂದು ಗ್ರಾಮವನ್ನು ಕೇಂದ್ರವಾಗಿರಿಸಿ ಜನನ–ಜೀವನ, ಮರಣದ ವರೆಗೂ ನಡೆಸುವ ಕಾರ್ಯಗಳು, ವಿಧಿ ವಿಧಾನಗಳು, ಆಚರಣೆಗಳು, ಹಬ್ಬಗಳು, ಜೀವನ ಶೈಲಿ, ಉಡುಗೆ – ತೊಡುಗೆಗಳ ಬಗ್ಗೆ ರಸದೂಟವನ್ನು ಉಣಬಡಿಸಿದ್ದಾರೆ.

ಪಾಮರ ಸಾಹಿತ್ಯ ಎಂದಾಗ ಜನಪದ ಜನರಿಂದ ಜನರಿಗೆ ತಲುಪುವ ಮಾತು ನಾಣ್ನುಡಿಗಳು ಮರೆಯಾಗದಂತೆ ಶೇಖರಣೆಗೊಳ್ಳಬೇಕು ಮುಂದಿನ ಪೀಳಿಗೆಗೆ ಅದು ತಳಹದಿಯಾಗಬೇಕೆಂಬ ಒಂದು ಆಶಯದಿಂದ ಚಿಕ್ಕದಾಗಿ ಅವರೂರ ಬಗ್ಗೆ ಬರೆದ ಈ ಕೃತಿ ಸಾಹಿತ್ಯ ಪ್ರಕಾರಗಳಲ್ಲಿ ದೊಡ್ಡ ಮೈಲಿಗಲ್ಲೆಂದರೆ ತಪ್ಪಾಗಲಾರದು ಕೃತಿಯನ್ನು ಓದುವಾಗ ಹೊಸಹೊಸ ವಿಷಯಗಳ ಪರಿಚಯ ಮುಂದೇನು ಮುಂದೇನು ಎಂಬ ಕುತೂಹಲ ಓದಿದಷ್ಟು ಮತ್ತಷ್ಟು ಓದಬೇಕೆನ್ನುವ ಬಯಕೆ ಆದರೆ ಒಂದು ಬೇಸರವೆಂದರೆ ಇನ್ನೊಮ್ಮೆ ಓದಬೇಕಿತ್ತು ಎಂಬುದು ಅದು ಅಸಾಧ್ಯವಾದುದೇನಲ್ಲವಾದ್ದರಿಂದ ಮತ್ತೊಮ್ಮೆ ಓದುವೆ ಬಂಡಿಹೊಳೆಯ ಗ್ರಾಮ ಪರಿಚಯಕ್ಕಾಗಿ ಮರಳಿ ಹೋಗುವೆ ರಂಗಸ್ವಾಮಿರವರ ಹುಟ್ಟಿದ ಹಳ್ಳಿಯ ಕಥಾಮಡಿಲಿಗೆ.,

ಧನ್ಯವಾದಗಳು

**ಸಚಿನ್ ಕೆ**

ದ್ವಿತೀಯ ಬಿಇಡಿ. ಭೇರ್ಯ.

ಮೊ : 9632987581

# ಹಗಲುಗನಸು

## ಎ.ಎನ್.ಮೂರ್ತಿರಾಯರು

ಎ.ಎನ್.ಮೂರ್ತಿರಾಯರು ಕನ್ನಡದ ಖ್ಯಾತ ವಿಮರ್ಶಕ ಮತ್ತು ಸಾಹಿತಿ ಕನ್ನಡ ಸಾಹಿತ್ಯ ಲೋಕದ ಅಪ್ಪಟ ಅಭಿಜಾತ ಪ್ರತಿಭೆ. ಹೇಮಾವತಿ ತೀರದ ತಪಸ್ವಿ ನಿರಂಕುಶ ವಿಚಾರವಾದಿ. ಕರ್ನಾಟಕದ ಸಾಕ್ರೆಟೀಸ್ ಎಂದೇ ಪ್ರಖ್ಯಾತಿ ಪಡೆದಿದ್ದರು.

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಜೀವನದಿ ಹೇಮಾವತಿ ತೀರದ ಅಕ್ಕಿಹೆಬ್ಬಾಳು ಇವರ ತವರೂರು. ಅಕ್ಕಿಹೆಬ್ಬಾಳಿನ ಎ.ಸುಬ್ಬರಾಯ ಮತ್ತು ವೆಂಕಟಲಕ್ಷ್ಮಮ್ಮನವರ ಪುತ್ರರಾಗಿ 16–6–1900ರಲ್ಲಿ ಮೂರ್ತಿರಾಯರು ಜನಿಸಿದರು. ಇವರ ಬಾಲ್ಯ ಶಿಕ್ಷಣ ಅಕ್ಕಿಹೆಬ್ಬಾಳಿನಲ್ಲೇ ನಡೆಯಿತು. ಹೆಚ್ಚಿನ ಶಿಕ್ಷಣಕ್ಕಾಗಿ ಮೈಸೂರಿಗೆ ಬಂದು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಹಾಗೂ ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನ ಪಡೆಯುವುದರೊಂದಿಗೆ ಓದಿ ಉತ್ತಮ ಫಲಿತಾಂಶ ಪಡೆಯುತ್ತಾರೆ.

ಮೂರ್ತಿರಾಯರ ಉದ್ಯೋಗ ಜೀವನ 1925ರಿಂದ ಮೈಸೂರಿನ ಮಹಾರಾಜ ಪ್ರೌಢಶಾಲೆಯ ಉಪಾಧ್ಯಾಯರಾಗಿ, ನಂತರದಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿ, ಶಿವಮೊಗ್ಗ ಇಂಟರ್ ಮಿಡಿಯೆಟ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಹಾಗೂ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, 1955ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿಯೇ ನಿವೃತ್ತಿಯನ್ನು ಪಡೆಯುತ್ತಾರೆ. ಮೂರ್ತಿರಾಯರ ಕೌಟುಂಬಿಕ ಬದುಕು ಸಂತೃಪ್ತಿಯದ್ದು, ಆದರ್ಶಪ್ರಾಯದ್ದು, ಪತ್ನಿ ಜಯಲಕ್ಷ್ಮೀ. ಮೂರು ಗಂಡು ಮಕ್ಕಳು ಎ.ಎನ್.ಸುಬ್ಬರಾಮಯ್ಯ, ಎ.ಎನ್.ನಾಗರಾಜು ಮತ್ತು ಎ.ಎನ್.ರಾಮಚಂದ್ರರಾವ್.

ಎ.ಎನ್.ಮೂರ್ತಿರಾಯರ ಜೀವನದ ಒಂದು ವಿಶೇಷತೆಯೆಂದರೆ ಇವರು

ಹುಟ್ಟಿದ್ದು 19ನೇ ಶತಮಾನದ ಅಂತ್ಯಭಾಗದಲ್ಲಿ (1900) ಮತ್ತು ಇವರು ಮರಣವನ್ನಪ್ಪಿದ್ದು 21ನೇ ಶತಮಾನದ ಆದಿ ಭಾಗದಲ್ಲಿ (2003) ಹಾಗಾಗಿ ಇವರನ್ನು ಮೂರು ಶತಮಾನಗಳನ್ನು ಕಂಡಂತಹ ಅಪರೂಪದ ವ್ಯಕ್ತಿ ಎಂತಲೂ ಕರೆಯುತ್ತಾರೆ.

ಕನ್ನಡ ಸಾಹಿತ್ಯ ಲೋಕಕ್ಕೆ ಮೂರ್ತಿರಾಯರ ಕೊಡುಗೆ ಅಮೂಲ್ಯ. ಇವರು ರಚಿಸಿರುವ ಕೃತಿಗಳ ಸಂಖ್ಯೆ 32 ಅದರಲ್ಲಿ ಕನ್ನಡದಲ್ಲಿ 29 ಹಾಗೂ ಇಂಗ್ಲೀಷ್‌ನಲ್ಲಿ 3 ಕೃತಿಗಳಿವೆ. ಕನ್ನಡ ನವೋದಯ ಸಾಹಿತ್ಯಕ್ಕೆ ಗಟ್ಟಿತನ, ಹಿರಿತನ ಹಾಗೂ ಕಲಾತ್ಮಕ ಸೊಬಗಿನ ವೈವಿಧ್ಯವನ್ನು ಮೂರ್ತಿರಾಯರು ತಂದು ಕೊಟ್ಟವರು. ಇವರ 4 ಪ್ರಬಂಧ ಸಂಕಲನಗಳೆಂದರೆ – ಹಗಲುಗನಸು, ಅಲೆಯುವಮನ, ಮಿನುಗು–ಮಿಂಚು ಹಾಗೂ ಚಿತ್ರಗಳು–ಪತ್ರಗಳು ಮೂಲಕ ಶ್ರೀಯುತರು ಕನ್ನಡ ಗದ್ಯ ಸಾಹಿತ್ಯಕ್ಕೆ ಅಪೂರ್ವ ವಾದಂತಹ ಹೊಸ ಆಯಾಮವನ್ನು ತಂದು ಕೊಟ್ಟಿದ್ದಾರೆ. "ಹಗಲುಗನಸುಗಳು" ಪ್ರಬಂಧ ಸಂಕಲನವು ಲೇಖಕರು 37ನೇ ವಯಸ್ಸಿನಲ್ಲಿದ್ದಾಗ ಪ್ರಕಟವಾಯಿತು.

## ಪ್ರಬಂಧಾವಲೋಕನ

ಲೇಖಕರು ಅವರ ಬಾಲ್ಯದಲ್ಲಿ ಮತ್ತು ನಂತರದ ಜೀವನದಲ್ಲಿ ಕಂಡಂತಹ ಹಗಲುಗನಸಿನ ಬಗ್ಗೆ ಸವಿವರವಾಗಿ ವಿವರಿಸುತ್ತಾ ಜೊತೆಗೆ ಹಗಲುಗನಸು ಎಂದರೇನು? ಅವುಗಳು ಮನುಷ್ಯರಲ್ಲಿ ಹೇಗೆ ಮೂಡುತ್ತವೆ? ಅವುಗಳಿಗೆ ತಮ್ಮದೆಯಾದ ನಿರ್ದಿಷ್ಟ ವ್ಯಾಪ್ತಿ ಇದೆಯೆ ಅಥವಾ ಇಲ್ಲವೆ ಎಂಬುದರ ಬಗ್ಗೆ ವಿಮರ್ಶಾತ್ಮಕವಾಗಿ ವಿವರಣೆಯನ್ನು ನೀಡುತ್ತಾರೆ.

"ಹಗಲುಗನಸು" ಎಂಬುದು ಎಲ್ಲರಿಗೂ ಚಿರಪರಿಚಿತವಾದಂತಹ ಪದವಾಗಿದೆ. ದೈಹಿಕವಾಗಿ ಉಪಸ್ಥಿತರಿದ್ದು ಮಾನಸಿಕವಾಗಿ ತಮ್ಮ ಆಂತರಿಕ ಆಲೋಚನೆ ಮತ್ತು ಭಾವನೆಗಳ ಕಡೆಗೆ ಹೆಚ್ಚು ಗಮನವನ್ನು ಕೇಂದ್ರಿಕರಿಸುವುದು. ಅಥವಾ ಬಾಹ್ಯ ಪ್ರಪಂಚವನ್ನು ಮರೆತು ಕಲ್ಪನಾ ಲೋಕದಲ್ಲಿ ವಿಹಾರ ಮಾಡುವುದೇ "ಹಗಲುಗನಸು" ಎಂದಿದ್ದಾರೆ. ಲೇಖಕರ ಪ್ರಕಾರ ಪ್ರಪಂಚದಲ್ಲಿ ನಿಜವಾದ ಸುಖೀಗಳೆಂದರೆ, ಹಗಲುಗನಸು ಕಾಣುವವರು. ಏಕೆಂದರೆ ಹಗಲುಗನಸುಗಳಿಗೆ ನಿರ್ದಿಷ್ಟ ವ್ಯಾಪ್ತಿ ಇಲ್ಲ, ಮಿತಿ ಇಲ್ಲ ಮತ್ತು ನಿರ್ಬಂಧಗಳಿಲ್ಲ. ಅವರವರ ಕನಸುಗಳಿಗೆ ಅವರೇ ರಾಜ/ ರಾಣಿ ಆಗಿರುತ್ತಾರೆ.

ಹಾಗಾಗಿ ಒಬ್ಬ ವ್ಯಕ್ತಿಯ ಮೇಲೆ ಲಕ್ಷ್ಮೀಯ ಕಟಾಕ್ಷವು ಎಷ್ಟೇ ಚಂಚಲವಾಗಿರಲಿ, ವಿಧಿಯ ಹೊಡೆತವು ಎಷ್ಟೇ ಕ್ರೂರವಾಗಿರಲಿ ಅದೆಲ್ಲವನ್ನು ಮರೆತು ಪ್ರತಿಭೆಯ ಶಕ್ತಿಯಿಂದ ರಮಣೀಯವಾದ ಪ್ರಪಂಚವೊಂದನ್ನು ನಿರ್ಮಿಸಿಕೊಂಡು ಪ್ರಪಂಚದ ಕಷ್ಟನಿಷ್ಠುರಗಳಿಗೆ ಸಿಕ್ಕಿಯೂ ಸಿಗದಂತೆ ಇರುವಂತಹ ಸಾಮರ್ಥ್ಯವನ್ನು ಬೆಳೆಸುತ್ತದೆ.

ಅಂದರೆ ಇಂದಿನ ಜೀವನದಲ್ಲಿ ಏನೇ ಕಷ್ಟ–ದುಖ: ನೋವುಗಳೇ ತುಂಬಿದ್ದರೂ ಸಹ ಭವಿಷ್ಯತ್ತಿನ ಜೀವನ ಇದೇ ರೀತಿ ಇರಬೇಕೆಂಬ ಕನಸುಗಳ ಬುತ್ತಿಯನ್ನು ಕೂಡಿ ಇಡುವಂತಹದ್ದೇ ಹಗಲುಗನಸುಗಳಾಗಿವೆ.

ನಮ್ಮ ಲೇಖಕರು ಹಗಲುಗನಸಿನ ಪ್ರಪಂಚಕ್ಕೆ ಮೊದಲ ಬಾರಿಗೆ ಕಾಲಿಟ್ಟಿದ್ದು ಅವರು ಚಿಕ್ಕವಯಸ್ಸಿನಲ್ಲಿ "ಅರೇಬಿಯನ್ ನೈಟ್ಸ್" ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದಾಗ ಅರೇಬಿಯನ್ ನೈಟ್ಸ್ ಎಂಬುದೊಂದು ಕಥಾ ಸಂಕಲನವಾಗಿದ್ದು, ಈ ಕಥಾಸಂಕಲನದ ಹಿಂದೆ ಒಂದು ಕಥೆಯಿದೆ ಏನೆಂದರೆ ಹಿಂದೆ 'ಶಹ್ರಿಯಾಸ್' ಎಂಬ ಒಬ್ಬ ರಾಜನಿದ್ದ ಅವನು ಮದುವೆಯಾದ ಹುಡುಗಿಯು ನಿಷ್ಠಾವಂತಳಾಗಿರುವುದಿಲ್ಲ ಇದನ್ನು ತಿಳಿದ ರಾಜ ಕೋಪೋದ್ರಿಕ್ತನಾಗಿ ಆಕೆಯ ಶಿರಚ್ಛೇದನ ಮಾಡಿಸುತ್ತಿರುತ್ತಾನೆ. ಈ ಘಟನೆಯಿಂದ ಅವನಿಗೆ ಇಡೀ ಹೆಣ್ಣು ಕುಲದ ಸ್ತ್ರೀ ಮೇಲೆ ಅಸಹ್ಯ ಮೂಡುತ್ತದೆ ಸ್ತ್ರೀ ಜನಾಂಗದ ವಿರುದ್ಧದ ಸೇಡನ್ನು ತೀರಿಸಿಕೊಳ್ಳಲು ತೀರ್ಮಾನಿಸುತ್ತಾನೆ.

ಈ ಕಾರಣದಿಂದಾಗಿ ಅವನ ನಾಡಿನಲ್ಲಿರುವ ಸುರ ಸುಂದರಿಯರನ್ನು ಪ್ರತಿ ದಿನ ಒಬ್ಬೊಬ್ಬರನ್ನು ಮದುವೆಯಾಗಿ ಬೆಳಗಾಗುವ ವೇಳೆಗೆ ಅವಳ ಶಿರಚ್ಛೇದನ ಮಾಡಿಸುತ್ತಾನೆ ಕೊನೆಗೆ ಎಂತಹ ಘಟ್ಟಕ್ಕೆ ತಲುಪಿದನೆಂದರೆ ನಾಡಿನಾದ್ಯಂತ ಅವನಿಗೆ ಸರಿಹೊಂದುವಂತಹ ಹುಡುಗಿಯರೇ ದೊರೆಯದಂತಾಗುತ್ತಾರೆ ಕೊನೆಗೆ ಅವನ ಮಂತ್ರಿಯ ಮಗಳು ಶಹರಜೌದಳನ್ನು ವಿವಾಹವಾಗುತ್ತಾನೆ. ಇವಳು ಅಪ್ರತಿಮ ಸುಂದರಿ, ಮಹಾ ಬುದ್ಧಿವಂತೆ ರಾಜನಿಗೆ ಮನತಣಿಸುವ ಕಥೆಗಳನ್ನು ಕೇಳುವುದರಲ್ಲಿ ಆಸಕ್ತಿ ಇದೆ ಎಂದು ತಿಳಿದುಕೊಳ್ಳುತ್ತಾಳೆ. ಈ ಕಾರಣದಿಂದಾಗಿ ಪ್ರತಿದಿನ ರಾತ್ರಿ ಅವನಿಗೆ ಒಂದೊಂದು ಕಥೆಯನ್ನು ಹೇಳಲು ಪ್ರಾರಂಭಿಸುತ್ತಾಳೆ. ಅದರ ಅಂತಿಮ ಭಾವೋದ್ರೇಕದ ಘಟ್ಟವನ್ನು ಮಾತ್ರ ಬೆಳಗಾಗುವ ತನಕ ಕಾದು ಹೇಳುತ್ತಿರುತ್ತಾಳೆ. ಹೀಗೆ ಪ್ರತಿ ದಿನ ಕಥೆಯ ಅಂತ್ಯವನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದ ರಾಜ ಅವಳಿಗೆ ನೀಡಬೇಕಿದ್ದ ಗಲ್ಲು ಶಿಕ್ಷೆಯನ್ನೇ ಮರೆತು ಬಿಡುತ್ತಾನೆ. ಹೀಗೆ ಶಹರಜೌದಳು ಹೇಳಿದ ಕಥೆಗಳನ್ನು ಅರೇಬಿಯನ್ ನೈಟ್ಸ್ ಎಂದು ಕರೆಯಲಾಗುವುದು.

ಈ ಕಥೆಗಳು ಲೇಖಕರ ಜೀವನದಲ್ಲಿಯೂ ಬೇರೊಂದು ಲೋಕವನ್ನೇ ಸೃಷ್ಟಿಸಿತು. ಏಕೆಂದರೆ ಪ್ರತಿನಿತ್ಯ ತಂದೆ–ತಾಯಿಯರ ಬೈಗುಳ, ಊಟ ಉಪಚಾರಗಳು, ಶಾಲೆಯ ಭೂಗೋಳ ಚರಿತ್ರೆಗಳು, ಅಸಹ್ಯವಾದ ವೇಳಾ ಪಟ್ಟಿಯ ಪ್ರಪಂಚವು ಲೇಖಕರಿಗೆ ಮೋಡ ಕವಿದಿರುವ ಮಳೆಗಾಲದ ದುರ್ದಿನದಂತೆ ಜಿಗುಪ್ಸೆಯನ್ನುಂಟು ಮಾಡುತ್ತಿದ್ದವು. ಆದರೆ ಶಹರಜೌದಳ ಕಥೆಗಳನ್ನು ಓದಲಾರಂಭಿಸಿದರೆ ಅವರು ಇಪ್ಪತ್ತನೇ ಶತಮಾನದಲ್ಲಿರುವುದನ್ನೇ ಮರೆತು ಬಿಡುತ್ತಿದ್ದರು. ಆ ಕಥೆಗಳಲ್ಲಿ ಬರುವ ಮುಖ್ಯ ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡುತ್ತಿದ್ದರು. "ನನಗೆ ಮೃತ್ಯುವೆಂಬುದೇ ಇಲ್ಲ,

ನಾವೇ ಸರ್ವಶಕ್ತರು, ಸಪ್ತಸಾಗರಗಳನ್ನು ದಾಟುವುದಾಗಲೀ, ಅಭೇದ್ಯವಾದ ದುರ್ಗಗಳನ್ನು ಬೇಧಿಸುವುದಾಗಲೀ ನನಗೆ ಅಸಾಧ್ಯವೆನಿಸದು". ಈ ರೀತಿಯ ಮನೋವೃತ್ತಿಯನ್ನು ಈ ಕಥೆಗಳು ಉಂಟುಮಾಡುತ್ತಿದ್ದವು.

ಹೀಗೆ ಲೇಖಕರು ಬಾಲ್ಯದಲ್ಲಿ ಎಷ್ಟೋ ದಿನಗಳನ್ನು ಕೇವಲ ಹಗಲುಗನಸು ಕಾಣುವುದರಲ್ಲಿಯೇ ಕಳೆದರು ಈ ಕಥೆಗಳು ಲೇಖಕರ ಮೇಲೆ ಎಂತಹ ಪ್ರಭಾವ ಬೀರಿತ್ತೆಂದರೆ ಸುಮಾರು 17–18ನೇ ವಯಸ್ಸಿನವರಿದ್ದಾಗಲೂ ಕೂಡ ಈ ಕಥೆಯಲ್ಲಿ ಬರುವ ಯಕ್ಷ ಪ್ರಪಂಚವು ಸುಳ್ಳು ಎಂದು ಅವರು ನಂಬಿರಲಿಲ್ಲ.

ಆದರೆ ಹಗಲುಗನಸುಗಳ ಸ್ವರೂಪವೂ ವಯಾಸ್ಸಾದಂತೆಲ್ಲ ವ್ಯತ್ಯಾಸವನ್ನು ಹೊಂದುತ್ತವೆ. ಚಿಕ್ಕವಯಸ್ಸಿನಲ್ಲಿ ಸುಮ್ಮನೆ ಗೆಳೆಯರೊಂದಿಗೆ ಅಲೆದಾಡುವ ಆಸೆ, ಸ್ವಲ್ಪ ದೊಡ್ಡವರಾದ ಮೇಲೆ ಸಾಹಸ ಕಾರ್ಯಗಳನ್ನು ಮಾಡಿ ಕೀರ್ತಿ ಪಡೆಯಬೇಕು, ಸಮಾಜದಲ್ಲಿ ಗುರುತಿಸಿಕೊಳ್ಳಬೇಕು ಎಂಬ ಕನಸುಗಳು ಮೂಡುತ್ತವೆ. ನಂತರ ಲೇಖಕರು ತಮ್ಮ ಊರಿಗೆ ಸಮೀಪದಲ್ಲಿರುವ ಹೇಮಾವತಿ ನದಿಯು ಕವಲೊಡೆದು ಮಧ್ಯದಲ್ಲಿ ನಿರ್ಮಾಣವಾಗಿರುವ ದ್ವೀಪದಲ್ಲಿ ಹಳೆಯ ಒಂದು ಕೋಟೆಯಿದೆಯಂತೆ, ಅಲ್ಲಿ ತನ್ನದೆಯಾದಂತಹ ಒಂದು ಅರಮನೆಯನ್ನು ವ್ಯವಸ್ಥಿತವಾಗಿ ನಿರ್ಮಿಸಬೇಕೆಂದು ಕನಸನ್ನು ಕಂಡರು. ಆ ಅರಮನೆಯ ಸುತ್ತಲೂ ಹಾವು ಚೇಳುಗಳು ಸೇರದಂತೆ ಒಂದು ಸಣ್ಣ ಬಿರುಕು ಇಲ್ಲದಂತೆ ಕೋಟೆಯನ್ನು ಸರಿಪಡಿಸಿ ಕೋಟೆಯ ಮೇಲೆ ಹೂ ಗಿಡಗಳ ಅಂಚು ಕಟ್ಟಿರುವ ಸಣ್ಣ ರಸ್ತೆಗಳು, ಅಲ್ಲಲ್ಲಿ ಕೊಳವಿರಬೇಕು, ಅರಮನೆಯ ಮೇಲೆ ನಿಂತು ನೋಡಿದರೆ ಪೂರ್ವ–ಪಶ್ಚಿಮದ ಬಹುದೂರದವರೆವಿಗೂ ಹೇಮಾವತಿ ನದಿ ಹೊಳೆಯುತ್ತಿರಬೇಕು, ಉಳಿದೆಲ್ಲಾ ಕಡೆಗಳಲ್ಲಿ ದಿಗಂತದವರೆಗೂ ಭತ್ತದ ಪೈರುಗಳು ಕಂಗೊಳಿಸುತ್ತಿರಬೇಕು, ಅರಮನೆಯ ಸುತ್ತಲೂ ವಿಸ್ತಾರವಾದ ಉಪವನ ಅರಮನೆಯ ಸಮೀಪದಲ್ಲಿ ಬೆಳದಿಂಗಳ ರಾತ್ರಿಯಲ್ಲಿ ದೋಣಿಯಲ್ಲಿ ವಿಹಾರ ಮಾಡುವಂತೆ ಒಂದು ಸರೋವರವಿರಬೇಕು. ಹೀಗೆ ನಿಜವಾದ ಕೋಟ್ಯಾಧೀಶ್ವರರಾಗಿದ್ದರೂ ಸಹ ಈ ರೀತಿಯ ಕೆಲಸ ಕಾರ್ಯಗಳನ್ನು ಕೈಗೊಳ್ಳುವಾಗ ಇಷ್ಟು ಜಾಗರೂಕತೆಯನ್ನು ವಹಿಸುತ್ತಿರಲಿಲ್ಲ. ಅಷ್ಟು ಎಚ್ಚರಿಕೆಯಿಂದ ಲೇಖಕರು ಎಷ್ಟೋ ವೇಳೆ ದಿನವೆಲ್ಲಾ ಗಂಧರ್ವ ನಗರದ ನಿರ್ಮಾಣದಲ್ಲಿಯೇ ಕಳೆದಿರುವುದುಂಟು.

ಆದರೆ ಸುಮಾರು 10 ವರ್ಷಗಳ ನಂತರ ಹಿಂದಿನ ಕಾಲದ ಕನಸುಗಳನ್ನು ನೆನಪಿಗೆ ತಂದುಕೊಂಡ ಲೇಖಕರಿಗೆ ಅಂದಿನ ಕಾಲದ ಕನಸುಗಳು ಸುಖಕರವಾದ ಅನುಭವವನ್ನು ನೀಡಿದರೂ ಸಹ ಮರಳುಗಾಡಿನಲ್ಲಿ ಪ್ರಯಾಣಿಕರನ್ನು ಮೋಸಗೊಳಿಸುವ ಮರೀಚಿಕೆಯಂತೆ ಶೂನ್ಯದಲ್ಲಿ ಕೊನೆಗೊಂಡವು ಮತ್ತು ನೀರಿನ ಮೇಲಿನ ಶಾಸನದಂತೆ ಕನಸುಗಳು ಹಗಲುಗನಸುಗಳಾಗಿಯೇ ಉಳಿದವು. ಎಂಬ ಹತಾಸೆ, ಅತೃಪ್ತಿ, ಅಪೂರ್ಣತೆಯ ಮನೋಭಾವನೆ ಕೆಲವೊಮ್ಮೆ ಲೇಖಕರಿಗೆ ಮೂಡಿದ್ದುಂಟು. ಆದರೂ

ಕೂಡ ಆ ಕನಸಿನ ಗಂಧರ್ವಲೋಕಮಯ ಪ್ರಪಂಚವು ಲೇಖಕರಿಗೆ ಮುದವನ್ನುಂಟು ಮಾಡುತ್ತದೆ.

ಒಟ್ಟಾರೆಯಾಗಿ ಲೇಖಕರು ಈ ಪ್ರಬಂಧದಲ್ಲಿ ಆಧುನಿಕ ಆಢಂಬರಕ್ಕಿಂತ ಪ್ರಾಚೀನತೆಗೆ, ರಾಜ್ಯ – ರಾಜ ಮನೆತನಗಳ ಆಳ್ವಿಕೆಯ ಕಡೆಗೆ ಹೆಚ್ಚು ಒಲವನ್ನು ಹೊಂದಿದ್ದರು ಎಂಬುದು ಗೋಚರವಾಗುತ್ತದೆ ಒಟ್ಟಾರೆಯಾಗಿ ಹೇಳುವುದಾದರೆ ಸಮಯ ಯಾರಿಗಾಗಿಯೂ ಕಾಯದು ಕನಸುಗಳನ್ನು ಕಾಣುವಾಗ ವರ್ಷಗಳು–ತಿಂಗಳುಗಳಾಗಿ, ತಿಂಗಳುಗಳು– ದಿನಗಳಾಗಿ, ದಿನಗಳು–ಕ್ಷಣಗಳಾಗಿ ಕಳೆದು ಹೋಗುತ್ತವೆ. ಹಾಗಾಗಿ ಕೇವಲ ಕನಸನ್ನು ಕಾಣುವುದನ್ನು ಬಿಟ್ಟು ಅವುಗಳನ್ನು ನನಸು ಮಾಡಿಕೊಳ್ಳುವ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳಿರಬೇಕು.

ನಮ್ಮ ದೇಶ ಕಂಡಂತಹ ಅತ್ಯುನ್ನತ ವಿಜ್ಞಾನಿ ಹಾಗೂ ರಾಷ್ಟ್ರಪತಿಗಳು ಆಗಿದ್ದಂತಹ ಡಾ.ಎ.ಪಿ.ಜೆ ಅಬ್ದುಲ್ ಕಲಾಂರವರ ಮಾತಿನಂತೆ,

***ನಿದ್ರೆಯಲ್ಲಿ ಕಾಣುವುದು ಕನಸಲ್ಲ,***
***ನಿದ್ರೆಗೆಡುವಂತೆ ಮಾಡುವುದಿದೆಯಲ್ಲ***
***ಅದೇ ನಿಜವಾದ ಕನಸು.***

ಎಂಬಂತೆ ಕನಸುಗಳನ್ನು ಕಾಣಬೇಕು. ಆದರೆ ಅವುಗಳು ನಮ್ಮ ಗುರಿಯನ್ನು ತಲುಪುವ ಹಾದಿಯಂತಿರಬೇಕು. ಅವುಗಳ ಸಫಲತೆಗಾಗಿ ಕಠಿಣ ಪರಿಶ್ರಮ, ನಿರಂತರ ಪ್ರಯತ್ನಗಳಿರಬೇಕು ಗುರಿಯನ್ನು ತಲುಪುವವರೆಗೂ ಸಾಗುವ ದಾರಿಯಲ್ಲಿ ಅನೇಕ ಕಲ್ಲು ಮಳ್ಳುಗಳಿದ್ದರೂ ಕೂಡ ಛಲ ಬಿಡದೇ ಪ್ರಯತ್ನಗಳನ್ನು ಮುಂದುವರೆಸಬೇಕು. ಆಗ ಮಾತ್ರ ಮುಂದೊಂದು ದಿನ ನಮ್ಮ ಕನಸುಗಳು ನನಸಾಗಲು ಸಾಧ್ಯ.

ಧನ್ಯವಾದಗಳು

**ಶಿಲ್ಪ.ಕೆ.ಎಸ್. ಕೋಂ. ಸೋಮಶೇಖರ**
ಕಟ್ಟಹಳ್ಳಿ (ಗ್ರಾ), ಬೂಕನಕೆರೆ (ಹೋ)
ಕೆ.ಆರ್.ಪೇಟೆ (ತಾ), ಮಂಡ್ಯ ಜಿಲ್ಲೆ.
ಮೊ : 7337671132

# ಅಲೆಯುವ ಮನ

ಅತ್ತಿಗುಪ್ಪೆ ಸಾಹಿತ್ಯ ಬಳಗ, ಅಕ್ಷಯ ಪ್ರಕಾಶನ ಹಾಗೂ ಗ್ರಾಮಭಾರತಿ ವಿದ್ಯಾಸಂಸ್ಥೆಯು ಸಹಯೋಗ ಕೃಷ್ಣರಾಜಪೇಟೆ ಇವರುಗಳ ಕಡೆಯಿಂದ ಹಮ್ಮಿಕೊಂಡಿರುವ ಸಾಹಿತ್ಯ–ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ ಮೊದಲಿಗೆ ಈ ಸಾಹಿತ್ಯ ಸಂಭ್ರಮದಲ್ಲಿ ಭಾಗವಹಿಸಲು ನಮಗೆ ಅವಕಾಶ ನೀಡಿದ ನಿಮಗೆಲ್ಲರಿಗೂ ನಮಸ್ಕಾರಗಳು,

ಈ ವಿಷಯ ಮಂಡನೆ ಕಾರ್ಯಕ್ರಮದಲ್ಲಿ ನಾನು ಮಂಡಿಸಲಿರುವ ವಿಷಯ ಎ.ಎನ್‌ಮೂರ್ತಿರಾಯರ ಸಮಗ್ರ ಲಲಿತ ಪ್ರಬಂಧಗಳಲ್ಲಿ ಒಂದಾದ "ಅಲೆಯುವ ಮನ" ಸಂಕಲನದಿಂದ ಆಯ್ದ, ಕೆನ್ಸಿಂಗ್ಟನ್ ಪಾರ್ಕ್, ಹೋಟೇಲುಗಳು, ಹೆಂಡಂತಿಯ ಹೆಸರು, ದಿವಾನಖಾತೆಯ ಅಂದ – ಚಂದ ಹಾಗೂ ವ್ಯಾಘ್ರ ಗೀತೆ, ಪ್ರಬಂಧಗಳ ಅವಲೋಕನ ವರದಿ ಮಂಡಿಸುತ್ತೇನೆ.

ಅಕ್ಕಿಹೆಬ್ಬಾಳಿನ ನರಸಿಂಹಮೂರ್ತಿರಾಯರು ಕನ್ನಡ ಸಾಹಿತ್ಯ ಲೋಕದ ಅಪ್ಪಟ ಅಭಿಜಾತ ಪ್ರತಿಭೆ.

ಮೂರ್ತಿರಾಯರ ಕೌಟುಂಬಿಕ ಬದುಕು ಸಂತೃಪ್ತ ಮತ್ತು ಆದರ್ಶಪ್ರಾಯ ಪತ್ನಿ ಜಯಲಕ್ಷ್ಮೀ ಮತ್ತು ಮೂರು ಗಂಡು ಮಕ್ಕಳು ಎ.ಎನ್.ಸುಬ್ಬರಾಮಯ್ಯ, ಎ.ಎನ್.ನಾಗರಾಜು ಮತ್ತು ಎ.ಎನ್.ರಾಮಚಂದ್ರರಾವ್. ಕನ್ನಡ ಸಾಹಿತ್ಯ ಲೋಕಕ್ಕೆ ಎ.ಎನ್.ಮೂರ್ತಿರಾಯರ ಕೊಡುಗೆ ಅಮೂಲ್ಯವಾದುದ್ದು. ಕನ್ನಡ ನವೋದಯ ಸಾಹಿತ್ಯಕ್ಕೆ ಗಟ್ಟಿತನ, ಹಿರಿತನ ಹಾಗೂ ಕಲಾತ್ಮಕ ಸೊಬಗಿನ ವೈವಿಧ್ಯವನ್ನು ಮೂರ್ತಿರಾಯರು ತಂದು ಕೊಡುತ್ತಾರೆ. ಬದುಕನ್ನು ಅಪಾರವಾಗಿ ಪ್ರೀತಿಸುವ

ಸಾಹಿತಿಯಾಗಿ ತಮ್ಮ ಕೃತಿಗಳಲ್ಲಿ ವಿಜೃಂಭಿಸುತ್ತಾರೆ. ಕನ್ನಡ ಗದ್ಯ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದು ಕೊಟ್ಟಿದ್ದಾರೆ.

ಇವರ ಈ ಅಮೂಲ್ಯವಾದ ಸಾಹಿತ್ಯ, ಸೇವಾ ಕೊಡುಗೆಗೆ ದೊರೆತ ಪ್ರಶಸ್ತಿಗಳು, ಪ್ರಶಂಸೆಗಳು ಹಾಗೂ ಬಿರುದುಗಳು ಅಪಾರ. 1957ರಲ್ಲೇ ಪ್ರಕಟಗೊಂಡು ಆರು ಬಾರಿ ಮುದ್ರಣಗೊಂಡು ಜನಪ್ರಿಯವಾಗಿರುವ 'ಅಲೆಯುವ ಮನ' ಸಂಕಲನದಲ್ಲಿ ಒಟ್ಟು 14 ಪ್ರಬಂಧಗಳಿವೆ. ಇದರಲ್ಲಿ ಪ್ರಿಯವಾದ ಅನುಭವ ಕಥಾನಕಗಳಿವೆ. ಗೇಲಿ ಮಾಡುತ್ತಲೇ ಆನಂದವನ್ನು ಅನುಭವಿಸುವ ಪರಿಧಿಗೆ ನಮ್ಮನ್ನು ಕೊಂಡೊಯ್ಯುತ್ತವೆ.

## ಅಲೆಯುವ ಮನ

ಅಲೆಯುವ ಮನ ಶೀರ್ಷಿಕೆಯೆ ಹೇಳುವಂತೆ ಸ್ಥಿಮಿತವಿಲ್ಲದ ಮನಸ್ಸು, ಇರುವುದನ್ನು ಬಿಟ್ಟು ಇಲ್ಲದಿರುವುದರೆಡೆಗೆ ತುಳಿವುದೇ ಜೀವನ ಎಂಬಂತೆ ಒಮ್ಮೆ ಖುಷಿ ಕೊಡುವ ವಿಚಾರ ಮತ್ತೊಮ್ಮೆ ಬೇಸರ ಮೂಡಿಸುತ್ತದೆ, ಒಮ್ಮೆ ಇದೆ ಬೇಕೆನ್ನುವ ಮನಸ್ಸು, ಅದು ಸಿಕ್ಕಿದ  ನಂತರದಲ್ಲಿ ಬೇಡ ಎನಿಸುವುದು ಉಂಟು.

ಇನ್ನು ಈ ಅಲೆಯುವ ಮನ ಕಥಾ ಸಂಕಲನದಲ್ಲಿ ಬರುವ 14 ಪ್ರಬಂಧಗಳಲ್ಲಿ ಕೆಲವೊಂದನ್ನು ಆಯ್ದುಕೊಂಡು ಇಲ್ಲಿ ಪ್ರಸ್ತುತ ಪಡಿಸುತ್ತಿದ್ದೇನೆ.

**ಮೊದಲನೆಯದಾಗಿ "ಕೆನ್ಸಿಂಗ್ಟನ್ ಪಾರ್ಕ್"**

## "ಕೆನ್ಸಿಂಗ್ಟನ್ ಪಾರ್ಕ್"

ಇನ್ನು ಕೆನ್ಸಿಂಗ್ಟನ್ ಪಾರ್ಕ್‌ಗೆ ಬರುವುದಾದರೆ ಎಲ್ಲ ಕವಿಗಳಿಗೆ ಇಷ್ಟವಾಗುವಂತಹ ತಮ್ಮ ಬರವಣಿಗೆಗೆ ಬುನಾದಿ ಹಾಕುವಂತಹ ಪ್ರಕೃತಿ, ಸೌಂದರ್ಯ, ನಿಶ್ಯಬ್ಧತೆ, ಸಾಲು ಮರಗಳು, ದೀಪಗಳ ಪ್ರತಿಬಿಂಬ, ಸಂಧ್ಯಾರಾಗ ಇವೆಲ್ಲವೂ ಲೇಖಕರ ಮನಸ್ಸಿಗೇಕೋ ಸಪ್ಪೆಯ ವಿಷಯಗಳಾಗಿ ಕಾಣಿಸುತ್ತಿದ್ದವು. ಇದಕ್ಕೆ ಬದಲಾಗಿ ಜನ ನಿಬಿಡ ಬೀದಿಗಳು, ಬೈಸಿಕಲ್ – ಮೋಟಾರುಗಳ ಸಂದಣಿ, ಜಟಕಾದವರ ಚಾಟಿಯ ಶಬ್ದ ವೈಖರಿ, ವಿದ್ಯುದ್ದೀಪರಂಜಿತವಾದ ಅಂಗಡಿಗಳಲ್ಲಿ ಕಂಗೊಳಿಸುವ ವಸ್ತ್ರಭೂಷಣಗಳು, ಅಲ್ಲಲ್ಲಿಯೇ ಕೇಳಿ ಬರುವ ರೇಡಿಯೋ ಸಂಗೀತ, ಹೋಟಲುಗಳಿಂದ ಬರುವ ಭಕ್ಷಗಳ ಕಂಪು ಇವೆಲ್ಲವೂ ಲೇಖಕರ ಮನಸ್ಸಿಗೆ ಮುದ ನೀಡುತ್ತಿದ್ದವು.

ಇಂತಹ ಮನಸ್ಥಿತಿಯಲ್ಲಿ ಬೆಂಗಳೂರಿಗೆ ಹೋಗಿದ್ದ ಲೇಖಕರನ್ನು ಅವರ ಸ್ನೇಹಿತರು ಬಲವಂತವಾಗಿ ಕೆನ್ಸಿಂಗ್ಟನ್ ಪಾರ್ಕ್‌ಗೆ ಕರೆದೊಯ್ದರು, ಅದು ಲೇಖಕರ ಮನಸ್ಸಿಗೆ ಮುದ ನೀಡದ ವಿಷಯವಾಯಿತು. ಆ ಪಾರ್ಕ್ ಲೇಖಕರ ಪಾಲಿಗೆ ಉಗುಳಲಾರದ ತುಪ್ಪವೇ ಸರಿ ಎನಿಸಿತು.

ಈ ಪ್ರಬಂಧದ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ ಒಬ್ಬ ವ್ಯಕ್ತಿಗೆ ಒಂದು ಕೆಲಸ ಇಷ್ಟವಿಲ್ಲ ಎಂದ ಮೇಲೆ ಅದನ್ನು ಬಲವಂತವಾಗಿ ಅವನ ಮೇಲೆ ಹೇರಿದರೆ ಅಕಾರ್ಯ ಖಂಡಿತವಾಗಿಯೂ ಫಲ ಕೊಡುವುದಿಲ್ಲ, ಕಾರ್ಯ ಸಫಲವಾಗುವುದಿಲ್ಲ ಎಂಬುದು.

## ಹೋಟೆಲುಗಳು

ಹೋಟಲಿಗೆ ಹೋಗುವುದು ಕೆಟ್ಟದ್ದು. ಹೋಟಲಿನ ಊಟ ಅದರಕ್ಕೆ ಸಿಹಿ ಉದರಕ್ಕೆ ಕಹಿ. ಹೋಟಲಿನ ಚಟ ಕುಡಿತದ ಚಟದಷ್ಟೇ ಕೆಟ್ಟದ್ದು ಎಂಬುದು ಲೇಖಕರ ಭಾವನೆ ಅದು ಸತ್ಯವೂ ಹೌದು.

ಮನೆಯಲ್ಲಿ ಮಡದಿ ಪ್ರೀತಿಯಿಂದ ಮಾಡಿ ಬಡಿಸುವ ಅಡಿಗೆ ಮನಸ್ಸಿಗೂ, ದೇಹದ ಆರೋಗ್ಯಕ್ಕೂ ಯೋಗ್ಯ ಎಂಬುದು ಲೇಖಕರದ್ದೇ ಮಾತಾಗಿದ್ದರೂ, ಊಟದೊಟ್ಟಿಗೆ ಸಿಗುವ ಮಡದಿಯ ಉಪನ್ಯಾಸ ಊಟದ ರುಚಿ ನಾಲಿಗೆಗೆ ಹತ್ತದಂತೆ ಮಾಡುತ್ತದೆ. ಹಾಗೂ ಅಡುಗೆ ಮಾಡುವಾಗ ಸೇರಿಸಿದ್ದ ಪ್ರೀತಿ ಮನಸ್ಸಿಗೆ ತಲುಪದಂತಾಗುತ್ತದೆ ಎಂಬುದು ಲೇಖಕರ ಮನಸ್ಥಿತಿ ಬಹುಶಃ ಇದು ಬಹುಪಾಲು ಗಂಡಸರ ಮನಸ್ಥಿತಿಯೆ ಆಗಿರುತ್ತದೆ ಎಂಬುದು ನನ್ನ ಭಾವನೆ.

ಮನೆಯಲ್ಲಿ ಊಟದೊಟ್ಟಿಗೆ ದೊರೆಯುವ ಬಿಟ್ಟಿ ಉಪನ್ಯಾಸಕ್ಕಿಂತ, ಹೋಟಲಿನಲ್ಲಿ ಕೇಳಿದ್ದನ್ನೆಲ್ಲ ಹಸನ್ಮುಖಿಯಾಗಿ ತಂದು ಕೊಡುವ ಮಾಣಿ ಉತ್ತಮನೆನಿಸುತ್ತಾನೆ. ಈ ಪ್ರಬಂಧದ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುವುದಾದರೆ ಆ ಮಾಣಿಯ ಸ್ನೇಹ ನೀವು ತಿಂದು ಬಿಲ್ ಪಾವತಿಸುವವರೆಗೆ ಮಾತ್ರ ನಮ್ಮ ಆರೋಗ್ಯದ ಬಗ್ಗೆಯಾಗಲೀ, ಮನಸ್ಥಿತಿಯ ಬಗ್ಗೆಯಾಗಲೀ ಅವನಿಗೆ ಯಾವುದೇ ಕಾಳಜಿ ಇರುವುದಿಲ್ಲ. ಆದರೆ ಮನೆಯಾಕೆಗೆ ಮನೆಯವರಿಗೆ ಇವೆಲ್ಲವೂ ಮುಖ್ಯ ಎಲ್ಲಾ ಅಮ್ಮಂದಿರಿಗೂ ಹಾಗೂ ಎಲ್ಲಾ ಮಡದಿಯರಿಗೂ ಮನೆಯ ವಾತಾವರಣವನ್ನು ಆರೋಗ್ಯಕರವಾಗಿ ನೋಡಿಕೊಳ್ಳುವುದಷ್ಟೇ ಮುಖ್ಯವಾಗಿರುತ್ತದೆ ಅದಕ್ಕಾಗಿಯೇ ಅವಳ ಉಪನ್ಯಾಸ........

## ಹೆಂಡತಿಯ ಹೆಸರು

ಹಿಂದೂ ಸಂಪ್ರದಾಯದಲ್ಲಿ ಮದುವೆಯಾದ ದಿನ ಧಾರೆಯಾದ ಮೇಲೆ ವರನು ವಧುವಿನ ಕೈ ಹಿಡಿದು ದೇವರ ಮನೆಗೆ ಕರೆದುಕೊಂಡು ಹೋಗಿ ದೇವರಿಗೂ ಹಿರಿಯರಿಗೂ ನಮಸ್ಕಾರ ಮಾಡಿ ಬರುವ ಪದ್ಧತಿ ಇದೆ. ಸಾಧಾರಣವಾಗಿ ಈ ಹಾದಿ ವಧು ವರರಿಗೆ ಅಷ್ಟೊ ಸುಲಭವಾಗಿರುವುದಿಲ್ಲ, ಹೊಸ್ತಿಲ ಬಳಿಯೇ ವಧು ವರರನ್ನು ಯುವತಿಯರ ಗುಂಪೊಂದು ಅಡ್ಡಗಟ್ಟಿ ವಧುವಿನ ಬಾಯಿಯಿಂದ ವರನ ಹೆಸರು ಹಾಗೂ ವರನ ಬಾಯಿಯಿಂದ ವಧುವಿನ ಹೆಸರನ್ನು ಹೇಳಿಸುವ ಪದ್ಧತಿ ಇದೆ, ಈ

ಪದ್ಧತಿಯನ್ನು ಲೇಖಕರು ಹೆಂಡತಿಯ ಹೆಸರು ಹೇಳುವ ಧೈರ್ಯವಿದೆಯೇ ಈ ಗಂಡಿಗೆ? ಎಂದು ತಿಳಿದುಕೊಳ್ಳಲು ಇಟ್ಟಿರುವ ಪರೀಕ್ಷೆಯೆಂದು ಗೇಲಿ ಮಾಡುತ್ತಲೆ ನುಡಿದಿದ್ದಾರೆ.

ಹಾಗೂ ಅಂದಿನ ಕಾಲಕ್ಕೆ ಅವಳ ತಂದೆ ತಾಯಿಯರ ಎದುರು ಮತ್ತು ಇವರ ಮನೆಯವರ ಎದುರು ಆಕೆಯ ಹೆಸರಿಡಿದು ಕರೆಯುವುದು ಮುಜುಗರದ ವಿಷಯ ಮತ್ತು ಅದು ಸಂಸ್ಕಾರವೂ ಅಲ್ಲ ಎಂಬುದು ಲೇಖಕರ ನುಡಿ.

ಅಂದಿನ ಕಾಲಕ್ಕೆ ಗಂಡ ಹೆಂಡತಿಯರ ಸಂವಾದ ಮಕ್ಕಳ ಹೆಸರಿನಲ್ಲಿಯೇ ನಡೆಯುತ್ತಿತ್ತು, ಮಕ್ಕಳು ಮನೆಯಲ್ಲಿ ಇರಲೀ ಇಲ್ಲದಿರಲೀ ಸಂವಾದ ಮಾತ್ರ ಅವರ ಹೆಸರಿನಲ್ಲೇ ನಡೆಯುತ್ತಿತ್ತು.

ಇನ್ನು ನನ್ನ ಅಭಿಪ್ರಾಯ ಹೇಳಬೇಕೆಂದರೆ ಬಹುಶಃ ತಮ್ಮ ಇಡೀ ಜೀವನದಲ್ಲಿ ಗಂಡ ಹೆಂಡತಿಯ ಹೆಸರಿಟ್ಟು ಕರೆಯುತ್ತಿದ್ದು ಬೆರಳೆಣಿಕೆಯಷ್ಟು ಸಲ ಮಾತ್ರ. ಹೆಂಡತಿ ಗಂಡನ ಹೆಸರು ಹೇಳುವುದು ಕನಸಿನಲ್ಲೂ ಸಾಧ್ಯವಾಗದ ಮಾತು ಬಿಡಿ.

ಇವತ್ತಿನ ಕಾಲಕ್ಕೆ ಈ ಪದ್ಧತಿ ಅಷ್ಟೇನು ಕಷ್ಟವಾದುದಲ್ಲ ಎಂಬುದು ನನ್ನ ಭಾವನೆ ಏಕೆಂದರೆ ಬಹುಪಾಲು ದಂಪತಿಗಳು ತಮ್ಮ ಸಂಗಾತಿಯನ್ನು ಅವರ ಹೆಸರಿನಿಂದಲೇ ಕರೆಯುತ್ತಾರೆ ಅಲ್ಲವೇ..

## ದಿವಾನಖಾನೆಯ ಅಂದ – ಚೆಂದ

ಹೀಗೆ ಬರೆದ ಮತ್ತೊಂದು ಪ್ರಬಂಧವೇ ದಿವಾನಖಾನೆಯ ಅಂದ – ಚೆಂದ ಲೇಖಕರು ಹೇಳುತ್ತಾರೆ. ಇತ್ತೀಚಿನ ನನ್ನ ಸ್ವಂತ ದಿವಾನಖಾನೆಯನ್ನು ಪ್ರವೇಶಿಸುವ ಧೈರ್ಯ ನನಗೆ ಇಲ್ಲ. ಸ್ವಲ್ಪ ಮಟ್ಟಿಗೆ ನಾನೇ ಸಂಪಾದಿಸಿದ, ಬಹುಮಟ್ಟಿಗೆ ಇತರರ ಸಂಪಾದನೆಯಿಂದ ಸಾಲ ತಂದು ಅಂತೂ ಶ್ರಮದಿಂದ ಒಟ್ಟುಗೂಡಿಸಿದ ಹಣವನ್ನು ಹುರುಳಿಕಾಳಿನಂತೆ ಚೆಲ್ಲಿ, ಮಳೆಯನ್ನದೆ, ಬಿಸಿಲೆನ್ನದೆ ನಿಂತು ಒಂದೊಂದು ಇಟ್ಟಿಗೆಯನ್ನು ಜೋಡಿಸುವಾಗಲೂ ಎಲ್ಲಿ ಕೆಟ್ಟು ಹೋಗುವುದೋ ಎಂದು ಆತಂಕಪಟ್ಟು ಆ ಮನೆಯಲ್ಲಿ ನನಗೆ ಸುಖವುಂಟೆಂಬ ಭ್ರಾಂತಿಯಿಂದ ಅದನ್ನು ಕಟ್ಟಿದಾಯಿತು.

ಆ ದಿವಾನಖಾನೆಯಂತೂ ನನಗಾಗಿ ನನ್ನೊಬ್ಬನಿಗಾಗಿ ಕಟ್ಟಿದ್ದು ಬೀದಿಯ ಮತ್ತು ಮನೆಯ ಗಲಭೆಯಿಂದ ದೂರವಿರಲೆಂದು ಮಹಡಿಯ ಮೇಲೆ ಕಟ್ಟಿದ್ದ ಕೊಠಡಿ ಅದಕ್ಕಾಗಿ ವಹಿಸಿದ ಶ್ರಮವೆಷ್ಟು ಸುರಿದ ಹಣವೆಷ್ಟು!

ಹೀಗೆ ಲೇಖಕರ ಮನಸ್ಸನ್ನು ತುಂಬಿ ಹೃದಯವನ್ನಾಕ್ರಮಿಸುವ ಕೊಠಡಿಗೆ ಈಗ ಪ್ರವೇಶವಿಲ್ಲದಂತಾಗಿದೆ ಅದು ಅವರ ಗೃಹಾಧಿದೇವತೆ ಬಾಗಿಲಿಗೆ ಬೀಗಮುದ್ರೆ

ಹಾಕಿದ್ದಾರೆ ಅಂತೇನೂ ಅಲ್ಲ. ಬದಲಿಗೆ ಆ ಕೊಠಡಿಯ ಸೌಂದರ್ಯವೇ ಒಂದು ದುಷ್ಟ ಶಕ್ತಿಯಾಗಿ ಪರಿಣಮಿಸಿ ಅವರನ್ನು ಹೊರದೂಡಿತ್ತು.

ಮೊದಲಿಗೆ ಮನೆಯನ್ನೇನು ಶೃಂಗರಿಸಿರಲಿಲ್ಲ ಯಾರದ್ದೊ ಮನೆಗೆ ಅರಿಸಿನ ಕುಂಕುಮಕ್ಕೆ ಎಂದು ಹೋಗಿ ಆ ಮನೆಯ ಅಂದ ಚೆಂದವ ನೋಡಿ ತಮ್ಮ ಮನೆಯನ್ನು ಚೆಂದವಾಗಿಸಲು ನಿರ್ಧರಿಸಿ, ಸಿಂಧು ಪತ್ರಿಕೆಯ ಗೃಹ ಶೃಂಗಾರದಲ್ಲಿ ಯಾರೊ ಮಹಿಳೆ ಬರೆದಿದ್ದರಂತೆ ಸಮುದ್ರದ ಹಸುರಿನ ಬಣ್ಣ ಕಣ್ಣಿಗೆ ಬಹಳ ಒಳ್ಳೆಯದು ಎಂದು ಅವರ ಅಭಿಪ್ರಾಯಕ್ಕೆ ತಲೆಭಾಗಿ ಅದೇ ಬಣ್ಣವನ್ನು ಗೋಡೆಗಳಿಗೂ ಬಳಸಿ, ಫರ್ನಿಚರ್ ಅಂಗಡಿಗೆ ಹೋಗಿ ಹೊಸ ಸೋಫಾ ಅದೇ ಮಾದರಿಯ ಕುರ್ಚಿಗಳು ಎಲ್ಲವನ್ನು ತಂದು ಇಡೀ ಕೊಠಡಿಯನ್ನು ಸಿಂಗರಿಸಿದ್ದರು.

ಇಷ್ಟೆಲ್ಲಾ ಸಿಂಗಾರಗೊಂಡ ಕೊಠಡಿ ಲೇಖಕರ ಸ್ವಾತಂತ್ರ್ಯವನ್ನೇ ಕಸಿದುಕೊಂಡಿತ್ತು. ಹೊರಗಿಂದ ಬಂದರೆ ಕಾಲು ಚಾಚಿ ಕೂರುವಂತಿಲ್ಲ, ಸೋಫಾ ಮೇಲೆ ಕೂತು ತಿಂಡಿ ಮಾಡುವಂತಿಲ್ಲ, ಹೊರಗೆ ಆಟವಾಡಿ ಬಂದ ಮಗು ಸೋಫಾ ಮೇಲೆ ಏರುವಂತಿಲ್ಲ, ಸೋಫಾ ಮೇಲಿನ ಮಗುವಿನ ಕಾಲು ಧೂಳಿನ ಹೆಜ್ಜೆ ಗುರುತು ಲೇಖಕರಿಗೆ "ಕೃಷ್ಣನ ಪಾದದ ಗುರುತಿನಂತೆ ಕಂಡರೆ ಅವರಾಕೆಗೆ ಅದು ಸೋಫಾ ಗಲೀಜಾಯಿತೆಂದು ಕಿರಿಕಿರಿ ತರಿಸುತ್ತಿತ್ತು".

ಈ ಎಲ್ಲಾ ಸಂಗತಿಗಳು ಲೇಖಕರನ್ನು ಅವರ ನೆಚ್ಚಿನ ಕೊಠಡಿಯಿಂದ ದೂರ ಉಳಿಯುವಂತೆ ಮಾಡಿದವು.

ಇದರ ಬಗ್ಗೆ ನನ್ನ ಅಭಿಪ್ರಾಯ ಹೇಳಬೇಕೆಂದರೆ ಇಂತಹ ಅನುಭವ ನಮ್ಮೆಲ್ಲರಿಗೂ ಆಗಿರುತ್ತದೆ ಅನಿಸುತ್ತದೆ. ತುಂಬಾ ಇಷ್ಟ ಪಟ್ಟ ಕೆಲವು ವಿಷಯಗಳು ಬೇರೆಯವರ ಅತಿಯಾದ ಕಾಳಜಿಯಿಂದ ಕಿರಿಕಿರಿ ತರಿಸುವುದುಂಟು!

ಅದಕ್ಕೆ ಪ್ರೀತಿ, ಅಭಿಮಾನ, ಮನುಷ್ಯ ಮತ್ತು ಅವನ ಭಾವನೆಗಳ ಮೇಲೆ ಇರಬೇಕೆ ವಿನಃ ವಸ್ತುಗಳ ಮೇಲಲ್ಲ ಎಂಬುದು ನನ್ನ ಭಾವನೆ.

**ವ್ಯಾಘ್ರಗೀತೆ**

'ಎಲೆ ಬೆಕ್ಕೆ ರೂಪಿನಿಂದಲೇ ಹುಲಿಯ ಜಾತಿಗೆ ಸೇರ್ದೆನೆಂದು ಗರ್ವಿಸಬೇಡ' ಎಂದು ಹುಲಿಯನ್ನು ಕೇವಲ ಹಿಂಸ್ರಪಶುವೆಂದು ತಿರಸ್ಕರಿಸಲಿಲ್ಲ ಅದರ ಜಾತಿಗೆ ಸೇರುವುದು ಹೆಮ್ಮೆಯ ವಿಷಯವೆಂದು ಕವಿಗಳು ಮನಗಂಡಿದ್ದರು ಎಂದು ಲೇಖಕರು ಹೇಳುತ್ತಾರೆ.

ಒಮ್ಮೆ ಸ್ನೇಹಿತರನ್ನು ಭೇಟಿ ಮಾಡಲು ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದ

ಶಾನುಭೋಗರು ಹಿಂದಿರುಗುವಷ್ಟರಲ್ಲಿ ಸಂಜೆಯಾಗಿತ್ತು. ತಮ್ಮ ಹಳ್ಳಿಯನ್ನು ತಲುಪಲು ಕಾಡನ್ನು ದಾಟಿ ಹೋಗಬೇಕಿತ್ತು ಆ ಸಮಯದಲ್ಲಿ ಹುಲಿಯೊಂದು ಶಾನುಭೋಗರನ್ನು ಆಕ್ರಮಣ ಮಾಡಲು ಸಜ್ಜಾಯಿತು. ಹುಲಿಯನ್ನು ನೋಡಿದ ಶಾನುಭೋಗರು ಭಯದಿಂದ ಇದ್ದರೂ ಜಾಣ್ಮೆಯಿಂದ ವರ್ತಿಸಿದರು.

ಪ್ರತಿ ಬಾರಿ ಹುಲಿ ಅವರ ಮೇಲೆ ಎರುಗಲು ಬಂದಾಗಲು ಶಾನುಭೋಗರು ನೆಗೆದು ಹುಲಿಗೆ ಬೆನ್ನು ಮಾಡಿ ನಿಲ್ಲುತ್ತಿದ್ದರು, ಹೀಗೆ ಸಾಕಷ್ಟು ಬಾರಿ ನಡೆಯಿತು. ಇದರಿಂದ ಇನ್ನಷ್ಟು ಕೋಪ ಮತ್ತು ಹತಾಶೆಗೊಂಡ ಹುಲಿ ನಿರಾಯುಧನಾದ ಬ್ರಾಹ್ಮಣನೊಬ್ಬನಿಂದ ಸೋಲಾಯಿಂತೆಂದರೆ! ಆರ್ಷೇಯವಾಗಿ ಬಂದ ಸ್ವಧರ್ಮಕ್ಕೆ ತಿಲಾಂಜಲಿ ಕೊಟ್ಟು ಬೆನ್ನು ತಿರುಗಿಸಿದವನಾದರೂ ಆಗಲೀ, ಮೇಲೆ ಬಿದ್ದೆ ಬಿಡಲೆ ಎಂಬ ಯೋಚನೆ ಅದರ ಮನಸ್ಸಿಗೆ ಬಂದಿತ್ತು ಕ್ಷಣ ಕಾಲ ಅದರ ಮನಸ್ಸಿನಲ್ಲಿ ಗೊಂದಲ ಸೃಷ್ಟಿಸಿತು. ಮೊದಲಿನಿಂದಲೂ ನಡೆದಿರುವ ಧರ್ಮಾದರ್ಮಗಳ ಯುದ್ಧ.

ಆದರೆ ಆ ಗೊಂದಲ ಕ್ಷಣ ಕಾಲಕ್ಕಿಂತಲೂ ಹೆಚ್ಚಾಗಿ ನಿಲ್ಲಲಿಲ್ಲ. ಅದು ಸದ್ವಂಶದಲ್ಲಿ ಜನಿಸಿದ ಹುಲಿ 'ಖಂಡವಿದೆಕೋ ಮಾಂಸವಿದೆಕೋ ಗುಂಡಿಗೆಯ ಬಿಸಿ ರಕ್ತವಿದೆಕೋ' ಎಂದು ಆ ಹಸು ಆಹ್ವಾನ ಕೊಟ್ಟಾಗ ತನ್ನ ಅಜ್ಜ ಬಾಯಿ ಚಪ್ಪರಿಸಿಕೊಂಡು ಹಸುವನ್ನು ತಿನ್ನಬಹುದಾಗಿತ್ತು ಆದರೆ ಅದು ತಿನ್ನಲಿಲ್ಲ. ಅಂತಹದರಲ್ಲಿ ನಾನು ಅಧರ್ಮ ಮಾಡುವುದೇ ಎಂದು ಹುಲಿ ಯೋಚಿಸಿ ಅದು ಧರ್ಮ ಪರಿಪಾಲನೆ ಮಾಡಿತು.

ಹೀಗೆ ಮುಂದುವರಿದಂತೆ ಹುಲಿಯಿಂದ ಶಾನುಭೋಗರು ತಪ್ಪಿಸಿಕೊಂಡರು. ಹಾಗೂ ಹುಲಿಯ ಆದರ್ಶಕ್ಕೆ ಮೆಚ್ಚುಗೆ ಸೂಚಿಸಿದರು.

ಈ ಪ್ರಬಂಧದ ಬಗ್ಗೆ ನನ್ನ ಅಭಿಪ್ರಾಯವೆಂದರೆ ಅಂತಹ ವ್ಯಾಘ್ರವೇ ಧರ್ಮ ಪರಿಪಾಲನೆಯಲ್ಲಿ ಅಷ್ಟೂ ನಿಷ್ಟೆಯಿಂದ ಇರಬೇಕಾದರೆ ಇನ್ನೂ ನಾವು ಮನುಷ್ಯರು ಮೇಲಾಗಿ ಕಲಿತವರು ನಾವು ಎಷ್ಟರ ಮಟ್ಟಿಗೆ ಧರ್ಮ ಪರಿಪಾಲನೆ ಮಾಡಬೇಕು ಅಲ್ಲವೇ ..

ಅಭಿಪ್ರಾಯ

ಇನ್ನು ಇಡೀ ಸಾಹಿತ್ಯ ಸಂಭ್ರಮ ಕಾರ್ಯಕ್ರಮದ ಬಗ್ಗೆ ನನ್ನ ಅಭಿಪ್ರಾಯವನ್ನು ಹಂಚಿಕೊಳ್ಳುವುದಾದರೆ,

ಸಾಹಿತ್ಯ ಸಂಭ್ರಮ ಒಂದು ಉತ್ತಮ ಹಾಗೂ ಉಪಯುಕ್ತವಾದ ಕಾರ್ಯಕ್ರಮ. ಸಾಹಿತ್ಯ ಲೋಕದಲ್ಲಿನ ನಮ್ಮ ಸ್ಥಳೀಯ ಬೇರುಗಳ ಪರಿಚಯ ಮಾಡಿಕೊಟ್ಟಂತಹ ಕಾರ್ಯಕ್ರಮವಿದು. ಸಾಹಿತ್ಯ ಲೋಕದಲ್ಲಿ ಅಲ್ಪ ಪ್ರಮಾಣದ ಶಿಕ್ಷಣವೊಂದಲು ನಮಗೆ ಅನುವು ಮಾಡಿಕೊಟ್ಟಂತಹ ಕಾರ್ಯಕ್ರಮವಿದು.

ಸಾಹಿತ್ಯ ಸಂಭ್ರಮವು ನಮಗೆ ಹೊಸ ಅನುಭವವನ್ನು ಉಣಬಡಿಸಿತು ಎಂದು ಹೇಳಿದರೆ ತಪ್ಪಾಗಲಾರದು ನಾವು ಈ ರೀತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬಹುದೆಂದು ಯೋಚಿಸಿ, ನಮ್ಮ ಮೇಲೆ ನಂಬಿಕೆ ಇಟ್ಟು ನಮ್ಮನ್ನೆಲ್ಲ ಹುರಿದುಂಬಿಸಿದ ಎಲ್ಲ ಸಾಹಿತಿಗಳಿಗೂ ನನ್ನ ಹೃದಯ ಪೂರ್ವಕ ನಮನಗಳು.

**ಅರ್ಪಿತ ಎಂ.ಎನ್ ಬಿನ್ ನಾಗೇಗೌಡ**
ಮತ್ತಿಕೆರೆ, ಬೂಕನಕೆರೆ (ಹೋ)
ಕೆ.ಆರ್.ಪೇಟೆ (ತಾ) 571426
ಮೊ: 8970092082.

# ಸ್ವತಂತ್ರ ಸಿದ್ದಲಿಂಗೇಶ್ವರರು – ಒಂದು ಅವಲೋಕನ

ಸಾಹಿತ್ಯ ಕ್ಷೇತ್ರಕ್ಕೆ ತಾಲ್ಲೂಕಿನ ಕೊಡುಗೆ ಅಪಾರ. ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದ ಈ ಸಂದರ್ಭಕ್ಕೂ ತಾಲ್ಲೂಕಿನ ಸಾಹಿತಿಗಳು ತಮ್ಮ ತಮ್ಮ ವಿಶಿಷ್ಟ ಕೃತಿಗಳನ್ನು ರಚಿಸುವ ಮೂಲಕ ವಿಶೇಷ ಆಯಾಮದ ಛಾಪು ಮೂಡಿಸಿದ್ದಾರೆ. ಇಲ್ಲಿನ ಸಾಹಿತಿಗಳ ಮೇಲೆ ಹಿಂದಿನ ಸಾಧಕರ ಪ್ರಭಾವ ಪ್ರೇರಣೆ ಇದೆ. ಅವರವರ ಕೃತಿಗಳು ಈ ನಿಟ್ಟಿನಲ್ಲಿ ಮಾಹಿತಿ ಕೊಡುತ್ತವೆ. ಅಂತಹ ಹಿರಿಯದಾದ, ಸಾಕಷ್ಟು ವಚನಗಳ ಮೂಲಕ ತಮ್ಮ ನೆಲೆಯನ್ನು ಗಟ್ಟಿಗೊಳಿಸಿ, ಇಂದಿಗೂ ಸಾನಿಧ್ಯದ ಪ್ರಖ್ಯಾತಿಯನ್ನು ಸಾರುವ ಮೂಲಕ ಹೆಸರಾಗಿರುವ, ನಮ್ಮ ತಾಲ್ಲೂಕಿನ ದಕ್ಷಿಣಕಾಶಿ ಎಂದೇ ಹೆಸರಾಗಿರುವ ಶ್ರೀ ಕ್ಷೇತ್ರ ಕಾಪನಹಳ್ಳಿ ಗವಿಮಠದ ಸ್ವತಂತ್ರ ಸಿದ್ದಲಿಂಗೇಶ್ವರರ ಸಾಧಿತ ಬದುಕಿನ ಹಾಗೂ ಅವರ ಜೀವನದ ಪುಟ್ಟ ಅವಲೋಕನವನ್ನು ನಿಮ್ಮೆಲರ ಮುಂದೆ ಮಂಡಿಸುವ ಸದಾವಕಾಶ ಇಂದು ನನ್ನದಾಗಿದೆ.

ಇದು ನಿಜಕ್ಕೂ ನನ್ನ ಜೀವನದಲ್ಲಿ ವಿಶೇಷ ಸಂಗತಿಯೇ ಸರಿ. ಏಕೆಂದರೆ ಗವಿಮಠದ ಸಿದ್ದಲಿಂಗೇಶ್ವರ ನಮ್ಮ ಮನೆ ದೇವರು. ಹಬ್ಬ–ಹರಿದಿನಗಳಲ್ಲಿ, ದೇವರನ್ನು ನೆನೆದಾಗಲೆಲ್ಲ ನಮ್ಮ ಕುಟುಂಬದವರೆಲ್ಲ ಸಿದ್ಧಲಿಂಗರ ಸಾನಿಧ್ಯಕ್ಕೆ ಹೋಗುತ್ತೇವೆ. ಹಾಗಾಗಿ ಇದು ನನಗೆ ಬಹಳ ಹತ್ತಿರವಾದ ಹಾಗೂ ಖುಷಿಯ ಸಂಗತಿ ಎನ್ನಬಹುದು. ವ್ಯಕ್ತಿಯ ವಿಚಾರಗಳು ಮತ್ತು ಜೀವನದ ನಿದರ್ಶನಗಳು ಅವರ ಆತ್ಮಾವಲೋಕನದ ವಿಷಯಗಳನ್ನು ಅರಿತಾಗ ಅವರ ಮೇಲೆ ಗೌರವ, ಭಕ್ತಿ ಹಾಗೂ ಪ್ರೇರಣೆ ನಮಗೆ ಹೆಚ್ಚುತ್ತದೆ ಅಲ್ಲವೇ? ಈ ನಿಟ್ಟಿನಲ್ಲಿ ನನಗೆ ಇಂದಿನ ವಿಚಾರ ಬಹಳ ಪ್ರಮುಖ ಪಾತ್ರವನ್ನು ವಹಿಸಿದೆ.

'ನಿಜಗುರು ಸ್ವತಂತ್ರ ಸಿದ್ದಲಿಂಗೇಶ್ವರ' ಎಂಬ ವಚನಾಂಕಿತಗಳಿಂದ ನಮ್ಮ ತಾಲ್ಲೂಕಿನಲ್ಲಿ ಹೆಸರುವಾಸಿಯಾಗಿರುವ ಗವಿಮಠದ ಸಿದ್ಧಲಿಂಗೇಶ್ವರರ ಸಾನಿಧ್ಯವು

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಕಾಪನಹಳ್ಳಿಗೆ ಸಮೀಪದ ಗಜರಾಜಗಿರಿಯಲ್ಲಿ ಕಂಡು ಬರುತ್ತದೆ. ಗಜರಾಜಗಿರಿ – ಸ್ವತಂತ್ರ ಸಿದ್ಧಲಿಂಗೇಶ್ವರರು ಐಕ್ಯವಾದ ಸ್ಥಳ.

ಸಿದ್ಧಲಿಂಗೇಶ್ವರರ ಹಿನ್ನೆಲೆ ಎಲ್ಲಿಯೂ ನಿಖರವಾಗಿ ಉಲ್ಲೇಖವಾಗಿಲ್ಲ. ಅವರು ರಚಿಸಿರುವ ಕೃತಿಗಳ ಆಧಾರದ ಮೇಲೆ ಹಾಗೂ ಇತರೆ ವಚನಗಳಾಧಾರದ ಮೇಲೆ ನಿರ್ಧರಿಸಲಾಗಿದೆ ಎಂದೆನ್ನಬಹುದು.

ವಿರೂಪಾಕ್ಷ ಪಂಡಿತಾರಾಧ್ಯರ ಚನ್ನಬಸವ ಪುರಾಣದಿಂದ, ತೋಂಟದ ಸಿದ್ದಲಿಂಗೇಶ್ವರ ಯತಿಗಳಿಗೆ ಸಿದ್ದಲಿಂಗೇಶ್ವರ, ದೊಡ್ಡ ಸಿದ್ದಲಿಂಗೇಶ್ವರ ಎಂಬ ಇಬ್ಬರು ಶಿಷ್ಯರು ಇದ್ದಂತೆ ತಿಳಿಯುತ್ತದೆ. ಕವಿ ಇವರಿಬ್ಬರಲ್ಲಿ ಒಬ್ಬರಾಗಿರಬಹುದು. ಇವರು ವೀರಶೈವ ಕವಿ ಮತ್ತು ಇವರ ಹೆಸರು ಸಿದ್ಧಲಿಂಗೇಶ್ವರ ಎಂದು. ಇವರ ಕಾಲಾವಧಿ 1490–1584 ಮತ್ತು 16ನೇ ಶತಮಾನದ ಅರ್ಧಭಾಗ ಎಂದೆನ್ನಬಹುದು. ಶರಣ ಚಳುವಳಿಯ ದ್ವಿತೀಯ ಕಾಲಘಟ್ಟದ ಪ್ರಮುಖ ವಚನಕಾರರಲ್ಲಿ ಇವರು ಒಬ್ಬರು. ಇವರು 700ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ಅದರಲ್ಲಿ 435 ವಚನಗಳನ್ನು ಕಾಪನಹಳ್ಳಿ ಗವಿಮಠದ ನಿಜಗುರು ಪ್ರಕಾಶನಾಲಯದಿಂದ ಪ್ರಕಟಿಸಲಾಗಿದೆ.

ಸಿದ್ಧಲಿಂಗರು ಹಲವಾರು ಕೃತಿಗಳನ್ನು 'ಮುಕ್ತ್ಯಾಂಗನಾಕಂಠಮಾಲೆ' ಎಂಬ 21 ವಚನಗಳ ಕೃತಿಯನ್ನು ಹಾಗೂ 108 ಸಾಲುಗಳಿಂದ ಕೂಡಿರುವ ಜಂಗಮ ರಗಳೆಯನ್ನು ರಚಿಸಿದ್ದಾರೆ. ಸಿದ್ಧಲಿಂಗರು ಒಬ್ಬ ಪವಾಡ ಪುರುಷ ಹಾಗೂ ಜಪ–ತಪಗೈದು ಆಗಮಿಪ ಭಕ್ತಾದಿಗಳಿಗೆ ಧರ್ಮೋಪದೇಶ ಮಾಡಿ ಸಂಸಾರಿಕ ಜೀವನವನ್ನು ಒಂದು ಸಂಸ್ಕಾರಯುತವಾಗಿಸುವ ಬಗ್ಗೆ ವಚನ ಬೋಧಿಸಿದ ಕೀರ್ತಿ ಜೊತೆಗೆ ಬಸವೋತ್ತರ ಯುಗದಲ್ಲಿ ವಚನ ಸಾಹಿತ್ಯವನ್ನು ಪ್ರಚುರಪಡಿಸಿದ ಮಹತ್ವ ಇವರಿಗೆ ಸಲ್ಲುತ್ತದೆ.

ಸಿದ್ಧಲಿಂಗರು ಎಲ್ಲಿಯೂ ನೆಲೆಸದೆ ಪ್ರತಿ ಹಳ್ಳಿಯ ಜನರನ್ನು ನೋಡುತ್ತ, ಪರೀಕ್ಷಿಸುತ ಕೊನೆಗೆ ಕಾಪನಹಳ್ಳಿಗೆ ಬಂದು ನೆಲೆಸಿದರು. ಅವರ ಕೊನೆಯುಸಿರಿರುವವರೆಗೂ ಇಲ್ಲಿಯೇ ಇದ್ದರು. ಮಠದಿಂದ 8 ಮೀಟರ್ ದೂರದಲ್ಲಿ ಗವಿ ಇದೆ. ಆ ಗವಿ ಬಹಳ ಪ್ರಸಿದ್ಧಿಯಾಗಿದೆ. ಪ್ರತಿದಿನ ನಡೆದು ಬಂದು ಸ್ನಾನ ಮಾಡಿ ಆ ಗವಿಯೊಳಗೆ ತೆರಳುತ್ತಿದ್ದರು. ಆದ್ದರಿಂದ ಮಠವನ್ನು 'ಗವಿಮಠ' ಎಂದು ಕರೆಯಲಾಗುತ್ತದೆ.

ಹಾಗೆ ಶ್ರೀಮದ್ಗಜರಾಜಗಿರಿಯ ಬೆಟ್ಟದ ವೈಭವ ಸ್ವತಂತ್ರ ಸಿದ್ಧಲಿಂಗರ ತಪಸ್ಸಿನ ಸ್ಥಳವಾದ ಕಾರಣ ಈ ಗಿರಿಗೆ ಇನ್ನಷ್ಟು ಮಹತ್ವವನ್ನು ಹೊಂದಿದೆ. ದೂರದಲ್ಲಿ ಕಾಣುವ ಕಾಡಾನೆಯಂತೆ ಮಲಗಿ ನಿದ್ರಾಧ್ಯಾನ ಸ್ಥಿತಿಯಲ್ಲಿರುವಂತೆ ಗಜರಾಜಗಿರಿ ಗೋಚರಿಸುತ್ತದೆ. ಸ್ವತಂತ್ರ ಸಿದ್ಧಲಿಂಗರು ಪ್ರತಿದಿನ ಧ್ಯಾನಕ್ಕೆ ಕೂರುತ್ತಿದ್ದರೆಂಬುದಕ್ಕೆ

ಕುರುಹುಗಳಾಗಿ ಬೆಟ್ಟದ ಬುಡದಲ್ಲಿ ಎರಡು ಗುಹೆಗಳಿವೆ. ಶ್ರೀಮದ್ಗಜರಾಜಗಿರಿ ಸಿದ್ಧಲಿಂಗರ ಪವಾಡಕ್ಕೆ ಸಾಕ್ಷಿ ಎಂಬುದನ್ನು ತೋರಿಸುತ್ತದೆ.

ಸಿದ್ಧಲಿಂಗರು ಆಧ್ಯಾತ್ಮಿಕ ಹಾಗೂ ತಾತ್ವಿಕ ವಿಚಾರಗಳಿಗೆ ಹೆಚ್ಚಾಗಿ ಒತ್ತು ನೀಡಿದ್ದರು. ಇವರು ವೀರಶೈವ ಧಾರ್ಮಿಕ ಪ್ರತಿನಿಧಿಯಂತೆ ಮತ್ತು ಪ್ರತಿಪಾದಕನಂತೆ ಇವರು ತಮ್ಮ ವಚನಗಳ ಮೂಲಕ ಬಿಂಬಿಸಿದ್ದಾರೆ. ತಮ್ಮನ್ನು ತಾವು ಧಾರ್ಮಿಕ ಕ್ಷೇತ್ರದಲ್ಲಿ ಸೃಷ್ಟಿಶೀಲ ಕ್ರಿಯೆಯ ಮೂಲಕ ತೊಡಗಿಸಿಕೊಂಡವರು.

ಗುರುಯಾತ್ರೆಗಳು ಹೆಚ್ಚು ಫಲಪ್ರದವೆಂದು ಗುರು–ಪರಂಪರೆ ಸಾರುತ್ತದೆ. ಈ ನಿಟ್ಟಿನಲ್ಲಿ ಗುರುಯಾತ್ರೆಯಲ್ಲಿ ಗುರುಗಳು ಸ್ಥಳದಿಂದ ಸ್ಥಳಕ್ಕೆ ಪಯಣ ಬೆಳೆಸುವಾಗ ಭಕ್ತರಿಗೆ ಧರ್ಮ ಸಂದೇಶ, ಆತ್ಮ ಸಂತೋಷದ ಬೋಧನೆಯನ್ನು ನೀಡುತ್ತಾರೆ. ಸಿದ್ಧಲಿಂಗರೂ ಕೂಡ ಹಿಂಡನಗಲಿದ ಮದಗಜದಂತೆ ತೋಂಟದ ಸಿದ್ಧಲಿಂಗೇಶ್ವರ ಶಿವಯೋಗಿಗಳ ಗುಂಪಿನಿಂದ ಸಿಡಿದು ಹೊರಬಂದವರು. ವಿಭಿನ್ನ ಚಿಂತನೆಗಳ, ಆಧ್ಯಾತ್ಮ ದೃಷ್ಟಿಕೋನಗಳಿಗೆ ಸ್ವತಂತ್ರವಾಗಿ ಉತ್ತರ ಕಂಡುಕೊಳ್ಳಲು ನಾಡಿನುದ್ದಗಲಕ್ಕೂ ಸಂಚರಿಸಿ ಈ ಗವಿಮಠವನ್ನು ಕಾರ್ಯಕ್ಷೇತ್ರವನ್ನಾಗಿಸಿ ನೆಲೆಸಿದರು. ನಿಜೈಕ್ಯರಾದರು ಮಹಾನುಭಾವಿಯಾದ ಇವರು ಸದ್ಭಕ್ತರನ್ನು ಉದ್ಧರಿಸಬೇಕೆಂಬ ಅಭಿಲಾಷೆಯಿಂದ ಹಿಂಡನಗಲಿದ ಮದಗಜದಂತೆ 700 ಜನ ವಿರಹಿತರನ್ನು ಪರಿತ್ಯಜಿಸಿ ಲೋಕಸಂಚಾರವನ್ನಾರಂಭಿಸಿದರು.

ಈ ಕ್ಷೇತ್ರದ ದರ್ಶನ ಅಮೃತ ಸಿಂಚನ. ಒತ್ತಡದ ಮನಸ್ಸಿಗೆ ಸಾಂತ್ವಾನ, ಚಿತ್ತ ಚೈತನ್ಯದ ಹೂಬನ. ಇವರದು 'ಆಧ್ಯಾತ್ಮದ ಚಿಂತನೆ'. ಇವರ ವಚನಗಳಲ್ಲಿ ಗುರು–ಶಿಷ್ಯ ಸಂಬಂಧ, ಭಾವ–ನಿರ್ಭಾವ, ಶಿವ–ಶರಣ, ಪೂಜೆ–ಯೋಗ ಇನ್ನು ಮುಂತಾದ ವಿಚಾರಗಳಿಂದ ತುಂಬಿರುವ ವಚನಗಳಾಗಿವೆ.

ಸಿದ್ಧಲಿಂಗೇಶ್ವರ ನಮ್ಮ ಮನೆ ದೇವರು. ಮೊದಲು ದೇವ ಸನ್ನಿಧಿಯ ಮೇಲೆ ಇದ್ದ ಅಭಿಪ್ರಾಯಕ್ಕೂ, ಸಿದ್ದಲಿಂಗೇಶ್ವರರ ವಿಚಾರಗಳನ್ನರಿತ ಮೇಲೆ ಇರುವ, ಬಂದಿರುವ ನನ್ನ ಅಭಿಪ್ರಾಯಗಳಿಗೂ ಬಹಳ ವ್ಯತ್ಯಾಸವಿದೆ. ಈಗಿನ ಕಾಲಘಟ್ಟಕ್ಕೂ ಅನ್ವಯವಾಗುವಂತಿವೆ ಅವರ ವಚನಗಳು. ವಿಭಿನ್ನವಾದ ಆಲೋಚನೆ ಅವರದಾಗಿತ್ತು. ಒಬ್ಬ ಮನುಷ್ಯ ಹೇಗಿರಬೇಕು ಎಂಬ ಅವರ ಅಭಿಪ್ರಾಯಗಳೇ ವೈಶಿಷ್ಟ್ಯವಾಗಿವೆ. ಓದಿದ ನಮಗೆ ಅರೆ! ಹೌದಲ್ವ ಎಂದೆನಿಸುತ್ತದೆ.

***ನನಗೆ ತುಂಬ ಅರ್ಥವನ್ನು ಹೇಳಿದಂತ ವಚನ***<br>
***ವಾಹನವೇರುವಾಗ ದಾರವನಿಡಿದು ನಡೆಸಲು***<br>
***ವಾಹಕನ ಇಚ್ಛೆಯಲಿ ನಡೆಯುವುದು ವಾಹನ,***<br>
***ಹಾಗೆ ದೇಹಧರ್ಮದ ಇಚ್ಛೆಯಲಿ ಹೋಗದೆ***

*ತನ್ನ ವಶಕ್ಕೆ ತಂದು ನಡೆಸಬೇಕು ಭಕ್ತನಾದೊಡೆ*
*ಅಂತಲ್ಲದೆ ದೇಹಧರ್ಮ ತನ್ನಿಚ್ಚೆಗೆ ಬಾರದು*
*ಎಂಬುವ ದೇಹಭಾರವ ಹೊತ್ತು ತೊಳಲುವ ಭೂಭಾರಕನಲ್ಲದೆ॥*

ವಾಹನವನ್ನು ಏರುವಾಗ ಅದರ ಸೂತ್ರ ನಾವು ಹಿಡಿದುಕೊಳ್ಳಬೇಕು. ಆ ಸೂತ್ರವನ್ನು ಹಿಡಿದು ವಾಹನವನ್ನೇರಿದಾಗ ವಾಹಕನ ಇಚ್ಚೆಯಂತೆ ವಾಹನ ನಡೆಯುತ್ತದೆ. ಹಾಗೆ, ದೇಹ ಧರ್ಮದ ಇಚ್ಚೆಯಂತೆ ಹೋಗದಲ್ಲದೆ, ಆ ದೇಹ ಧರ್ಮವನ್ನು ತನ್ನ ಹಿಡಿತಕ್ಕೆ ತಂದುಕೊಳ್ಳುವಂತಹ ಒಂದು ಸೂತ್ರವನ್ನು ಅವು ಕಂಡುಕೊಳ್ಳಬೇಕು. ಅದು ಬಿಟ್ಟು ದೇಹ ನನ್ನ ಇಚ್ಚೆಗೆ ಬರ್‍ತಾ ಇಲ್ಲ ನನ್ನನ್ನೇ ತನ್ನೆಡೆಗೆ ಎಳೆದುಕೊಂಡು ಹೋಗ್ತಾ ಇದೆ ದೇಹದ ಇಚ್ಚೆಯನ್ನೆ ಪೂರೈಸುವುದೇ ನನ್ನ ಕರ್ಮ ಆಗೋಗಿದೆ ಅಂತ ಅಂದುಕೊಳ್ಳಬಾರದು. ಸಅದು ಆಗೋವುದಿಲ್ಲ ಅಂತ ದೇಹಭಾರವ ಹೊತ್ತು ತೊಳಲುವ ಭೂಭಾರಕ ಅಷ್ಟೆ ಅವನು ಭೂಮಿಗೆ ಭಾರ.ತನಗೆ ದೇಹ ಭಾರ, ಎಂದು ಹೇಳುತ್ತಾರೆ.

ತಮ್ಮ ವಚನಗಳ ಮೂಲಕ ಜನರ ಹಿತದೃಷ್ಠಿಗೆ ತಮ್ಮ ತತ್ವಗಳನ್ನು ಅರ್ಥೈಸಿದರು, ಭೋಧಿಸಿದರು. ಧಾರ್ಮಿಕತೆಯನ್ನು ಬೆಳೆಸಿದರು. ಇಷ್ಟೆಲ್ಲಾ ಪರಂಪರೆ ಮತ್ತು ಧಾರ್ಮಿಕ ತತ್ವವನ್ನೊಳಗೊಂಡ ಸಿದ್ದಲಿಂಗೇಶ್ವರರ ಗದ್ದುಗೆ ದೇವರ ಜಾತ್ರೆಯು ಭಕ್ತರ ಒಕ್ಕೋರಲಿನಿಂದ ಫೆಬ್ರವರಿ ತಿಂಗಳ ಮಾಘ ಮಾಸದಲ್ಲಿ ಆರಂಭವಾಗುತ್ತದೆ. ನದಿ, ಗಿರಿ, ಗುಹೆ ವನಗಳಿಂದ ಕೂಡಿದ ಗವಿಮಠ ಒಂದು ಪುಣ್ಯಕ್ಷೇತ್ರವಾಗಿ ನಮ್ಮ ತಾಲ್ಲೂಕಿನ ಕೀರ್ತಿಯನ್ನು ಮೆರೆದಿದೆ ಎಂದೆನ್ನಬಹುದು.

ಸಿದ್ದಲಿಂಗೇಶ್ವರರು ಯೋಗಿಯಾಗಿ ತಪಸ್ವಿಯಾಗಿ ಪವಾಡ ಪುರುಷರಾಗಿ ಭಕ್ತಿಯ ಪರಾಕಾಷ್ಠೆಯನ್ನೇರಿ, ಶಿಸ್ತು, ಪ್ರಾಮಾಣಿಕತೆ, ನ್ಯಾಯಬದ್ಧತೆ, ಧರ್ಮ ಸಚ್ಚಾರಿತ್ರ್ಯದಂತಹ ವಿಚಾರಗಳನ್ನು ನೀಡಿದ್ದಾರೆ.

ಇಂತಹ ಯೋಗಿಗಳ ಬಗ್ಗೆ ಅವರ ಜೀವನ ದರ್ಶನವನ್ನು ನಿಮ್ಮ ಮುಂದೆ ಇಡುವ ಅವಕಾಶವನ್ನು ಮಾಡಿಕೊಟ್ಟಂತಹ ಮಾರೇನಹಳ್ಳಿ ಲೋಕೇಶ್ ಅವರಿಗೆ ಧನ್ಯವಾದಗಳು.

**ಹೆಚ್.ಎನ್.ಸಿಂಧು.**
ದ್ವಿತೀಯ ಬಿ.ಇಡಿ.
ನಾಟನಹಳ್ಳಿ, ಬೂಕನಕೆರೆ ಹೋ,
ಕೃಷ್ಣರಾಜಪೇಟೆ ತಾ.
ಮೊ : 7899510214

# ಕೆ.ಎಸ್. ನರಸಿಂಹಸ್ವಾಮಿಯವರ ಆಯ್ದ ಕವನಗಳು

ಈ ಹೆಸರು ಯಾರಿಗೆ ಪರಿಚಯವಿಲ್ಲ ಹೇಳಿ, ಹೆಸರು ಕೇಳಿದ ತಕ್ಷಣ ನೆನಪಿಗೆ ಬರುವುದು, ಅವರ 'ಮೈಸೂರು ಮಲ್ಲಿಗೆ' ಕವನ ಸಂಕಲನ ಅವರ ಕಾವ್ಯ ಪ್ರೇಮದ ಬಗ್ಗೆ ಅವರ ಮಾತಿನ ಮೂಲಕವೇ ತಿಳಿದುಕೊಳ್ಳಬಹುದು ;

"ಕಬ್ಬಿಗನೂರಿಗೆ ದಾರಿಗಳಿದ್ದರೆ, ಅದು ಕನಸೇ ಇರಬೇಕು, ಅಲ್ಲಿಯ ಒಡೆತನ ದೊರೆಯುವಂತಿದ್ದರೆ, ಅದು ನನಗೆ ಸಿಗಬೇಕು."

ಇದು ಕೆ.ಎಸ್. ನರಸಿಂಹ ಸ್ವಾಮಿಗಳಿರುವಂತಹ ಆಗಾಧವಾದ ಕಾವ್ಯ ಪ್ರೇಮವನ್ನು ಸೂಚಿಸುತ್ತದೆ. ಜೊತೆಗೆ ಅವರು ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಕೃಷಿ ಮಾಡಿದ್ದು 'ಕಾವ್ಯ' ಕ್ಷೇತ್ರದಲ್ಲಿ ಇವರು ಎಲ್ಲರಿಗೂ ಇಷ್ಟವಾಗಲು ಕಾರಣ, ಇವರು ಬದುಕಿಗೆ ಹತ್ತಿರವಿರುವ ದಾಂಪತ್ಯ, ತಾರುಣ್ಯ, ಪ್ರಕೃತಿ, ಹಾಗೂ ದೇಶಪ್ರೇಮದ ಬಗ್ಗೆ ಹೆಚ್ಚು ಒತ್ತು ಕೊಟ್ಟು ಬರೆದಿದ್ದಾರೆ.

**ಕಿರು ಪರಿಚಯ:–**

ನವೋದಯ ಅಥವಾ ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಪ್ರೇಮಕವಿ' ಎಂದೇ ಪ್ರಸಿದ್ಧಿ ಪಡೆದಿರುವ 'ಕಿಕ್ಕೇರಿ ಸುಬ್ಬರಾಯ ನರಸಿಂಹ ಸ್ವಾಮಿ' ಯವರು ಒಬ್ಬ ಶ್ರೇಷ್ಠ ಅನುವಾದಕ, ಕವಿ ಹಾಗೂ ವಿಮರ್ಶಕರಾಗಿದ್ದರು. 'ಮಲ್ಲಿಗೆಯ ಕವಿ' ಅಥವಾ 'ಒಲವಿನ ಕವಿ' ಎಂದೇ ಚಿರಪರಿಚಿತವಾಗಿರುವ ಇವರು ಹುಟ್ಟಿದ್ದು, ಜನವರಿ 26, 1915 (26–1–1915), ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೋಕಿನ 'ಕಿಕ್ಕೇರಿ' ಎಂಬ ಗ್ರಾಮದಲ್ಲಿ, ನಮ್ಮ ಸಕ್ಕರೆ ನಾಡಿನ ನಲ್ಮೆಯ ಕವಿ ಎಂಬುದೇ ನಮಗೆ ಹೆಮ್ಮೆಯ ಸಂಗತಿ.

ಇವರ ತಂದೆ 'ಸುಬ್ಬರಾಯರು', ತಾಯಿ 'ನಾಗಮ್ಮ' ಇವರ ವಿದ್ಯಾಭ್ಯಾಸವು ಮೈಸೂರಿನಲ್ಲಿಯೇ ಜರುಗಿದ್ದು, ತಂದೆಯ ಇಚ್ಛೆಯಂತೆ ಎಂಜನಿಯರಿಂಗ್ ಶಿಕ್ಷಣ ಪಡೆಯಲು ಮೈಸೂರಿನ ಇಂಟರ್ ಮೀಡಿಯೇಟ್ ಕಾಲೇಜಿನ ಪ್ರಿ–ಎಂಜಿನಿಯರಿಂಗ್ ವಿಭಾಗಕ್ಕೆ ಸೇರಿಕೊಂಡ ಇವರು, ಅಲ್ಲಿಯೇ ಪದವಿಪೂರ್ವ ಶಿಕ್ಷಣ ಮುಗಿಸಿ, ನಂತರ ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜಿಗೆ ಪ್ರವೇಶ ದೊರಕಿದರು ಕೂಡ, ಆ ಕ್ಷೇತ್ರದಲ್ಲಿ ಆಸಕ್ತಿ ಇಲ್ಲದ ಕಾರಣ, ಬಿ.ಎ ಮಾಡಲು ಇಚ್ಛಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ 1934ರಲ್ಲಿ ಸೇರಿಕೊಂಡರು.

ಅಲ್ಲಿಯೇ ಇವರ ಕಾವ್ಯ ಪ್ರಪಂಚಕ್ಕೆ ಒಂದು ಜಾಡು ಸಿಕ್ಕಿತು ಎಂದರೆ ತಪ್ಪಾಗಲಾರದು, ಕಾರಣ ಅಲ್ಲಿನ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದ ಬಿ.ಎಂ. ಶ್ರೀಕಂಠಯ್ಯನವರು, ಇವರ ಕಾವ್ಯ ರಚನೆಗೆ ಸ್ಫೂರ್ತಿದಾಯಕರಾದರು.

1936ರಲ್ಲಿ 'ವೆಂಕಮ್ಮ' ನವರನ್ನು ಮದುವೆಯಾಗಿದ್ದು ಇನ್ನೊಂದು ಜಾಡು ಎನ್ನಬಹುದು. 'ಸತಿ–ಪತಿಗಳೊಂದಾದ ಭಕುತಿ ಶಿವನಿಗೊಪ್ಪುದು' ಎಂಬ 'ಸಂಚಿ ಹೊನ್ನಮ್ಮ' ಹಿರಿಯರ ಮಾತಿನಂತೆ, ಕೆ.ಎಸ್ ನರಸಿಂಹಸ್ವಾಮಿಯವರ ಬದುಕು ಹಾಗೂ ಕಾವ್ಯಕ್ಕೆ ಸ್ಫೂರ್ತಿ ಚಿಲುಮೆ ಎಂದರೆ, ಅದು ಅವರ ಹೆಂಡತಿ 'ವೆಂಕಮ್ಮ' ನವರು ಎಂದು ಹೇಳಬಹುದು. ಹೀಗೆ ತಮ್ಮ ಜೀವನದುದ್ದಕ್ಕೂ ಕವಿತೆಗಳ ರಸದೌತಣವನ್ನು ಉಣಬಡಿಸಿದ ಕೆ.ಎಸ್. ನರಸಿಂಹಸ್ವಾಮಿಯವರು, ಡಿಸೆಂಬರ್ 28–2003(28–12–2003) ರಲ್ಲಿ ತಮ್ಮ ಜೀವನದ ಪ್ರಯಾಣವನ್ನು ಮುಗಿಸಿದರು.

## ಕೆ.ಎಸ್.ನ. ಅವರ 'ನವಪಲ್ಲವ' (ಕವನ ಸಂಕಲನ)

ಕೆ.ಎಸ್. ನರಸಿಂಹ ಸ್ವಾಮಿಯವರು ತಮ್ಮ ಕವನಗಳನ್ನು ಸುಮಾರು 16–18 ಕವನ ಸಂಕಲನಗಳ ಮೂಲಕ ಪ್ರಕಟಿಸಿದ್ದಾರೆ. ಅದರಲ್ಲಿ 'ನವಪಲ್ಲವ' ಎಂಬುದು ಅವರ 9ನೇ ಕವನ ಸಂಕಲನವಾಗಿದ್ದು, ಇದು 1989 ರಲ್ಲಿ ಪ್ರಕಟವಾಯಿತು, ಹಾಗೂ ಇದರಲ್ಲಿ ಸುಮಾರು 27 ಕವಿತೆಗಳಿವೆ.

ಇವರು ತಮ್ಮ ಕವನಗಳನ್ನು 3 ಕಾಲಘಟ್ಟಗಳಾಗಿ ವಿಂಗಡಿಸಿದ್ದಾರೆ, ಹಾಗೂ ಬದುಕಿನ ನೈಜ ಚಿತ್ರಣಕ್ಕೆ ಅನುಗುಣವಾಗಿ ಬರೆದಿದ್ದಾರೆ. ಅವುಗಳೆಂದರೆ,

1) 1942–1958 ಇದು ಮೊದಲನೆ ಕಾಲಘಟ್ಟವಾಗಿದ್ದು, ಇದರಲ್ಲಿ ದಾಂಪತ್ಯ, ಪ್ರಕೃತಿ, ಚೆಲುವು ಹಾಗೂ ತರುಣದ ಬಗ್ಗೆ ಮಾತನಾಡಿದ್ದಾರೆ, ಇದು ಮೈಸೂರು ಮಲ್ಲಿಗೆ, ಐರಾವತ, ದೀಪದ ಮಲ್ಲಿ, ಉಂಗುರ, ಇರುವಂತಿಗೆ ಕವನ ಸಂಕಲನಗಳನ್ನು ಒಳಗೊಂಡಿದೆ.

2) 1958–1983, 2ನೇ ಕಾಲಘಟ್ಟವಾಗಿದ್ದು, ಇದು, ಹುಟ್ಟು–ಸಾವು, ಕಾಲ ದೇವರು, ಇತ್ಯಾದಿಗಳಾದ ಅಮೂರ್ತ ವಿಷಯಗಳ ಬಗ್ಗೆ ತಿಳಿಸಿದೆ. ಇದು ಶಿಲಾಲತೆ, ಮನೆಯಿಂದ ಮನೆಗೆ ಮತ್ತು ತೆರೆದ ಬಾಗಿಲು ಎಂಬ ಕವನ ಸಂಕಲನಗಳನ್ನು ಒಳಗೊಂಡಿದೆ.

3) 1983–2003 ಇದು 3ನೇ ಕಾಲಘಟ್ಟವಾಗಿದ್ದು ಇದರಲ್ಲಿ, ಕವಿ ಮಾನವ ಸಂಬಂಧಗಳನ್ನು ಕುರಿತು ಪ್ರಬುದ್ಧವಾಗಿ ಚಿಂತಿಸಿರುವುದು ಕಂಡುಬರುತ್ತದೆ. ಇದರಲ್ಲಿ 'ನವಪಲ್ಲವ', 'ದುಂಡುಮಲ್ಲಿಗೆ', ನವಿಲದನಿ, 'ಸಂಜೆಹಾಡು', 'ಕೈ ಮರದ ನೆರಳಲ್ಲಿ', 'ಎದೆ ತುಂಬ ನಕ್ಷತ್ರ' 'ಮೌನದಲಿ ಮಾತ ಹುಡುಕುತ್ತಾ, 'ದೀಪದ ಸಾಲಿನ ನಡುವೆ' ಕವನ ಸಂಕಲನಗಳನ್ನು ಕಾಣಬಹುದು.

## ನವಪಲ್ಲವ (ಕವನ ಸಂಕಲನಗಳು)

'ನವಪಲ್ಲವ' ಎಂಬುದು ಹೆಸರೇ ಹೇಳುವಂತೆ 'ಹೊಸತನವನ್ನು' ಪ್ರತಿಬಿಂಬಿಸುವ ಚೈತ್ರದ ಚಿಗುರು, ಹೊಸವರುಷ ಹಾಗೂ ಪ್ರಕೃತಿ ಸೊಬಗಿನ ಬಗ್ಗೆ ತಿಳಿಸಿಕೊಡುತ್ತದೆ, ಜೊತೆಗೆ ಕೆ.ಎಸ್. ನರಸಿಂಹಸ್ವಾಮಿಯವರ ದೇಶಪ್ರೇಮ ಹಾಗೂ ನಾಡಪ್ರೇಮವನ್ನು ಪ್ರತಿಬಿಂಬಿಸುವ ಹಬ್ಬಗಳ ಆಚರಣೆಯ ಬಗ್ಗೆ ತಿಳಿಸಿಕೊಡುತ್ತದೆ. ಇದರಲ್ಲಿ ನನಗೆ ಇಷ್ಟವಾದ ಕವನವೆಂದರೆ 'ನವಪಲ್ಲವ' ಇದರಲ್ಲಿ ಅವರು ಚೈತ್ರಮಾಸದ ವಸಂತ ಚಿಗುರು, ಮೊಗ್ಗು ಕಾಯಿಗಳನ್ನು ಕುರಿತು ಮಾತನಾಡುತ್ತಾರೆ ;

***"ಚಿಗುರಿತು ಮಾವು***
***ಚಿಗುರಿತು ಬೇವು,***
***ಚಿಗುರಿತು ತಾನೂ ಜಾಲಿ,***
***ಚಿಗುರಿಗೆ ಹಿಗ್ಗದ ಬನವನು ಬಳಸಿತು,***
***ಚಿಗುರದ ತಂತಿಯ ಬೇಲಿ"***

ಈ ಸಂದರ್ಭದಲ್ಲಿ ನನಗೆ ನನ್ನ ಕವನ ನೆನಪಿಗೆ ಬಂತು, ಅದೇನೆಂದರೆ

***"ಬಂತು ಬಂತು, ಬಂದೇ ಬಿಟ್ಟಿತು,***
***ಚೈತ್ರ ಮಾಸದ ವಸಂತ ಋತು,***
***ಎತ್ತ ನೊಡಿದರೂ ಹಸಿರೇ ಹಸಿರು***
***ಹೊಂಗೆ, ಮಾವು–ಬೇವಿನ ಚಿಗುರು***
***ಮೊಗ್ಗೆಲ್ಲವೂ ಹೂವಾಗಿ ಅರಳಿದ ಗಿಡಗಳು,***
***ಚಿಗುರೊಡೆದ ಮರಗಳು,***

*ಮಾರುದ್ದ ಇಳಿಬಿಟ್ಟಿರುವ ಹೂ ಗೊಂಚಲು,*

*ಮಾಗಿ ಫಲವತ್ತಾಗಿ ಬಾಗಿರುವ ಹಣ್ಣುಗಳು,*

*ಸಿಹಿಯಾದ ಜೇನು,*

*ಕಹಿಯಾದ ಬೇವು,*

*ಎಲ್ಲೆಲ್ಲೂ ತಳಿರು ತೋರಣ*

*ಎಲ್ಲೆಲ್ಲೂ ತಳಿರು ತೋರಣ*

ಇನ್ನು ಮುಂದುವರೆದು, ನರಸಿಂಹಸ್ವಾಮಿಯವರು ಆ ಚೈತ್ರದ ಚಿಗುರು, ಮುಪ್ಪಾಗುವುದಲ್ಲ ಎಂಬುದನ್ನು ಬೇಸರಿತೆಯಲ್ಲಿ ವ್ಯಕ್ತಪಡಿಸುತ್ತಾರೆ.

*"ನಾನೊಮ್ಮೆ ತಳಿರಾಗಿ ಚೈತ್ರವನು ಕರೆವೆ,*

*ತಳಿರು ಹಸಿರೆಲೆಯಾಗಿ ನಲ್ಮೆಯ ಮರೆದೆ,*

*ನನ್ನ ಎಡಬಲದಲ್ಲಿ ಅರಳಿತ್ತು ಮೊಗ್ಗು,*

*ಹೂ ಮುಡಿದ ಹೆರಳಲ್ಲಿ ಕಾಣಿಸಿತು ಹಿಗ್ಗು,*

*ಕೊಂಬೆಯುದ್ದಕ್ಕೂ ಪೀಚು ತೂಗುವುದ ಕಂಡೆ,*

*ಪೀಚು ಕಾಯಾಗುವುದು ಇನ್ನೆಂದಿಗೆಂದೆ,*

*ಕಾಯಿ ಹಣ್ಣಾಗುವುದ ಕಾದಿದ್ದೆ ನಾನು,*

*ನನ್ನ ಅಳಲಿಗೆ ಯಾರೊ ಕೆಡವಿದರು ಅದನು,*

*ತಿಂಗಳೀಚೆಗೇ ನನಗೆ ಮೈಯೆಲ್ಲ ಹಳದಿ,*

*ಉಳಿದಿರುವೆ ನಿನ್ನಲ್ಲೆ ಬಿಸಿಲಲ್ಲಿ ಒಣಗಿ,*

*ನಾಳೆ ಬೀಸುವ ಗಾಳಿ ಜೋರೆಂದು ತೀಡಿ,*

*ನನ್ನ ಮುಗಿಲಿಗೆ ನಾನೆ ಅಳಬೇಕೆ, ಹೇಳಿ."*

ಹೀಗೆ ನರಸಿಂಹಸ್ವಾಮಿಗಳು ಚೈತ್ರದ ಚಿಗುರನ್ನು ಸಂಭ್ರಮಿಸುವುದರ ಜೊತೆಗೆ, ಅದನ್ನು ಮಾನವನ ಜೀವನದ ಹುಟ್ಟು, ಬಾಲ್ಯ, ಯೌವ್ವನ, ಹಾಗೂ ಮುಪ್ಪು, ಕೊನೆಗೆ ಬರುವ ಸಾವಿಗೆ ಸಂಬಂಧಿಕರಿಸಿ ಬರೆಯುತ್ತಾರೆ.

*"ಬಾಳಿ ಬದುಕಿ ನೆರಳನೆರೆದ ಹಸಿರೆಲೆಗಳ ಜೀವ,*

*ಸಾವಿನಲ್ಲಿ ನೆನೆವುದೀಗ ನನ್ನ ಮೊದಲ ಚೆಲುವ,*

*ಬನಬನದಲ್ಲಿ ಚೈತ್ರದಲ್ಲಿ ಮೆರೆದ ತಳಿರ ಭಾವ,*

*ಹಣ್ಣೆಲೆಗಳ ಪಾತ್ರದಲ್ಲಿ ಹರಡುತಿವುದು ನೋವ*

*ಬೆರೆಯಿತಾ ಎಲೆ ಮಣ್ಣಿನಲಿ, ಮುಗಿದು ತನ್ನ ಕಾಲ*
*ಎಲೆಗೆ ಒಂದು, ಹೂವಿಗೊಂದು, ಹಣ್ಣಿಗೊಂದು ಕಾಲ,*
*ಮಾಂದಳಿರಿನ ತೊಟ್ಟಿಲಿಂದ, ಕೇಳಿ ಬಂತು ಹಾಡು,*
*ಅನುಭವಗಳ ಆಳದಿಂದ ಮತ್ತೆ ಅದೇ ಹಾಡು.*
*ತಳಿರಿಗೊಂದು ಕಾಲವಿಹುದು ನಲಿವಿಗೊಂದು ಕಾಲ,*
*ಅದರ ಹಿಂದೆ ತಪ್ಪದಿಹುದು ನೋವಿಗೊಂದು ಕಾಲ*
*ಹೆಜ್ಜೆ ಸರಿದ ಹಾದಿಯಲ್ಲಿ ತಳಿರ ಚೆಲುವ ನೋಡ,*
*ತಳಿರ  ಹುಟ್ಟುಹಬ್ಬದಲ್ಲಿ ಅಳಲ ನೀ ಹಾಡಬೇಡ*

ನೋಡಿ ನರಸಿಂಹಸ್ವಾಮಿಗಳು, ತಿಳಿಸಿರುವ ಹಾಗೆ, ಚಿಗುರು ಹಣ್ಣಾಗಿ ಸಂಭ್ರಮಿಸುವ ಹೊತ್ತಿಗೆ ಹೇಗೆ ನೆಲದ ಪಾಲಾಗುವುದೊ ಹಾಗೆ ಮನುಷ್ಯ ಕೂಡ ಒಂದಲ್ಲ ಒಂದು ದಿನ ಮಣ್ಣಿಗೆ ಸೇರಬೇಕು ಎಂಬ ಆಶಯದಲ್ಲಿ ಹೇಳಿದ್ದಾರೆ ಇದನ್ನು ನೋಡಿದರೆ, ನನಗೆ ಪುರಂದರದಾಸರ ವಾಣಿಯಾದ "ಮಣ್ಣಿಂದ ಕಾಯ ಮಣ್ಣಿಗೆ" ಅಂದರೆ ಈ ದೇಹ ಹಾಗೂ ಹಣ್ಣು ಎರಡೂ ಮಣ್ಣಿಗೆ ಎಂಬುದು ನನ್ನ ತಿಳುವಳಿಕೆ. ಇದು ನಮಗೆ ಚಿಗುರು ಹಾಗೂ ಹುಟ್ಟನ್ನು ಹೇಗೆ ಸಂಭ್ರಮಿಸುತ್ತೇವೋ ಹಾಗೇ ಸಾವನ್ನು ಕೂಡ ಸಂಭ್ರಮಿಸಬೇಕು. ಬದಲಾಗಿ ಅಳಬಾರದು ಎಂಬುದು ಅವರ ಮಾತಿನ ನನ್ನ ಅಭಿಪ್ರಾಯ.

In English Literature also 'Emily Dicksen' calls Death is her close friend. She celebrates death. In her opinion Death is the only one thing to get everything, but god is nothing to her.

ನರಸಿಂಹಸ್ವಾಮಿಯವರ ಸ್ಪೂರ್ತಿ ಎಂದರೆ ಅವರ ಹೆಂಡತಿ ಅದನ್ನು ಅವರ "ನಿನ್ನ ನೆನೆವೆ"ಎಂಬ ಕವನದಲ್ಲಿ ತಿಳಿಸಿದ್ದಾರೆ,

*"ಬೀರಿದ ಹೂವ ಮೇಲೆ ಗಾಳಿ*
*ಸುಳಿದು ಬರುವ ಸಮಯದಲ್ಲಿ*
*ತೆರೆಯ ಹಿಂದೆ ತೆರೆಗಳೊಡಿ*
*ಕೆರೆಯ ಕವಿತೆಯಾಗುವಲ್ಲಿ*
*ನಿನ್ನ ನೆನೆವೆ, ನಿನ್ನ ನೆನೆವೆ*
*ನನ್ನೊಲವಿನ ಸ್ಫೂರ್ತಿ*

ಯಾರಿಗೆ ಆಗಲಿ, ಬದುಕಿನಲ್ಲಿ ಉತ್ತಮವಾದ ಕಾಲಘಟ್ಟ ಎಂದರೆ 'ಮದುವೆ' ಅದು ನರಸಿಂಹ ಸ್ವಾಮಿಯವರ ಬದುಕಿನಲ್ಲಿ ಕೂಡ ಮರೆಯಲಾಗದ ಮಧುರವಾದ ಸಂಭ್ರಮ, ಅದಕ್ಕಿಂತ ಮೊದಲು ಹೆಣ್ಣನ್ನು ನೋಡುವ ಒಂದು ಶಾಸ್ತ್ರವಿದೆ. ಅದನ್ನು ಅವರು ಸೊಗಸಾಗಿ ತಮ್ಮ " ಆ ದಿನದ ನೆನಪು" ಎಂಬ ಕವನದಲ್ಲಿ ತಿಳಿಸಿಕೊಡುತ್ತಾರೆ.

*"ಮೂವತ್ತು ವರುಷ ಕಳೆದಿರಲು,*
*ನೀ ಬಂದು ನನ್ನ ಮನೆಗೆ,*
*ನಾ ನಿನ್ನ ಕಂಡ ಆ ಮೊದಲ ದಿನದ*
*ಸವಿನೆನಪು ಬಂತು ನನಗೆ,*
*ಮೂವತ್ತು ವರುಷ ಸರಿದಿರಲು ಹಿಂದೆ*

ಬಂದಿತ್ತು ಪತ್ರ ನನಗೆ,

*ಮಳೆ ಬಿದ್ದು ಸಂಜೆ ಹೊಂಬೆಳಕಿನಲ್ಲಿ,*
*ನಾ ಬಂದೆ ನಿಮ್ಮ ಮನೆಗೆ*
*ಮೂವತ್ತು, ವರುಷ ಮುಗಿದಿರಲು ಇಂದು,*
*ಆ ಬಾಳ ಹಾದಿಯಲ್ಲಿ,*
*ಆ ದಿನದ ನೆನಪು ಹಾಡಾಗಿ ಬಂತು*
*ನೀನಿತ್ತ ಒಲವಿನಲ್ಲಿ"*

ನೋಡಿ ಕೇವಲ 30 ವರುಷಗಳು ಮಾತ್ರವಲ್ಲ ಅವರು ಬದುಕಿದ್ದ 88 ವರುಷಗಳು ಕೂಡ ತಮ್ಮ ಸ್ಫೂರ್ತಿ ಚಿಲುಮೆಯಾದ ವೆಂಕಮ್ಮನವರನ್ನು ನೆನೆಯದ ದಿನವೇ ಇಲ್ಲ. ಕಾರಣ ಅವರಿಬ್ಬರ ನಡುವಿನ ಆ ಒಲವಿನ ರಸಪಾಕದ ಘಮ ಯಾವಾಗಲೂ ಹೊಸತನದಿಂದ ಕೂಡಿತ್ತು ಎಂಬುದು ನನ್ನ ಅಭಿಪ್ರಾಯ.

ನರಸಿಂಹ ಸ್ವಾಮಿಗಳ ಹಬ್ಬಗಳನ್ನು ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ 'ಹೊಸವರುಷ' ಕವನ ಮಾಲಿಕೆಯಲ್ಲಿ ಹಿಂದುಗಳಿಗೆ ಮೊದಲ ದಿನವಾದ ಯುಗಾದಿ ಹಬ್ಬದ ಆಗಮಿಸುವಿಕೆಯನ್ನು ಅರ್ಥಗರ್ಭಿತವಾಗಿ ತಿಳಿಸಿಕೊಡುತ್ತಾರೆ.

*ನೋವಿಗೆ ನಲಿವನು ಲೇಪಿಸಿದಂತೆ*
*ಮೌನದೊಳಿಂಡನು ರೂಪಿಸಿದಂತೆ*
*ತಳಿರಲಿ ಕಿರಣವ ಭಾವಿಸಿದಂತೆ*
*ಹಸಿರಲಿ ಕೆಂಪಗೆ ಕಿರುನಗೆಯಂತೆ,*
*ಬಂದಿದೆ, ಬಂದಿದೆ ಹೊಸ ವರುಷ*
*ತಂದಿದೆ, ಲೋಕಕೆ ಬಲು ಹರುಷ.*

***ವರುಷ ವರುಷವೂ ಮತ್ತೆ ಯುಗಾದಿ***

***ಕಾಲವಿದಂತು ಅನಂತ ಅನಾದಿ,***

***ತೋರಣ ಕಟ್ಟಿದೆ ಬದುಕಿನ ಬೀದಿ,***

***ಏಳು-ಬೀಳುಗಳ ಬಳಸಿನ ಹಾದಿ.***

***ಬಂದಿದೆ, ಬಂದಿದೆ ಹೊಸ ವರುಷ***

***ತಂದಿದೆ ಲೋಕಕೆ ಬಲು ವರುಷ***

ಹೀಗೆ ಹೊಸ ವರುಷ ಎಂಬುದು ಒಂದು ದಿನದ ಸಂಭ್ರಮವಲ್ಲ. ಇದು ಪ್ರತಿ ವರುಷದ ಆದಿ-ಹಾಗೂ ಅಂತ್ಯ ಎಂಬುದರ ಬಗ್ಗೆ ತಿಳಿಸಿಕೊಡುತ್ತಾರೆ, ಇದನ್ನು ನಾನು ಬರೆದ ಯುಗಾದಿ ಎಂಬ ಕವಿತೆಯಲ್ಲಿಯೂ ಸಹ ಕಾಣಬಹುದು.

ಹೀಗೆ ನನಗೆ ನವಪಲ್ಲವದ 27 ಕವನಗಳು ಇಷ್ಟವಾದರೂ ಕೂಡ ಸಮಯದ ಅಭಾವವಿರುವುದರಿಂದ ಇಷ್ಟನ್ನು ಹೇಳಲು ಮಾತ್ರ ಸಾಧ್ಯವಾಯಿತು, ಕೊನೆಯದಾಗಿ ಅವರ 'ಆಸೆ' ಕವನದಲ್ಲಿ ತಿಳಿಸಿರುವ ಹಾಗೆ, ಅವರು ಮನುಷ್ಯ ಕುಲದ ಮನಸ್ಥಿತಿಯ ಬಗ್ಗೆ ಮಾತನಾಡುತ್ತಾರೆ, ಎಲ್ಲರು ಒಟ್ಟಿಗೆ ಇರಬೇಕು, ದ್ವೇಷ, ಅಸೂಯೆ ಬಿಟ್ಟು. ಪಂಪನ ವಾಣಿಯಂತೆ

'ಮಾನವ ಕುಲಂ, ತಾನೊಂದೆ ವಲಂ' ಎಂದರೆ "ವಸುಧೈವ ಕುಟುಂಬಕಂ" ಎಂಬುದರ-ಆಸಯ ಅಡಗಿರುವುದನ್ನು ಕಾಣಬಹುದು.

**"ಹಕ್ಕಿಯ ಹಾಡಿಗೆ ತಲೆದೂಗುವ ಹೂ ನಾನಾಗುವ ಆಸೆ**
**ಹಸುವಿನ ಕೊರಳಿನ ಗೆಜ್ಜೆಯ ದನಿಯೂ ನಾನಾಗುವ ಆಸೆ,**

**ಹಬ್ಬದ ಕಾಮನ ಬಿಲ್ಲಿನ ಮೇಲಿನ ಮುಗಿಲಾಗುವ ಆಸೆ,**
**ಚಿನ್ನದ ಬಣ್ಣದ ಜಿಂಕೆಯ ಕಣ್ಣಿನ ಮಿಂಚಾಗುವ ಆಸೆ,**

**ತೋಟದ ಕಂಚಿನ ಉಸಿರಲಿ ತೇಲುವ ಜೇನಾಗುವ ಆಸೆ,**
**ಕಡಲಿನ ನೀಲಿಯ ನೀರಲಿ ಬಳುಕುವ ಮೀನಾಗುವ ಆಸೆ,**
**ಸಿಡಿಲನು ಕಾರುವ ಬಿರುಮಳೆಗಂಜದೆ ಮುನ್ನಡೆಯುವ ಆಸೆ,**

**ನಾಳೆಯ ಬದುಕಿನ ಇರುಳಿನ ತಿರುವಿಗೆ ದೀಪವ ನಿಡುವಾಸೆ,**
**ಮಣ್ಣಿನ ಕೊಡುಗೆಗೆ, ನೋವಿಗೆ ನಲಿವಿಗೆ**
**ಕನ್ನಡಿ ಹಿಡಿವಾಸೆ**
**ಮಾನವ ಹೃದಯದ ಕರುಣೆಗೆ ಒಲವಿಗೆ,**
**ದನಿಗೂಡಿಸುವಾಸೆ.**

ಹೌದು, ಇದು ನನ್ನ 'ಆಸೆ' ಕೂಡ, ನಾವೆಲ್ಲರೂ ಒಂದೇ ಎಂಬ ಭಾವನೆಯಲ್ಲಿ ಬದುಕಿದರೆ ಬದುಕು ತುಂಬಾ ಸುಂದರ ಎಂಬುದು ಕವಿಯ ಆಸೆ. ಆದ್ದರಿಂದ ಈ ಕವನವನ್ನು ಪ್ರಸ್ತುತ 3ನೇ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ನೀಡಿದ್ದಾರೆ, ಇದರ ಅರ್ಥ ಈ ಭಾವನೆ ಮೊಳಕೆ ಎಂದರೆ, ಚಿಕ್ಕ ವಯಸ್ಸಿನಲ್ಲಿಯೇ ಮೂಡಬೇಕು ಎಂಬುದು ನನ್ನ ಆಸೆ ಕೂಡ.

ಹೀಗೆ ನರಸಿಂಹಸ್ವಾಮಿಗಳ ಕವಿತೆಗಳ ಪ್ರಖರತೆ ನವಪಲ್ಲವದ ಎಲ್ಲಾ ಕವಿತೆಗಳಲ್ಲಿಯೂ ಪ್ರಜ್ವಲಿಸಿದೆ ಎಂದರೇ ತಪ್ಪಾಗಲಾರದು.

## ದುಂಡು ಮಲ್ಲಿಗೆ

ದುಂಡು ಮಲ್ಲಿಗೆ ಎಂಬುದು ಕೆ.ಎಸ್. ನರಸಿಂಹಸ್ವಾಮಿಯವರು ಬರೆದು ಮತ್ತೊಂದು ಕವನ ಸಂಕಲನವಾಗಿದೆ, ಇದು 1997ರ 'ಪಂಪ' ಪ್ರಶಸ್ತಿ ವಿಜೇತ ಕವನ ಸಂಕಲನವಾಗಿದೆ, ಇದು 1983–2003ರ ಕಾಲ ಘಟ್ಟದಲ್ಲಿ ಮೂಡಿಬಂದ ನರಸಿಂಹ ಸ್ವಾಮಿಯವರ 10ನೇ ಕವನ ಸಂಕಲನವಾಗಿದ್ದು 1993ರಲ್ಲಿ ಪ್ರಕಟವಾಯಿತು.

ಈ ಕಾಲಘಟ್ಟದಲ್ಲಿ ಅವರು ತಮ್ಮ ಮೊದಲ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಮಾನವ ಸಂಬಂಧಗಳನ್ನು ಕುರಿತು ಬರೆದಿದ್ದಾರೆ, ಇದರಿಂದ ತಿಳಿಯುವುದೇನೆಂದರೆ, ಕೇವಲ ಒಲವು ಅಥವಾ ಪ್ರೇಮಕವಿ ಎಂದೆನಿಸಿಕೊಂಡ, ಅವರು ದಾಂಪತ್ಯ ಕವಿತೆಗಳ ಜೊತೆಗೆ ಊರು, ಸಮುದಾಯ, ದೇಶ, ವಿಶ್ವ, ಹೀಗೆ ತಮ್ಮ ಕಾವ್ಯ ಪರಿಧಿಯನ್ನು ವಿಸ್ತರಿಸಿರುವುದು ಕಂಡುಬರುತ್ತದೆ.

ಸುಮಾರು 6 ದಶಕಗಳ ತಮ್ಮ ಕಾವ್ಯ ಜೀವನದಲ್ಲಿ ತಮ್ಮ ಬದಲಾವಣೆಯ ಬದುಕಿನ ಚಿತ್ರಣವನ್ನು ಕವಿತೆಗಳ ರೂಪದಲ್ಲಿ ಬಿಂಬಿಸಿದ್ದಾರೆ, ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ನವೋದಯ, ನವ್ಯ ಹಾಗೂ ಪ್ರಗತಿಶೀಲ ಬಂಡಾಯ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೂ, ಕೂಡ ತಮ್ಮನ್ನು ಎಲ್ಲಿಯೂ ಗುರುತಿಸಿಕೊಳ್ಳಲಿಲ್ಲ, ಬದಲಾಗಿ ಪ್ರಗತಿಶೀಲಗಳು ಚಳುವಳಿಯ ಜನಪರ ಹೋರಾಟವನ್ನು ತಮ್ಮ 'ಶಿಲಾಲತೆ' ಎಂಬ ಎರಡನೇ ಕವನ ಸಂಕಲನದಲ್ಲಿ ಗುರುತಿಸಿದ್ದು, ನಂತರ 10ನೇ ಕವನ ಸಂಕಲನದಲ್ಲಿ ಅಂದರೆ, 'ದುಂಡು ಮಲ್ಲಿಗೆ' ಯಲ್ಲಿಯೂ ಮುಂದುವರಿಸಿಕೊಂಡು ಬಂದಿದ್ದಾರೆ.

ಇದರಲ್ಲಿ ಸುಮಾರು 42 ಕವನಗಳಿದ್ದು, ಸ್ವಾತಂತ್ರ್ಯದ ಕಿಡಿಗಳು ಬೆಂಕಿಯ ಚೂ ಬಾಣದಂಥ ಅವರ ಮಾತಿನ ವೈಖರಿಯಲ್ಲಿ ಮೂಡಿಬಂದಿದೆ.

'ಮಲ್ಲಿಗೆಯ ಕವಿ' ಎಂದೆನಿಸಿಕೊಂಡ ಇವರು ತಮ್ಮ ಮಲ್ಲಿಗೆಯ ಕಂಪನ್ನು ಪ್ರತಿಯೊಂದು ಕವನ ಮಾಲಿಕೆಯಲ್ಲಿಯೂ ಗಮನಿಸುತ್ತಾ ಬಂದಿದ್ದಾರೆ, ಅವರೇ ಹೇಳುವಂತೆ,

*"ಯಾರು ಒಪ್ಪಲಿ ಬಿಡಲಿ, ನನ್ನ ನೋಡುತ್ತಿರುವ*
*ನಕ್ಷತ್ರ ಪುಂಜವೇ ನನ್ನ ಕವಿತೆ,*
*ಅರಳಿದರೆ ಮಲ್ಲಿಗೆ, ಕೆರಳಿದರೆ ಸಂಪಿಗೆ,*
*ಹೂವುಗಳನ್ನು ತೂಗುವುದು ನನ್ನ ಕವಿತೆ"*

ನನಗೆ ಇಷ್ಟವಾದ ಕವನ ಅವರ 'ಮಲ್ಲಿಗೆಯ ಮಾಲೆ' ಯಲ್ಲಿ ಹೇಳುತ್ತಾರೆ.

*"ಕವಿಯೆಂದು ನನ್ನನ್ನು ಯಾರು ಕರೆದರು, ಗೆಳೆಯ ?*
*ತುಂಬ ಸಂತಸ, ನಿನಗೆ ವಂದನೆಗಳು !*
*ಮತ್ತೆ ಹೊಗಳಿಕೆ ಅವರು ? ಎನ್ನುವೆಯಲ್ಲ*
*ನಿಜನೆ ಇರಬಹುದು ಅವರಂದ ಮಾತು."*

ಇದರಲ್ಲಿ ಅವರು ತಮ್ಮ ಬಗ್ಗೆ ಅಸಡ್ಡೆಯಾಗಿ ಮಾತನಾಡಿದವರ ಬಗ್ಗೆ ಮಾತನಾಡಿದ ವ್ಯಂಗ್ಯ ಮಾತುಗಳಿವು. ಒಂದು ಬಾರಿ ಗೋಪಾಲ ಕೃಷ್ಣ ಅಡಿಗರು ಕೆ.ಎಸ್. ನರಸಿಂಹಸ್ವಾಮಿಗಳ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ 'ಪುಷ್ಪಕವಿಯ ಪರಾಕು' ಎಂಬ ಕವಿತೆಯಲ್ಲಿ. 'ಇವನ ಅನುಭವ ತೆಳುವಾದದ್ದು' ಎಂದು ಟೀಕಿಸಿದ್ದಾರೆ.

ಅದಕ್ಕೆ ಉತ್ತರವಾಗಿ ನರಸಿಂಹಸ್ವಾಮಿಗಳು ಒಂದು ಕವಿತೆಯನ್ನೇ ರಚಿಸುತ್ತಾರೆ, ಅದೇನೆಂದರೆ :

*"ನಾನು ಒಲವಿನ ಭಕ್ತ ; ಮಲ್ಲಿಗೆ, ಮಾಂದಳಿರು,*
*ಮುಗಿದಿಲ್ಲ ನಾ ಹಿಡಿದ ನಲಿವ ಚಿತ್ರ*
*ಹತ್ತು ಸಲ ನಾನು ಕೇಳಿರುವೆ ನನ್ನದೆ ಹಾಡು*
*ನಿನಗೆ ನಿನಗೆಲ್ಲರಿಗೆ ಪ್ರೀತಿ ಪಾತ್ರ*
*'ಇವನ ಅನುಭವ ತೆಳುವು' ಎಂಬ ಮಾತಿಗೆ ನಕ್ಕೆ*
*ಎಂಟು ಮಕ್ಕಳು ನನಗೆ ಉತ್ತರಿಸಿದೆ;*
*ಅಂದವರ ಬಾಯಿಗಿದೊ ನಾನು ಬೇವಿನ ಚಕ್ಕೆ*
*ನನ್ನ ದನಿಯನು ಕೂಡ ಎತ್ತರಿಸಿದೆ.*
*ನಾನು ಹುಟ್ಟಿದ್ದೆ ಉರಿಬಿಸಿಲಲ್ಲಿ, ಬೆಳೆದದ್ದು*
*ಚಂಡ ಪ್ರಚಂಡ ಕೆಂಡಗಳ ಮೇಲೆ*
*ನಡುದಾರಿಯಲ್ಲಿ ನನಗಿವಳು ಸಿಕ್ಕಿದಳು;*
*ನಾನು ನಿನ್ನಂತೆಯೇ ಒಲವ ಕಂಡೆ"*

ನೋಡಿ ಇವು ಪ್ರೇಮ ಕವಿಯ ಖಾರವಾದ ಮಾತುಗಳು, ಬರೀ ನಾವು ಅವರ ಮಲ್ಲಿಗೆಯ ಘಮವನ್ನು ಸ್ವಾಧಿಸಿದ್ದೇವೆ, ಆದರೆ ಇದರಲ್ಲಿ ಅವರ ಮಾತಿನ ವೈಖರಿ

ಅಡಿಗರ ಮಾತಿಗೆ, ಇವರ ಪ್ರತ್ಯುತ್ತರ ತುಂಬಾನೇ ರೋಮಾಂಚನಕಾರಿ ಎನಿಸುತ್ತದೆ. ಜೊತೆಗೆ ಅವರು ತಮ್ಮ ಕವಿತೆಗಳ ಭಿನ್ನತೆಯ ಬಗ್ಗೆ ಮಾತನಾಡುತ್ತಾ ಹೇಳುತ್ತಾರೆ.

*"ನನ್ನಾ ಅನುಭವ ತೆಳುವೆಂದು, ಒಪ್ಪುತ್ತೇನೆ,*

*ಅವರವರ ಪ್ರತಿಭೆ ಅವರವರವಾಗಿರುವಾಗ*

*ನನ್ನ ದನಿ ಅಡಿಗರದು ಎಂದು ಆದೀತು ಬಿಡಿ"*

ಹೀಗೆ ಮಲ್ಲಿಗೆಯ ಕವಿಯ ಒಲವಿನ ಹೂವಿನ ಘಮ ಎಂಥವರನ್ನು ಮೂಕರನ್ನಾಗಿಸುತ್ತದೆ, ಇದು ಅವರ ಕವಿತೆಗಳಿರುವ ಗಮ್ಮತ್ತು. ಅದೇ ಅವರ ಕವಿತೆಯ ಪ್ರೇಮದ ಒಲುಮೆಯ ಅಗಾಧವಾದ ಅನುಭವದ ರಸಪಾಕ.

'ದಾಂಪತ್ಯ ಕವಿ' ಎಂದೆನಿಸಿಕೊಂಡ ಇವರು ಒಳ್ಳೆಯ ಹಾಸ್ಯ ಪ್ರಜ್ಞೆಯನ್ನು ಕೂಡ ತಮ್ಮ ಬದುಕಿನಲ್ಲಿ ಆಸ್ವಾಧಿಸಿದ್ದರು, ಅದಕ್ಕೆ ಒಂದು ಉದಾಹರಣೆ ಎಂದರೆ, ಅವರ 'ಕಣಿವೆಯಲ್ಲಿ ನಡೆದ ಮದುವೆ' ಕವನದ ಸಾಲುಗಳು ಇಂತಿವೆ,

*"ಹುಡುಗಿಯದೇನೂ ತಪ್ಪಿಲ್ಲ'*

*ಹುಡುಗನು ಅಂಥಾ ಕಪ್ಪಲ್ಲ,*

*ಮದುವೆಯು ನಡೆಯಿತು ಕಣಿವೆಯಲ್ಲಿ*

*ಮಂಗಳವಾರದ ಬೆಳಗಿನಲಿ,*

*ಚಪ್ಪರದೊಳಗೆ ಪುರೋಹಿತರು*

*ಹಕ್ಕಿಯಂತೆ ಹಾರಾಡಿದರು.*

*ಧಾರೆಗೆ ಹೆಣ್ಣನು ಕರೆತರಲು,*

*ಸೋದರ ಮಾವನ ಹುಡುಕಿದರು*

*ಅವನೆಲ್ಲಿದ್ದಾನೊ ಬರಲಿಲ್ಲ*

*ವಾಲಗದವರೂ ಬಿಡಲಿಲ್ಲ*

*ಹೆಣ್ಣಿಗೆ ತಾಳಿಯ ಕಟ್ಟಿದನು*

*ಗೆದ್ದೆನೆಂದು ಆ ಮುದಿಗಂಡು*

*ನಾನೂ ಗೆದ್ದೆನು ಎಂದಳು*

*ಬೆರಳಿಲ್ಲದ ಕೈ ತೋರಿದಳು*

*ಮದುವೆಯು ನಡೆಯಿತು ಕಣಿವೆಯಲ್ಲಿ*

*ಮಂಗಳವಾದ್ಯದ ಮೊಳಗಿನಲಿ*

ಇದನ್ನು ನೋಡಿ ನನಗೆ ಇಂಗ್ಲೀಷ್ proverb ನೆನಪಿಗೆ ಬಂತು 'Diamond cuts diamond' ಅಂದರೆ ಮೋಸಕ್ಕೆ ಮೋಸ ಕೆಟ್ಟದ್ದಕ್ಕೆ ಕೆಟ್ಟದ್ದೇ ಎಂಬುದೇ ಇದರ ಸಾರಾಂಶ.

ನಾನು ಮೊದಲೆ ಹೇಳಿದ ಹಾಗೆ ನರಸಿಂಹ ಸ್ವಾಮಿಗಳು ಪ್ರಗತಿಶೀಲ ಬಂಡಾಯದ ಜನಪರ ಹೋರಾಟದ ಬಗ್ಗೆ ಮಾತನಾಡುತ್ತಾರೆ. ಅದು ಕೇವಲ ತಮ್ಮ ಕವಿತೆಗಳ ಮೂಲಕ ಮಾತ್ರ. ಅವರೇ ಹೇಳಿದ ಮಾತುಗಳ ಮೂಲಕ ಅವರ "ಕಾವಲುಗಾರ" ಎಂಬ ಕವಿತೆಯನ್ನು ನೋಡುವುದಾದರೆ,

**"ಮೂರಂತಸ್ತಿನ ಕಟ್ಟಡವೇರುತ್ತಿವೆ ಗ್ರ್ಯಾಂಟ್ ರೋಡಿನಲ್ಲಿ**
**ಗುಡಿಸಲೊಂದಿಗೆ ಅದರ ಕಾವಲಿಗೆ ಪಕ್ಕದಲ್ಲಿ**
**ಹೊರಗೆ ನಿಂತಿದ್ದಾನೆ ನಗುತ ಕಾವಲುಗಾರ,**
**ಒಳಗಿದ್ದಾರೆ ಅವನ ಹೆಂಡತಿ ಮಕ್ಕಳು**
**ಹೆತ್ತೂರಿನಿಂದವರು ಓಡಿ ಬಂದಿದ್ದಾರೆ,**
**ಬೆಂಗಳೂರಿನ ಮೋಹ ಸೆಳೆದು,**

**ಯಾವಾಗಲೂ ಇವನು ಅರಮನೆಯ ನೆರೆಯವನು**
**ಏನು ಸಂಸಾರವೋ ಇವರದೆನಿಸಿತು ನನಗೆ,**
**ಹೆಂಡತಿ ಮೂರು ಮನೆ ಮುಸುರೆ ತಿಕ್ಕುವ ಕೆಲಸ**
**ಮಗಳಿಗೂ ಗತಿ ಅದೇ ಗಾರೆ ಕೆಲಸಕ್ಕೆ ಮಗ**
**ಏನು ಬದುಕೋ, ಇವರದೇನು ಬದುಕೋ?**
**ಇರುವತನಕ ಎಲ್ಲೆಲ್ಲೋ ಇದ್ದು ಕರೆ ಬಂದಾಗ,**
**ಕಂತೆಯೊಗೆಯುವುದಷ್ಟೆ ಇವರ ಬದುಕು.**

**ಇವನ ಕಾಡುತ್ತಿಲ್ಲ ನಾಳೆಗೆನ್ನುವ ಚಿಂತೆ**
**ಆದ್ದರಿಂದ ಇವನು ನಿತ್ಯ ಸುಖಿಯೋ?**
**ಇವನ ಬದುಕಿಗೆ ಕೂಡ ಬೆಲೆಯಿಲ್ಲವೆಂದಲ್ಲ**
**ಚುನಾವಣೆಗಳಲ್ಲಿವನು ಒಂದು ವೋಟು."**

ಬಹುಶಃ ಇದು ಶ್ರೀಮಂತ –ಬಡವನ ನಡುವಿನ ತಾರತಮ್ಯದ ಬಗ್ಗೆ ತಿಳಿಸಿಕೊಡುತ್ತದೆ. ಇದು ಕಾರ್ಲ್‌ಮಾರ್ಕ್ಸ್ ರವರ ಬಂಡವಾಳ ಶಾಹಿಯ ಗುರುತಾಗಿದ್ದು, ಇಲ್ಲಿನ ಬಡತನದ ಶೋಷಣೆಯನ್ನು ಪ್ರಸ್ತುತ ಸಮಾಜದಲ್ಲಿಯೂ ಕೂಡ ನೋಡಬಹುದು.

ನಿಮಗೆಲ್ಲಾ ತಿಳಿದಿರುವ ಹಾಗೆ ಅವರು 'ಒಲವಿನ ಕವಿ' ಪ್ರೇಮ ಕವಿ ಅವರ ದಾಂಪತ್ಯದ ಬಗ್ಗೆ ಮಾತನಾಡದಿದ್ದರೆ ಬಹುಶಃ ಅವರ ಕವಿತೆಗಳಿಗೆ ಜೀವ ಬರುವುದಿಲ್ಲ ಎಂದೆನಿಸಬಹುದು, ನನಗೆ ಇಷ್ಟವಾದ ಮತ್ತೊಂದು ಕವನ ಎಂದರೆ 'ಒಂದು ನೆನಪು'

ಇದರಲ್ಲಿ ಅವರು ತರುಣ – ತರುಣಿಯರ ತಾರುಣ್ಯದ ಬಗ್ಗೆ ಮಾತನಾಡುತ್ತ ಆಷಾಢ ಮಾಸದ ಅನುಭವವನ್ನು ತೆರೆದಿಡುತ್ತಾರೆ.

*"ಎಲ್ಲಾ ಮಲಗಿರುವಾಗ ಎಚ್ಚರವಾಯಿತು ನನಗೆ,*
*ಎದ್ದೆ, ಹೊಸಿಲಿನ ತನಕ ಹೋಗಿ ಬಂದೆ,*
*ಕಿಟಕಿಯಾಚೆಗೆ ಒಂದು ಚೆಂಗುಲಾಬಿಯ ಕಂಡೆ,*
*ಅದರ ಮುಳ್ಳು ಕೆಂಪು! ಒಳಗೆ ನೊಂದೆ,*
*ಚೈತ್ರಮಾಸದ ಕನಸ ಕಂಡೆ ಆಷಾಡದಲ್ಲಿ*
*ಚಿಕ್ಕ ಮಕ್ಕಳ ಕಂಡೆ ಹಸಿರ ನಡುವೆ*
*ಕೊಳದ ಕೆಂದಾವರೆಯ ಬಿರಿದ ಮೊಗ್ಗನು ಕಂಡೆ,*
*ಮಂದಹಾಸವ ಕಂಡೆ ನಿನ್ನ ನೆನೆದೆ*
*ನೀನ್ನಿಂದ ಹುಣ್ಣಿಮೆಯ ನಕ್ಷತ್ರ ಮೌನವ*
*ನನ್ನ ವಿರಹಾಗ್ನಿಯನು ಹಾಡಿಕೊಂಡೆ*
*ನನ್ನ ಪಾಡಿಗೆ ನನ್ನ ಬಿಡಲು ಒಪ್ಪದ ಲೋಕ*
*ನನ್ನ ಕಣ್ಣಿಗೆ ಬಂತು ಹನಿಗಳಂತೆ*
*ಬಂತು ನೆನಪಿಗೆ ಹಸೆಯ ಮಣೆಯಲ್ಲಿ ನೀನಂದು*
*ಕರವಸ್ತ್ರವನು ನನಗೆ ಕೊಟ್ಟ ನೆನಪು*
*ಒಲವೆಂದರೇನೆಂದು ಕೇಳಲಿಲ್ಲವೆ ನೀನು?*
*ಕೇಳಿದಂತೆಯೆ ನನಗೆ ಈಗ ನೆನಪು"*

ಬಹುಶಃ ಇದು ಪ್ರಸ್ತುತ ಆಷಾಡ ಮಾಸದಲ್ಲಿ ಇರುವ ನವ ವಧು–ವರರ ಭಾವತೀರೇಕದ ನೆನಪುಗಳೆಂದರೆ ತಪ್ಪಾಗಲಾರದು.

ನರಸಿಂಹಸ್ವಾಮಿಗಳ ಹೆಚ್ಚು ಕವನಗಳು ಅವರ ಸ್ಫೂರ್ತಿ ಚಿಲುಮೆಯಾದ ವೆಂಕಮ್ಮನ ನೆನಪಿನಲ್ಲಿಯೇ ಕಳೆದುಹೋಗಿವೆ, ಅದೇ ರೀತಿ ಅವರ 'ನಕ್ಕುಬಿಡು' ಕವನದಲ್ಲಿ ನೋಡುವುದಾದರೆ,

*"ನಕ್ಕವರಂತೆ ನಟಿಸಬೇಡ, ನಕ್ಕು ಬಿಡು ಸುಮ್ಮನೆ,*
*ಬೆಳಕಾಗಲಿ ತಂಪಾಗಲಿ ನಿನ್ನೊಲವಿನ ಒಳಮನೆ*
*ನಿನ್ನೊಲವಿನ ತೆರೆಗಳಲ್ಲಿ ಬೆಳದಿಂಗಳು ಹೊರಳಲಿ*
*ನಿನ್ನ ಹಸಿರು ಕನಸಿನಲ್ಲಿ ಮಲ್ಲಿಗೆ ಹೂವರಳಲಿ*

*ಬಾ ಹತ್ತಿರ, ಬೆರಳ ಹಿಡಿದು, ಮುಂದೆ ಸಾಗು ಸುಮ್ಮನೆ*

*ನಕ್ಕುಬಿಡು, ನೋಡುತ್ತಿವೆ ಲೋಕವೆಲ್ಲ ಸುಮ್ಮನೆ"*

ಇದು ಇವರ ಭಾವನೆಗಳ 'ಭಾವಗೀತೆ'ಯಾಗಿದ್ದು ಮೈಸೂರು ಅನಂತ ಸ್ವಾಮಿಗಳು ತುಂಬಾನೇ ಸೊಗಸಾಗಿ ಹಾಡಿದ್ದಾರೆ. ಇದು ಕೂಡ ಅವರ ಬದುಕಿನ ಅನುಭವದ ಅನುರಾಗದ ರಸಪಾಕ ಎಂದರೆ ತಪ್ಪಾಗಲಾರದು.

ನರಸಿಂಹ ಸ್ವಾಮಿಗಳು ಆಗಾಧ ದೇಶ ಪ್ರೇಮಿಗಳು ಹಾಗೂ ನಾಡ ಪ್ರೇಮಿ, ತಮ್ಮ ನಾಡ ಕಟ್ಟುವ ಕೆಲಸವನ್ನು ಕವಿತೆಗಳ ಮೂಲಕ ಮಾಡುತ್ತಾರೆ, ಅವರ ದೇಶಪ್ರೇಮವನ್ನು ನೋಡುವುದಾದರೆ, ಅವರ ನಾಡಿನ ಏಕತೆ ಎಂಬ ಕವಿತೆಯಲ್ಲಿ ಮೂಡಿಬಂದಿದೆ.

*"ಒಂದೇ ಸೂರಿನ ಕೆಳಗೆ ಇರುಳನ್ನು ಕಳೆದವರೆ,*
*ಒಂದೆ ಬಯಲಿಗೆ ಬಂದ ಜತೆಗಾರರೆ*
*ಕಷ್ಟ ಕಾರ್ಪಣ್ಯಗಳ ದಾಟುತ್ತಾ ನಕ್ಕವರೆ*
*ಬಾಳಿನೇರಿಳಿತಗಳಿಗೆ ಅಂಜಿದವರೆ*
*ಏಕೆ ತಡಮಾಡುವಿರಿ? ಬನ್ನಿ ಜೀವನವೊಂದೆ,*
*ಮೈ ಬೇರೆಯಾದರೂ ಮನವು ಒಂದೆ,*
*ಭಾಷೆ ತಿಳಿಯದು ಎಂದು ದೂರ ಸರಿಯುವಿರೇಕೆ,*
*ಹೃದಯಕ್ಕೆ ತಲುಪುವುದು ಎಲ್ಲ ಭಾಷೆ*
*ಬೇರೆ ಎನ್ನುವ ಪದದ ಬೇರ ಕಿತ್ತೆಸೆದುಬಿಡಿ*
*ಎಲ್ಲರೊಂದೇ ಎನ್ನುವುದೊಂದೆ ಮಂತ್ರ*
*ಆ ಮಕ್ಕಳು ಮಕ್ಕಳೊಂದಿಗೆ ನಗಲಿ ಬಿಡಿ*
*ದೂರವಾಗಲಿ ಬೇರೆ ಎಂಬ ತಂತ್ರ*
*ಎಲ್ಲರೂ ಎಲ್ಲರೊಳಿತಿಗೆ ದುಡಿವುದೇ ಧರ್ಮ*
*ಈ ನಾಡಿನೇಕತೆಯೆ ಶ್ರಮಿಸ ಬನ್ನಿ*
*ಕಣ್ಣ ತುಂಬಲಿ ನಾಡಿನೇಕತೆಯ ಶುಭಚಿತ್ರ*
*ತಾಯ್ನಾಡಿಗೆ ಹೂವಿಡಲು ಮುಂದೆ ಬನ್ನಿ*

ಹೀಗೆ ನರಸಿಂಹಸ್ವಾಮಿಗಳ ನಾಡಪ್ರೇಮ 'ನಾವೆಲ್ಲರೂ ಒಂದೆ' ಎಂಬುದನ್ನು ಸಾರುವ ಒಂದು ತಂತ್ರವಾಗಿತ್ತು.

ಹೀಗೆ ಒಲವಿನ ಕವಿ ಎಂದೆನಿಸಿಕೊಂಡ ನರಸಿಂಹಸ್ವಾಮಿಗಳು ತಮ್ಮ ಬದುಕಿನುದ್ದಕ್ಕೂ

ಹೆಚ್ಚು ಕೃಷಿ ಮಾಡಿದ್ದು ಕವಿತೆಯಲ್ಲಿ. ಪ್ರಸ್ತುತ ಅವರನ್ನಾಗಲಿ 20ವರ್ಷಗಳು ಸರಿದಿದ್ದರು, ಕೂಡ ಅವರ ಬರವಣಿಗೆ ಎಂದೆಂದಿಗೂ ಚಿರನೂತನ, ಚಿರಮಂಥನ, ಯಾವಾಗಲೂ ಕಣ್ಣಿಗೆ ಹಬ್ಬ ಮನಸ್ಸಿಗೆ ಮುದ ನೀಡುತ್ತದೆ. ಆದರೆ ಕೇವಲ ಓದುಗಾರಿಕೆಯಿಂದ ನರಸಿಂಹಸ್ವಾಮಿಗಳ ಅನುಭವ ಆಗರವನ್ನು ಅಳೆಯಲು ಸಾಧ್ಯವಿಲ್ಲ. ಬದಲಾಗಿ ನಮ್ಮನ್ನು ನಾವು ಸಾಹಿತ್ಯದಲ್ಲಿ ತೊಡಗಿಸಿಕೊಂಡು ಅವರ ಅನುಭವದ ಸಾಗರವನ್ನು ಈಜುವುದರ ಮೂಲಕ ಅವರ ಬದುಕಿನ ರಸಪಾಕವನ್ನು ಸವಿಯಬೇಕು ಎಂಬುದು ನನ್ನ ಅನಿಸಿಕೆ.

ಈ ಅವಕಾಶ ನೀಡಿದ್ದಕ್ಕಾಗಿ ಎಲ್ಲರಿಗೂ ನನ್ನ ತುಂಬು ಹೃದಯದ ಧನ್ಯವಾದಗಳು.


**ಶಾರದ.ಎಸ್ ಬಿ.ಇಡಿ**

ಗ್ರಾಮಭಾರತಿ ವಿದ್ಯಾಸಂಸ್ಥೆ

ಸಂತೇಬಾಚಹಳ್ಳಿ

ಮೊ : 7204036190

# ಶಿ.ಕುಮಾರಸ್ವಾಮಿರವರ ಆಯ್ದ ಬಲ್ಲೇಶ್ವರ ವಚನಗಳು

ಕೃಷ್ಣರಾಜಪೇಟೆ ಹಾಗೂ ತೀರ್ಥಹಳ್ಳಿ ತಾಲ್ಲೂಕು ಸಾಹಿತ್ಯವಲಯದಲ್ಲಿ ಗುರುತಿಸಿಕೊಂಡಿರುವ ಎಸ್.ಕುಮಾರಸ್ವಾಮಿ ಅವರು ಶಿಕು ಎಂದೇ ಚಿರಪರಿಚಿತವಾಗಿದ್ದಾರೆ. ಶ್ರೀಯುತರು ದಿನಾಂಕ:03-08-1956 ರಂದು ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆಯಲ್ಲಿ ಜೆ.ಸಿ ಶಿವಬಸಪ್ಪ ಕಮಲಮ್ಮ ದಂಪತಿಗಳ ನಾಲ್ಕನೆಯ ಮಗನಾಗಿ ಜನಿಸಿದರು ಪ್ರಾಥಮಿಕ ಮತ್ತು ಪ್ರೌಢಶಾಲೆಯವರೆಗೆ ಕೃಷ್ಣರಾಜಪೇಟೆಯಲ್ಲಿ, ಪಿಯುಸಿ ಶಿಕ್ಷಣವನ್ನು ಗುಲ್ಬರ್ಗಾದಲ್ಲಿ, ಬಿ.ಎ ಪದವಿಯನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪೂರೈಸುತ್ತಾರೆ. ನಂತರ ಮೈಸೂರು ವಿವಿಯ ಬಿ.ಆರ್.ಪ್ರಾಜೆಕ್ಟ್ (ಈಗ ಕುವೆಂಪು ವಿವಿ) ಸ್ನಾತಕೋತ್ತರ ಕೇಂದ್ರದಲ್ಲಿ ಎಂ.ಎ ಕನ್ನಡ ಪದವಿಯನ್ನು ಎ.ಆರ್.ಕೃಷ್ಣಶಾಸ್ತ್ರಿ ಚಿನ್ನದ ಪದಕದೊಂದಿಗೆ ಗಳಿಸುತ್ತಾರೆ.

ಕನ್ನಡ ಉಪನ್ಯಾಸಕರಾಗಿ 06-09-1984 ರಿಂದ ಅರಸೀಕೆರೆ, ಕುಶಾಲನಗರ, ಕಿಕ್ಕೇರಿ, ಅಕ್ಕಿಹೆಬ್ಬಾಳಿನಲ್ಲಿ ಕಾರ್ಯನಿರ್ವಹಿಸಿ ಬಡ್ತಿ ಹೊಂದಿ 01-02-2005 ರಿಂದ ತೀರ್ಥಹಳ್ಳಿ ತಾಲ್ಲೂಕಿನ ಮೇಗರಹಳ್ಳಿ ಸ.ಪ.ಪೂ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದರು.

ಕನ್ನಡ ಭಾಷಾ ಬೋಧನೆಯೊಂದಿಗೆ ಸಾಹಿತ್ಯ ಕ್ಷೇತ್ರದಲ್ಲಿ ಕವಿತೆ, ಚುಟುಕು ಹಾಗೂ ವಚನ ರಚನೆಯಲ್ಲಿ ತೊಡಗಿದ್ದು ಬೆಳ್ಳಕ್ಕಿ ಸಾಲುಸಾಲು, ಮಹಾಕವಿ ಸುಜನಾ, ಚುಟುಕು ಪದ್ಯ, ಬಲ್ಲೇಶ್ವರ ವಚನಗಳು ತುಂಗೋತ್ತುಂಗ, ಕೃಷ್ಣರಾಜಪೇಟೆ ಸಂಪದ ಹಾಗೂ ಕನ್ನಡ ನುಡಿಸಿರಿ, ದೊಡ್ಡಕೇರಮ್ಮ ದರ್ಶನ, ಎಳಮಿಂಚು ಹಾಗೂ ಲೇಖನ ವಿಹಾರ ಎಂಬ 10 ಕೃತಿಗಳನ್ನು ಪ್ರಕಟಿಸಿದ್ದಾರೆ.

ಇದಲ್ಲದೇ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಜಾನಪದ ವಿಶ್ವಕೋಶದ ಸಹಾಯಕ ಸಂಪಾದಕರಾಗಿ ಪ್ರಬಂಧಗಳನ್ನು ಮಂಡಿಸುತ್ತಾರೆ. ಹಂಪಿ ವಿಶ್ವವಿದ್ಯಾಲಯಕ್ಕೆ ಹವ್ಯಾಸಿ ಜಾನಪದ ಸಂಗ್ರಹಕರಾಗಿ ಗ್ರಾಮದೇವತೆಗಳ ಅಧ್ಯಯನವನ್ನು ಕೈಗೊಂಡಿರುತ್ತಾರೆ.

ಕುವೆಂಪು ವಿವಿಯ ನಿವೃತ್ತಿ ಪ್ರಾಧ್ಯಾಪಕ ಶ್ರೀ ತೀ.ನಂ ಶಂಕರನಾರಾಯಣರವರ 'ಸಮನ್ವಯ' ಅಭಿನಂದನಾ ಸಂಪಾದಕ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಶೀಲವಂತ ರಾಜಕಾರಣಿ ಎಸ್.ಎಂ ಲಿಂಗಪ್ಪ ಶತಮಾನ ಸಂಸ್ಮರಣಾ ಗ್ರಂಥದ ಸಂಪಾದಕರಾಗಿರುತ್ತಾರೆ. ಪದವಿ ಪೂರ್ವ ಶಿಕ್ಷಣ ಮಂಡಳಿಯ ಪಿಯುಸಿ ಕನ್ನಡ ಭಾಷಾ ಪಠ್ಯ ರಚನೆಯ ಕಾರ್ಯಗಾರದಲ್ಲಿ ಪಾಲ್ಗೊಂಡಿರುತ್ತಾರೆ. ಶಾಲೆಗೊಂದು ಪಠ್ಯಕ್ರಮ, ಸುಜನಾ ಹಾಗೂ ದ.ರಾ.ಬೇಂದ್ರೆ ನಮನ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಸಾಂಸ್ಕೃತಿಕವಾಗಿ ಭಾರತ ಜ್ಞಾನ ವಿಜ್ಞಾನ ಕಲಾ ಜಾಥದಲ್ಲಿ ಕಾರ್ಯ ನಿರ್ವಹಣೆಯನ್ನು ಕೈಗೊಂಡಿರುತ್ತಾರೆ. ಕೃಷ್ಣರಾಜಪೇಟೆ ತಾಲ್ಲೂಕಿನ ಕನ್ನಡ ಜಾಗೃತಿ ಪ್ರಾಧಿಕಾರ ತಾಲ್ಲೂಕು ಸಂಚಾಲಕರಾಗಿ, ತೀರ್ಥಹಳ್ಳಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ.

ತೀರ್ಥಹಳ್ಳಿ ತಾಲ್ಲೂಕು ಮೇಗರಹಳ್ಳಿ ಕಾಲೇಜಿನ ಪ್ರಾಚಾರ್ಯರಾಗಿ ಉಪನ್ಯಾಸಕರ ಬೋಧಕೇತರ ಒಕ್ಕೂಟದ ಅಧ್ಯಕ್ಷರಾಗಿ ಹಾಗೂ ತೀರ್ಥಹಳ್ಳಿ ತಾಲ್ಲೂಕು ಗುರು ಭವನದ ನಿರ್ದೇಶಕರಾಗಿದ್ದರು. ಶ್ರೀಯುತರಿಗೆ ಮಂಡ್ಯ ಹಾಗೂ ಶಿವಮೊಗ್ಗ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತು ಬಾಗಲಕೋಟೆಯ ಹಂಬಲ ಸಾಹಿತ್ಯ ಪರಿಷತ್ತು ಮೊದಲಾದವು ಪುರಸ್ಕರಿಸಿವೆ. 2013ರ ಸಾಲಿನಲ್ಲಿ ಉತ್ತಮ ಪ್ರಾಂಶುಪಾಲರ ಪ್ರಶಸ್ತಿಯನ್ನು ಶಿವಮೊಗ್ಗದಲ್ಲಿ ಜರುಗಿದ ಶಿಕ್ಷಕ ದಿನಾಚರಣೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ನೀಡಿ ಗೌರವಿಸಿದೆ.

ಎಸ್. ಕುಮಾರಸ್ವಾಮಿಯವರು ಬರೆದಿರುವ ಸಾಹಿತ್ಯ ಸಾಂಸ್ಕೃತಿಕ ಲೇಖನಗಳು ಕರ್ನಾಟಕ ಪ್ರಜಾವಾಣಿ, ಜನವಾಹಿನಿ, ಛಲಗಾರ, ಲಕ್ಷ್ಮೀಶ, ಸರಕಾರಿದನಿ, ನಿಮ್ಮ ಅಂತರಂಗ, ಟೀಚರ್, ತುಷಾರ, ಮೈಸೂರು ಮಿತ್ರ, ಮಲ್ಲಾರ, ಅಭಿವ್ಯಕ್ತಿ, ವಿನೋದ, ಹೊಸತು, ಸುಧಾ, ಸುದ್ದಿಸಮರ, ಹೇಮಾವತಿ ಬಯಲು, ವೈರಮುಡಿ, ಅತ್ತಿಗುಪ್ಪೆ. ಮಂಜುವಾಣಿ ಅಭಿವ್ಯಕ್ತಿ, ಅಡ್ವೆಸರ್, ಕರವೇ ನಲ್ನುಡಿ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಶ್ರೀಯುತರು 31–08–2019 ರಂದು ವಯೋನಿವೃತ್ತಿ ಹೊಂದಿ ಪ್ರಸ್ತುತ ಮೈಸೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಶಿಕು ಅವರ ಆಧುನಿಕ ವಚನ ಸಂಕಲನ

**ಬಲ್ಲೇಶ್ವರ ವಚನಗಳು**

**ಮಲೆನಾಡಂಚಿನ ಚೆಂದದೂರು ಮೇಗರವಳ್ಳಿಯಯ್ಯಾ**
**ಮೇಗರವಳ್ಳಿ ಮಳೆವೈಭೋಗ ಅಮೋಘವಯ್ಯಾ**
**ಮೇಗದೊಲವಿನೊರಿನಲಿ ಹೊಸೆದ ವಚನವ ನಿಮಗಿತ್ತೆನಯ್ಯಾ ಬಲ್ಲೇಶ್ವರ॥**

ಮಲೆನಾಡಿನ ಅಂಚಿನಲ್ಲಿ ಒಂದು ಸುಂದರವಾದ ಊರು ಅದು ಮೇಗರವಳ್ಳಿ ಮೇಗರವಳ್ಳಿಯ ಮಳೆಯ ವೈಭೋಗ ಅಮೋಘವಾಗಿದೆ, ಸುಂದರವಾಗಿದೆ, ಮೇಘದ ಅಂದರೆ ಮೋಡಗಳ ಊರಿನಲ್ಲಿ ಬರೆದಂತಹ ಅಥವಾ ಹೊಸೆದ ವಚನವನ್ನು

ನಿಮಗೆ ನೀಡುತ್ತಿರುವೆ ಅಯ್ಯಾ ಬಲ್ಲೇಶ್ವರ. ಬಲ್ಲೇಶ್ವರ ಎಂದರೆ ಬಲ್ಲವರ ಈಶ್ವರ ಎಂಬ ಅರ್ಥವನ್ನು ಪಡೆಯಬಹುದು ಅಥವಾ ಬಲ್ಲೇಶ್ವರ ದೇವರ ನಾಮವಾಗಿರಬಹುದು.

**ಬಯಲು ನಾಡೊಡಲಿನ ಪುಟ್ಟ ಊರು ಅತ್ತಿಗುಪ್ಪೆಯಯ್ಯಾ**
**ನಾಲ್ವಡಿ ಕೃಷ್ಣರಾಜೊಡೆಯರ ವರ್ದಂತಿಯಲಿ ಕೃಷ್ಣರಾಜಪೇಟೆಯೆನಿಸಿತ್ತಯ್ಯಾ**
**ದೇವಿರಮ್ಮಣಿ ರಾಣಿ ಕೃಪೆ ಕೆರೆ ಜೀವನದಾಸರೆಯಾಗಿತ್ತಯ್ಯಾ ಬಲ್ಲೇಶ್ವರ**

ಬಯಲು ನಾಡಿನಲ್ಲಿ ಒಂದು ಪುಟ್ಟ ಊರು ಅತ್ತಿಗುಪ್ಪೆ ಅತ್ತಿಗುಪ್ಪೆ ಎಂದರೆ ಇಂದಿನ ಕೃಷ್ಣರಾಜಪೇಟೆ. ಅತ್ತಿಗುಪ್ಪೆ ನಾಲ್ವಡಿ ಕೃಷ್ಣರಾಜರ ಆಳ್ವಿಕೆಯ ಕಾಲದಲ್ಲಿ ಕೃಷ್ಣರಾಜಪೇಟೆ ಎಂದು ಹೆಸರು ಪಡೆಯಿತು. ಕೃಷ್ಣರಾಜಪೇಟೆಯಲ್ಲಿ ನಿರ್ಮಾಣ ಗೊಂಡಿರುವ ದೇವಿರಮ್ಮಣಿ ರಾಣಿ ಕೆರೆಯ ಕೃಪೆ ಎಷ್ಟು ಜನರ ಜೀವನಕ್ಕೆ ಅಸರೆಯಾಗಿತ್ತು, ಬಲ್ಲೇಶ್ವರ ಎಂದು ಕೃಷ್ಣರಾಜಪೇಟೆ ಅಂದರೆ ಕೆ.ಆರ್.ಪೇಟೆಯನ್ನು ವರ್ಣಿಸಿದ್ದಾರೆ.

**ಸದಭಿರುಚಿಯಲ್ಲಿ ವಚನವ ರಚಿಸಿರುವೆನಯ್ಯ**
**ಒಳಿತಾಗಲೆಂಬುದೇ ನುಡಿಗಳಾಶಯವಯ್ಯಾ**
**ಅಪಸ್ವರವ ತಿದ್ದಿ ತೀಡಿ ಸುಸ್ವರವನ್ನಾಗಿಸಯ್ಯಾ ಬಲ್ಲೇಶ್ವರ॥**

**ಯಾವಾಗಲು ಅಭಿರುಚಿಯಿಂದ ಸ್ವ ಇಚ್ಛೆಯಿಂದ ವಚನಗಳನ್ನು ರಚಿಸುತ್ತಿರುವೆ**
**ಒಳ್ಳೆಯದಾಗಬೇಕು ಎಂಬುದು ಪ್ರತಿಯೊಂದು ವಚನಗಳ ನುಡಿಗಳ**
**ಆಶಯವಾಗಿದೆ ಅದರಲ್ಲಿ ಯಾವುದೇ ತಪ್ಪುಗಳಿದ್ದರು ಅದನ್ನು ತಿದ್ದಿ**
**ಸರಿಪಡಿಸಿ ಒಳ್ಳೆಯ ಸ್ವರಗಳಾಗಿ ಮಾಡು ಬಲ್ಲೇಶ್ವರ ಎಂಬುದಾಗಿದೆ.**

**ತಾಯಿ ಭಾಷೆ ಅನ್ನದ ಋಣವಯ್ಯ**
**ಪರಭಾಷೆ ಜೀತದ ಕಾಂಚಾಣವಯ್ಯ**
**ಕರುಳನಾಡಿ ಅರಳಿದನಿತೊ ಬಾಳು ಹಸನಯ್ಯಾ ಬಲ್ಲೇಶ್ವರ॥**

ತಾಯಿ ಭಾಷೆ ಅಂದರೆ ಮಾತೃ ಭಾಷೆಯಿಂದ ಕನ್ನಡ ಭಾಷೆಯು ಅನ್ನಕ್ಕೆ ಋಣವಯ್ಯಾ ಪರಭಾಷೆ ಅಂದರೆ ವಿದೇಶಿಯಾ ಭಾಷೆಗಳು ಜೀತದಿಂದ ಹಣವನ್ನು ಸಂಪಾದನೆಗೆ ಬೇಕು ಕರಳಿನಲ್ಲಿ ಇರುವ ಮಾತು ಹೊರ ಬಂದರೆ ಜೀವನ ಹಸನವಾಗುವುದ ಬಲ್ಲವನೇ ಈಶ್ವರ ಬಲ್ಲೇಶ್ವರ ಎಂಬುದು ಇವರ ಆಶಯವಾಗಿದೆ.

**ಕನ್ನಡ ಜನಪದರಿಗೆ ನಮನವಯ್ಯಾ**
**ಕನ್ನಡ ಗುರುಪರಂಪರೆಗೆ ನಮನವಯ್ಯಾ**
**ಕನ್ನಡನುಡಿ ಗೆಲ್ಗೆ-ಬಾಳ್ಗೆಂದವರಿಗೆ ನಮೋ ನಮನವಯ್ಯಾ ಬಲ್ಲೇಶ್ವರ॥**
**ಕನ್ನಡದ ಜನಪರಿಗೆ ಕನ್ನಡವನ್ನು ಮುನ್ನಡೆಸುತ್ತಿರುವವರಿಗೆ ನನ್ನ ನಮನಗಳು**
**ಕನ್ನಡ ಗುರುಪರಂಪರೆಗೆ ಗುರು ಹಿರಿಯರಿಗೆ ನನ್ನ ನಮನಗಳು**
**ಕನ್ನಡ ನುಡಿ ಗೆಲುವಿಗೆ-ಬಾಳಿಗೆ ಬೆಳವಣಿಗೆ ಬಯಸುತ್ತಿರುವವರಿಗೆ**
**ನಮೋ ನಮನವಾಯ್ಯಾ ಬಲ್ಲೇಶ್ವರ ಎಂದಿದ್ದಾರೆ**
**ನಿಜವರಿಯುವ ಓದು ನಿರಂತರವಿರಲಯ್ಯಾ**

**ನಿರಂತರದ ಓದಿಗೆ ಅವಲೋಕನವಿರಲಯ್ಯಾ**
**ಅರಿವಿನ ಪರಿಗೆ ಜಗದೊಳಿತು ಮೂಲವಾಗಿರಲಯ್ಯಾ ಬಲ್ಲೇಶ್ವರ॥**

ನಿಜವನ್ನು ತಿಳಿಯಲು ಓದುವ ಓದು ನಿರಂತರವಾಗಿ ನಡೆಯುತ್ತಿರಲಿ, ನಿರಂತರವಾಗಿ ಓದಿದ ಓದನು ಅವಲೋಕಿಸಿ ಸ್ಮರಿಸುವಂತಿರಲಿ ಅರಿವಿನ ಪರಿಗೆ ಬದ್ದ ವಿಷಯಗಳನ್ನು ಅರಿಯುವ ರೀತಿ ಜಗಕ್ಕೆ ಒಳ್ಳೆಯದನ್ನು ಮಾಡುವ ಮೂಲವಾಗಿರಲಿ ಬಲ್ಲೇಶ್ವರ

**ಕಲಿಕೆಯಾನದಲ್ಲಿ ನಿರಂತರ ಓದುತಿರಬೇಕಯ್ಯಾ**
**ಓದುವ ಪಯಣದಲ್ಲಿ ನಿಜಾರ್ಥವ ಗ್ರಹಿಸುತಿರಬೇಕಯ್ಯಾ**
**ಅರ್ಥೈಸಿ ಸಂವಾದಿಸಿ ಶೋಧಿಸಿ ದಾಖಲಿಸುವಂತಿರಲಯ್ಯಾ ಬಲ್ಲೇಶ್ವರ॥**

ಕಲಿಯುವ ದಾರಿಯಲ್ಲಿ ನಿರಂತರವಾಗಿ ಯಾವಾಗಲು ಓದುತ್ತಿರಬೇಕು ಓದುವ ಪಯಣದಲ್ಲಿ ಓದಿದ ವಿಷಯದ ಬಗ್ಗೆ ನಿಜವಾದ ಅರ್ಥವನ್ನು ತಿಳಿಯುವಂತಿರಬೇಕು ಅರ್ಥಮಾಡಿಕೊಂಡು ಸಂವಾದಿಸಿ ಅದು ತಪ್ಪು ಸರಿಯೆ ಎಂಬುದನ್ನು ತಿರ್ಮಾನಿಸಿ ದಾಖಲೆ ಮಾಡಿಕೊಳ್ಳುವಂತಿರಬೇಕು ಬಲ್ಲೇಶ್ವರ ಎಂದಿದ್ದಾರೆ.

**ಓದಿದರೆ ಘನತೆಯ ವ್ಯಕ್ತಿತ್ವ ಸಿದ್ದಿಸುವಂತಿರಲಯ್ಯಾ**
**ಬರೆದರೆ ಅನುಭಾವಿಕರ ವಚನಗಳಂತಿರಲಯ್ಯಾ**
**ಆಲೋಚಿಸಿದರೆ ಅವಿವೇಕವ ನೀಗಿಸುವಂತಿರಲಯ್ಯಾ ಬಲ್ಲೇಶ್ವರ॥**

ಓದುವ ಓದು ಕೇವಲ ಪದವಿಗೆ ಮಾತ್ರ ಸೀಮಿತವಾಗಿರದೆ ಘನತೆಯನ್ನು ಹೆಚ್ಚಿಸಿದ ವ್ಯಕ್ತಿತ್ವ ಸಿದ್ದಿಸುವಂತಿರಬೇಕು. ಬರೆದರೆ ಅನುಭವವನ್ನು ಹೊಂದಿರುವ ವಚನಾಕಾರರ ವಚನಗಳಂತಿರಬೇಕು. ಆಲೋಚನೆ ಮಾಡಿದರೆ ಅವಿವೇಕತನವನ್ನು ನೀಗಿಸಿ ಸುಜ್ಞಾನನವನ್ನು ಹೊಂದುವಂತಿರಬೇಕು ಬಲ್ಲೇಶ್ವರ ಎಂಬ ಆಶಯವಿದೆ.

**ಅಯೋಗ್ಯನೆಂಬುದು ಸರ್ವನಾಶವಯ್ಯಾ**
**ಅನಾರೋಗ್ಯನೆಂಬುದು ಕ್ರೂರವಿನಾಶವಯ್ಯಾ**
**ಆರೋಗ್ಯನೆಂಬುದು ಆನಂದೀಶ್ವರನಯ್ಯಾ ಬಲ್ಲೇಶ್ವರ॥**

ಒಬ್ಬ ವ್ಯಕ್ತಿಯನ್ನು ಅಯೋಗ್ಯನೆಂದು ಕರೆಯುವುದು ಆ ವ್ಯಕ್ತಿಯ ಸರ್ವನಾಮ ಅನಾರೋಗ್ಯ ಎಂಬುದು ಒಮ್ಮೆ ವ್ಯಕ್ತಿಗೆ ಬಂದರೆ ಆ ವ್ಯಕ್ತಿಯು ಕ್ರೂರವಾದ ವಿನಾಶವಾಗುವುದು ಖಂಡಿತ. ಅದೇ ರೀತಿ ಆರೋಗ್ಯ ಎಂಬುದು ಮನುಷ್ಯನಿಗೆ ಆನಂದವಾಗಿದೆ. ಆನಂತರ ಜೀವನ ಸಂತೋಷದಿಂದ ಕೂಡಿರುತ್ತದೆ. ಎಂಬುದು ಆಧುನಿಕ ವಚನ ಸಂಕಲನದ ಬಲ್ಲೇಶ್ವರ ವಚನಗಳ ಪ್ರಮುಖ ಆಶಯ ಎಂಬುದನ್ನು ಗಮನಿಸಬಹುದು.

**ಪ್ರಿಯಾ ಸಿ ಬಿ**
**ಬಿನ್ ಬಸವರಾಜು**
**ಚೀಕನಹಳ್ಳಿ ಕೆ.ಆರ್. ಪೇಟೆ (ತಾ), ಮಂಡ್ಯ ಜಿಲ್ಲೆ 571426.**
**ಮೊ : 9731305997**

# ಶ್ರೀ ಬಲ್ಲೇನಹಳ್ಳಿ ಮಂಜುನಾಥ ಅವರ ವಸ್ತ್ರಾಪಹರಣ ಮತ್ತು ಇತರ ಕತೆಗಳು

ಮೊದಲಿಗೆ ಶ್ರೀ ಬಲ್ಲೇನಹಳ್ಳಿ ಮಂಜುನಾಥ ಅವರ ಹೆಸರೆ ಹೇಳುವಂತೆ ಬಲ್ಲೇನಹಳ್ಳಿ ಗ್ರಾಮದವರು, ಈ ಗ್ರಾಮ ಬೂಕನಕೆರೆ ಹೋಬಳಿಯ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆಗೆ ಸೇರಿದೆ. ಮಂಜುನಾಥ್ ಸರ್ ರವರ ತಂದೆ ಶ್ರೀ ಅಣ್ಣಸ್ವಾಮಿ ಶರ್ಮ ಮತ್ತು ತಾಯಿ ನಾಗರತ್ನಮ್ಮ, ಇವರು ದಿನಾಂಕ 20-07-1970ರಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತವರೂರಿನಲ್ಲಿ ಪಡೆದರು, ನಂತರ ಪ್ರೌಢಶಿಕ್ಷಣವನ್ನು ಬೂಕನಕೆರೆಯಲ್ಲಿ, ನಂತರ ಪದವಿಪೂರ್ವಶಿಕ್ಷಣ ಕೃಷ್ಣರಾಜಸಾಗರದಲ್ಲಿ, ಪದವಿ ಶಿಕ್ಷಣವನ್ನು ಕೃಷ್ಣರಾಜಪೇಟೆಯಲ್ಲಿ ಹಾಗೂ ಸ್ನಾತಕೋತ್ತರ ಪದವಿಯನ್ನು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಪೂರ್ಣಗೊಳಿಸಿದರು. ಇವರು ಪತ್ರಿಕೋದ್ಯಮ ಹಾಗೂ ಆರೋಗ್ಯ ವಿಷಯದಲ್ಲಿ ಡಿಪ್ಲೋಮೋ ಪದವಿ ಪಡೆಯುತ್ತಾರೆ.

ಇವರ ವೃತ್ತಿ ಜೀವನ ಮೊದಲಿಗೆ ಅಂಚೆ ಮತ್ತು ಆರೋಗ್ಯ ಸಹಾಯಕರಾಗಿ ಆರೋಗ್ಯ ಶಿಕ್ಷಣದ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿ ತದನಂತರದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖಾ ಉಪನ್ಯಾಸಕರ ಹುದ್ದೆಗೆ ಕೆ.ಪಿ.ಎಸ್.ಸಿ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪಿ.ಯು.ಸಿ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರಾಗಿ ತೆಂಡೇಕೆರೆಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಇಂದು ಇವರು ಉಪನ್ಯಾಸಕ ವೃತ್ತಿಯೊಂದಿಗೆ ಪ್ರಜಾವಾಣಿ ಪತ್ರಿಕೆಯ ಅರೆಕಾಲಿಕ ಸುದ್ಧಿ ಸಂಗ್ರಹಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇವರ ಮೊದಲನೆಯ ಕೃತಿ 'ಬೆಳ್ಳಕ್ಕಿ ಸಾಲು ಸಾಲು' ಎಂಬುದು ಇದನ್ನು 2000 ಇಸವಿಯಲ್ಲಿ ಪ್ರಕಟಗೊಂಡಿದೆ. ಎಸ್.ಎಂ.ಲಿಂಗಪ್ಪನವರನ್ನು ಕುರಿತು ಇವರು ಬರೆದ ಬದುಕು ಸಾಧನೆಗಳ ನೂರು ಪುಟಗಳ ಲೇಖನವನ್ನು ಶೀಲವಂತ ರಾಜಕಾರಣಿ ಎಸ್.ಎಂ.ಲಿಂಗಪ್ಪ ಎಂಬ ಸಂಸ್ಮರಣ ಕೃತಿಯಲ್ಲಿ ಇವರ ಲೇಖನವನ್ನು ಎಸ್.ಎಂ.ಲಿಂಗಪ್ಪ ಶತಮನೋತ್ಸವ ಸಮಿತಿ ಪ್ರಕಟಿಸಿದೆ. ಇವರ ಪ್ರಮುಖ ಕೃತಿ ಎಂದರೇ ಕೃಷ್ಣರಾಜಪೇಟೆ ತಾಲ್ಲೂಕು ಮಹಾದರ್ಶನ.

ಇವರಿಗೆ ಮಂಡ್ಯ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯದ ಯುವ ಅತ್ಯುತ್ತಮ ಉದಯೋನ್ಮುಖ ಲೇಖನ ಪ್ರಶಸ್ತಿ, ಕಾವ್ಯಶ್ರೀ ಪ್ರಶಸ್ತಿ. ಡಾ. ದ.ರಾ. ಬೇಂದ್ರೆ ಕಾವ್ಯಪ್ರಶಸ್ತಿ ಮತ್ತು ಉತ್ತಮ ಉಪನ್ಯಾಸಕ ಪ್ರಶಸ್ತಿ ಮೊದಲಾದ ಹಲವಾರು ಪ್ರಶಸ್ತಿ–ಪುರಸ್ಕಾರಗಳು ಇವರಿಗೆ ಸಂದಿವೆ.

## ವಸ್ತ್ರಾಪರಣ ಕತೆಯ ವಿಮರ್ಶೆ :

ವಸ್ತ್ರಾಪರಣ ಎಂಬ ಶಬ್ದ ಕೇಳುತ್ತಿದ್ದಂತೆ ನಮಗೆ ಮಹಾಭಾರತ ಸಂಚಿಕೆಯ ಕಥೆಯೆಂದು ನೆನಪಾಗುತ್ತಾದೆ. ಆದರೆ ಲೇಖಕರು ಇದರಲ್ಲಿ ಇನ್ನೊಂದು ಅಂಶಕ್ಕೆ ಹೆಚ್ಚಿನ ಮಹತ್ವ ನೀಡಿ ಈ ಕಥೆಯನ್ನು ರಚಿಸಿದ್ದಾರೆ.

ಹಳ್ಳಿಗಳಲ್ಲಿ ನಾವುಗಳ ಕಂಡಂತೆ ಸಾಮಾನ್ಯವಾಗಿ ಪೌರಣಿಕ ನಾಟಕಗಳು ನಡೆಯುತ್ತವೆ. ಅಂತೆಯ ಒಂದು ಹಳ್ಳಿಯಲ್ಲಿ ವಸ್ತ್ರಾಪರಣ ಎಂಬ ನಾಟಕವನ್ನು ಮಾಡಲು ಸಿದ್ದಮಾಡಿಕೊಳ್ಳಲು ಪಂಚಾಯಿತಿ ಕಟ್ಟೆಗೆ ಕರದಿದ್ರು, ಅಲ್ಲಿ ಎಲ್ಲಾರು ಗೊಣಗಾಡುವಾಗ ಕಾಟ ಜನರ ನಡುವೆ ತೂರು ಬಂದು ನೋಡಲಾರಂಭಿಸಿದ ಕಾಟ ತನ್ನ ಇರುವಿಕೆಯನ್ನು ತೋರಿಸಲು 'ಮೇಷ್ಟ್ರೇ, ಇವತ್ತೇ ಪಾಲ್ಟು ಹಂಚ್ಬಿಡಿ ಎಂದ, ಜನರೆಲ್ಲ ಹೂಂ ಹೂಂ ಎಂದರು. ಕಾಟನ ಮಾತಿಗೆ ಕಿಮ್ಮಕ್ಕು ಸಿಕ್ಕಿದ್ದು ಕಂಡು ಕಾಟ ಮತ್ತೆ ಮಾತನಾಡಲು ಹೋದ. ಪಟೇಲರು ದುರುಗುಟ್ಟಿಕೊಂಡು ನೋಡಿದರು, ಕಾಟ ಸುಮ್ಮನೆ ಕುಳಿತುಕೊಂಡು, ನಂತರ ಗೌಡರು ಕಾಟ ಹೇಳೋದು ಸರಿ ಅಲ್ಲವ ಎಂದರು. ಆಗ ಮೇಷ್ಟ್ರ ನಾಟಕಕ್ಕೆ 'ವಸ್ತ್ರಾಪರಣ' ಎಂಬ ಹೆಸರಿಟ್ಟು, ಮಹಾಭಾರತದ್ದು ಕತೆ ಎಂದರು. ಕಾಟ, ಬೋ ಪಸಂದ ನಾಟ್ಕ ಎಂದ. ನಾಟ್ಕದ ಹೆಸ್ರು ಉಳಿಸಬೇಕಾದ್ರೆ ದುಶ್ಯಾಸನನ ಪಾತ್ರವ ತಮ್ಮ ಬಕ್ಕೇಶಪ್ಪನಿಗೆ ಕೊಡಬೇಕು ಎಂದ, ಆದರೆ ಲಿಂಗಾಯಿತ ನಂಜಪ್ಪ ಕಾಟನ ಮೇಲೆ ರೇಗಿಹೋದ ಬಕ್ಕೇಶಪ್ಪನಿಗೆ ನಾನು ಸ್ಟೇಜ್ ಮ್ಯಾನೇಜರ್ ಆಗಿರುವುದರಿಂದ ನಾನು ನಾಟಕದಲ್ಲಿ ಪಾರ್ಟ್ ಮಾಡಲ್ಲ ದುಶ್ಯಾಸನ ಪಾತ್ರವನ್ನು ಕಾಟಂಗೆ ಕೊಡಿ ಎಂದ.

ಶಿವಪ್ಪ ಹೇಳುತ್ತಾರೆ ಪಾತ್ರ ಹಂಚೋರು ಮೇಷ್ಟ್ರೋ ಅಥವಾ ಬಕ್ಕೇಶಪ್ಪನೋ ಎಂದು ಹೇಳುತ್ತಾ ದುಶ್ಯಾಸನ ಪಾತ್ರ ಮಾಡಲು ನಾನೆ ಸರಿಯಾದವನು ಎಂದು

ತೋರಿಕೊಳುತ್ತಾನೆ. ಆದರೆ ಗೌಡ್ರು ಪೈಕಿಗೆ ಶಿವಪ್ಪನ ಪೈಕಿಯವರು ದುಶ್ಯಾಸನ ಆಗೋದು ಇಷ್ಟ ಇರುವುದಿಲ್ಲ. ನಂತರ ಮೇಷ್ಟ್ರು ಭೀಮ, ದುರ್ಯೋಧನ ಪಾತ್ರವನ್ನು ಶಿವಪ್ಪನ ಪೈಕಿಗೆ ಮತ್ತು ದುಶ್ಯಾಸನ ಪಾತ್ರವನ್ನು ಕಾಟನಿಗೆ ಹಂಚಿದರು. ಕಾಟ ತುಂಬಾ ಸಂತೋಷವಾದನು. ಬಕ್ಕೇಶಪ್ಪನಿಗೆ ಕಂಗಳಲ್ಲಿ ಮಿಂಚು ಸುಳಿದಂತಾಯಿತು.

ಈ ವೇಳೆಯಲ್ಲಿ ಊರಾಗೆಲ್ಲ ಒಂದು ಸುದ್ಧಿ ಹರಡಿಹೋಗಿತ್ತು. ಬಕ್ಕೇಶಪ್ಪನಿಗು ಮತ್ತು ಕಾಟನ ಹೆಂಡತಿ ಸುಬ್ಬಿಗೆ ಅಕ್ರಮ ಸಂಬಂಧ ಕಲ್ಪಿಸಿದರು. ಕಾಟನನ್ನು ಕಂಡರೆ ಊರಿನ ಹೆಂಗಸಿರಿಗೆಲ್ಲ ಭಯಾ ಉಂಟಾಗುತಿತ್ತು. ಕಾಟನ ಪಾತ್ರ ಮಾಡಿದ್ದು ಇದಕ್ಕೆ ಕಾರಣ.

ಜನರೆಲ್ಲಾ ಸಂಜೆಯಾದ ತಕ್ಷಣ ಮಲಗುತ್ತಿದ್ದವರು ಮಧ್ಯರಾತ್ರಿಯಾದರು ಮಲಗುತ್ತಿರಲಿಲ್ಲ. ಮಧ್ಯರಾತ್ರಿಯವರೆಗೂ ನಾಟಕದ ರಿಹರ್ಸಲ್ ಮಾಡುತ್ತಿದ್ದರು.

ಒಂದು ದಿನ ಕಾಟ ಮಲಗಿರುವಾಗ ಹೆಚ್ಚು ಬಳೆಗಳ ಶಬ್ಧ ಕೇಳಿ ಬರುತಿತ್ತು ಒಬ್ಬ ಹೆಂಗಸು ಬಂದು ಕಾಟನನ್ನು ಎಬ್ಬಿಸಿ ಕಾಟಣ್ಣ ನಿನ್ನ ಹೆಂಡತಿ ಮೈತುಂಬಿಕೊಂಡಿದ್ದಾಳೆ ಎಂದಳು. ಕಾಟ ಕೋಪಗೊಂಡು ಸುಬ್ಬಿಯನ್ನು ಮೇಲಿಂದ ಕೆಳಕ್ಕೆ ನೋಡುತ್ತಾ ನೀಜಾನ ಎಂದ, ಸುಬ್ಬಿ ಹೂ ಅಂದಳು, ಕಾಟನು ಸುಬ್ಬಿಯ ಕಪಾಳಕ್ಕೆ ರಪ್ಪನೆ ಬಿಗಿದು ಹೊರಗೆ ಹೊರಟ.

ಕಾಟನು ತನ್ನ ತಂದೆ ತನಗಾಗಿ ಕೊಟ್ಟಿದ್ದ ಒಂದೇ ಒಂದು ಆಸ್ತಿಯಾದ ತೆಂಗಿನ ತೋಟಕ್ಕೆ ಹೊರಟ, ತೋಟದಲ್ಲಿದ್ದ ಮಾವಿನ ಮರದ ಮಾವಿನಕಾಯಿ ಇವನನ್ನು ನೋಡಿ ನಕ್ಕಂತಾಯಿತು, ಕಾಟನು ಈ ಮರದಿಂದಲೇ  ನನಗೆ ಈ ಪರಿಸ್ಥಿತಿ ಬಂದಿದ್ದು ಎಂದು ಹಳೆಯ ನೆನಪುಗಳನ್ನು ನೆನಪಿಸಿಕೊಂಡ.

ಕಾಟನು ಚಿಕ್ಕವನಿದ್ದಾಗ ಮಾವಿನ ಕಾಯನ್ನು ಕೀಳಲು ಹೋಗಿ ಮರದಿಂದ ಬಿದ್ದು ಅಪಾಯ ಸ್ಥಳಕ್ಕೆ ಪೆಟ್ಟಾಗಿ ಕಾಟನು ಮುಂದೆ ತಂದೆಯಾಗಲು ಆಗುವುದಿಲ್ಲ ಎಂದು ಹೇಳಿದರು. ಪಟೇಲರು ಇದನ್ನು ಗಮನದಲ್ಲಿಟ್ಟುಕೊಂಡು ಕಾಟನನ್ನು ಚಿಕ್ಕಂದಿನಿಂದ ಸಾಕಿದರು, ಕಾಟನ ವಿಷಯ ತಿಳಿದ ಯಾರು ಕಾಟನಿಗೆ ಹುಡುಗಿ ಕೊಡಲು ಮುಂದಾಗಲಿಲ್ಲ. ಪಟೇಲರು ಸಂಪಿಗೆ ಹಳ್ಳಿಯಾ ಸಣ್ಣಪ್ಪನ ಹಿರೀ ಮಗಳಾದ ಸುಭಾದ್ರ ಅಲಿಯಾಸ್ ಸುಬ್ಬಿಯನ್ನು ಮದುವೆ ಮಾಡಿಸಿದರು.

ಮದುವೆ ಮಾಡಿಸಿದ ನಂತರ ಪಟೇಲರಿಗೆ ಭಯ ಸುಬ್ಬಿ ನಮ್ಮ ಮನೆ ಮುಂದೆ ಬಂದು ಕೂತರೆ ಅಂತ. ಪಟೇಲರು ನಂತರ ಗೌಡರನ್ನೊಮ್ಮೆ ಭೇಟಿ ಮಾಡಲು ಹೆಜ್ಜೆ ಹಾಕಿದರು.

ಕಾಟನಿಗೆ ನಾಟಕದ ಮೇಲೆ ಮೊದಲಿದ್ದ ಉತ್ಸಾಹ ಇರಲಿಲ್ಲ. ಗೆಜ್ಜೆಪೊಜೆಯಂದು ಮೈಸೂರಿನಿಂದ ಬಂದ ಸ್ತ್ರೀ ಪಾತ್ರಧಾರಿಗಳು ಇವನನ್ನ ನಿಕೃಷ್ಟವಾಗಿ ಕಂಡರು.

ದ್ರೌಪಧಿ ಪಾತ್ರ ಮಾಡಿದವಳಿಗೂ ಇವನಿಗೂ ಜೋಡಿಯಾಗುತ್ತಿರಲಿಲ್ಲ. ಕಾಟ ನಾಟಕದ ಮೇಷ್ಟ್ರು ಜೊತೆ ಜಗಳವಾಡಿ ಬಕ್ಕೇಶಪ್ಪನೊಂದಿಗೆ ವಿಷಯ ಪ್ರಸ್ತಾಪಿಸಿದ, ಬಕ್ಕೇಶಪ್ಪ "ಅಲ್ಲಾ ನನ್ ಮಗನೆ ಅವ್ಳು ಹೇಂಗಿದ್ರೆ ನಿನ್ಗೇನ್ಲಾ ಒಸಿ ಒತ್ತು ಪಾಲ್ಟ್ ಮಾಡಕ್ಕೆ" ಎಂದು ಗದರಿದ.

ಒಂದು ದಿನ ನಾಟಕದ ಮೇಷ್ಟ್ರು ತಲೆ ನೋವಿನಿಂದ ಬೇಗನೆ ಪ್ರಾಕ್ಟೀಸ್ ಮುಗಿಸಿದರು. ಕಾಟ ಮನೆಯ ಬಾಗಿಲತ್ತಿರ ಬಂದಾಗ ಮನೆಯ ಒಳಗೆ ಒಂದು ಸಂವಾದದ ಧ್ವನಿ ಬಂತು, ಸುಬ್ಬಿಯು ಬಕ್ಕೇಶಪ್ಪನ ಹತ್ತಿರ ಊರಿನವರೆಲ್ಲ ನನ್ನನ್ನು ಆಡಿಕೊಳ್ಳುತ್ತಾರೆಂದು ತಿಳಿಸುತ್ತಾಳೆ, ಬಕ್ಕೇಶಪ್ಪನು ಸುಬ್ಬಿಯ ಕಿವಿಗೆ ಪಿಸುಗುಡುತ್ತಾ ನಾಟಕದ ದಿನ ಕೊನೆಯಾಗುತ್ತದೆ ಎಂದು ತಿಳಿಸುತ್ತಾನೆ.

ನಂತರ ದಿನದಲ್ಲಿ ಬಕ್ಕೇಶಪ್ಪ ಹಾಗೂ ದ್ಯಾವ್ರು ಗುಡ್ಡಪ್ಪ ಇಬ್ಬರು ಮಾತನಾಡುತ್ತಿರುತ್ತಾರೆ, ಕಾಟನು ನೋಡಿ ಏನಿದು ಇವರಿಬ್ಬರೂ ಎಣ್ಣೇ ಸೀಗೆಕಾಯಿ ತರ ಇದ್ದವರು ಎಂದು ಆಶ್ಚರ್ಯಪಡುತ್ತಾನೆ. ಕಾಟ ಹತ್ತಿರ ಬರುತ್ತಿದ್ದಾಗೆ ಬಕ್ಕೇಶಪ್ಪ ಇಬ್ಬರ ಮೇಲೆ ಕೈ ಹಾಕಿ ನಮ್ಮ ನಾಟಕ ನಿಮ್ಮ ಕೈಯಲ್ಲೆ ನಿಂತಿದೆ ನೀವಿಬ್ಬರೆ ಪ್ರಮುಖ ಎಂದು ಹೇಳುತ್ತಾನೆ. ನಾಟಕದ ಮೇಷ್ಟ್ರು ಹೌದು ದುಶ್ಯಾಸನ ಮತ್ತು ಬೀಮ ಪ್ರಮುಖವಾದ ಪಾತ್ರ ಎನ್ನುತ್ತಾರೆ. ಕಾಟನಿಗೆ ಏನೋ ಇದು ಒಳಸಂಚು ಎಂದು ಅನುಮಾನ ಬರುತ್ತದೆ.

ನಾಟಕದ ದಿನ ಬಂದೇ ಬಿಟ್ಟಿತು ಎಲ್ಲರು ಸಂಜೆ ಎಷ್ಟು ಬೇಗ ಆಗುತ್ತದೊ ಎಂದು ಕಾತರಿಸುತ್ತಿದ್ದರು, ಕಾಟನ ಮನೆಯಲ್ಲಂತೂ ತುಂಬಾ ನೆಂಟರು, ಸುಬ್ಬಿಗೆ ಕೆಲಸ ಮಾಡಿ ಸುಸ್ತಾಗಿತ್ತು, ಆದರೂ ಇಂದು ಸಂಜೆ ಎಲ್ಲದ್ದಕ್ಕು ಅಂತ್ಯ ಸಿಗುತ್ತದೆ ಎಂದು ಸಂತೋಷದಿಂದಿದ್ದಳು.

ನಾಟಕ  ಆರಂಭವಾಯಿತು ಸೂತ್ರದಾರಿ ಬಂದು ಪಾತ್ರ ಪರಿಚಯ ಮಾಡಿ ನರ್ತಕಿಯರೊಂದಿಗೆ ನಾಟ್ಯ ಮುಗಿಯಿತು. ನಂತರ ಪಾಂಡವರ ಮತ್ತು ಕೌರವರ ಕಲಾಪ ಆರಂಭಗೊಂಡಿತು. ಘಗಡೆ ಆಟದಲ್ಲಿ ಪಾಂಡವರು ಸೋತನಂತರ, ದುರ್ಯೋಧನ ದ್ರೌಪದಿಯನ್ನು ಸೆಳೆದು ಬಾ ಎಂದು ದುಶ್ಯಾಸನನ್ನು ಕರೆದರೆ, ಕಾಟ ಕಾಣುತ್ತಿರಲಿಲ್ಲ, ಆರ್ಮನಿ ಭಾರಿಸುತ್ತಿದ್ದ ಮೇಷ್ಟ್ರು ಎಲ್ಲೋದ ಎಂಬುದಾಗಿ ಹುಡುಕುವಾಗ, ಪಟೇಲರು ಬಕ್ಕೇಶಪ್ಪ ಇದ್ದಾನ ನೋಡಿ ಎಂದ, ಇಬ್ಬರು ಇರಲಿಲ್ಲ, ದೂರದಲ್ಲಿ ಬಂದ ಶಬ್ಧಕ್ಕೆ ಜನಗಳೆಲ್ಲ ಓಡುತ್ತಿದ್ದರು ಹೋಗಿ ನೋಡಿದರೆ, ಸುಬ್ಬಿ ಮತ್ತು ಬಕ್ಕೇಶಪ್ಪನ ತಲೆ ಕಡಿದು ಕುರಿಗಳು ಒದ್ದಾಡುವಂತೆ ಒದ್ದಾಡಿ ಬಿದ್ದಿದ್ದವು. ರಕ್ತ ಮನೆಯಲ್ಲಾ ತುಂಬಿತ್ತು. ನಾಟ್ಕದ ಡ್ರಸ್ಸಿನಿಂದ ದುಶ್ಯಾಸನನ್ನೂ ಮೀರಿಸುವಂತೆ ಕಾಣುತ್ತಿದ್ದ ಕಾಟನ  ದೇಹ ಮನೆಯ ಮುಂದಿನ ಸೂರ್ಕಟ್ಟಿನಲ್ಲಿ ತೂಗಾಡುತ್ತಿತ್ತು.

## ಸ್ವಯಂ ವಿಮರ್ಶೆ

ಒಟ್ಟಾರೆಯಾಗಿ ಈ ಕತೆಯಿಂದ ತಿಳಿದುಬರುವುದೇನೆಂದರೆ ಕೆಟ್ಟದ್ದು ಮಾಡಿದವರಿಗೆ ಒಂದಲ್ಲ ಒಂದು ದಿನ ತಕ್ಕ ಪಾಠವಾಗುತ್ತದೆ.

ಗುರುಗಳಾದಂತವರು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಂಡರೆ ಶಿಷ್ಯರು ಸಹ ಉತ್ತಮ ಹವ್ಯಾಸಗಳನ್ನು ಬೆಳಸುಕೊಳ್ಳುತ್ತಾರೆ.

ಊರಿನ ಮುಖ್ಯಸ್ಥರುಗಳಾದ ಪಟೇಲರು, ಗೌಡರು ಈಗಿನ ಪ್ರಸ್ತುತ ಸಮಾಜದ ರಾಜಕೀಯ ವ್ಯಕ್ತಿಗಳು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಂಡರೆ, ಒಂದು ಹಳ್ಳಿ, ರಾಜ್ಯ, ಮತ್ತು ದೇಶ ಸಮೃದ್ಧಿಯಿಂದ ಕೂಡಿರುತ್ತದೆ.

ನಂಬಿಕೆ ಒಂದು ಉತ್ತಮವಾದ ಅಂಶವಾಗಿದೆ ಈ ನಂಬಿಕೆಯನ್ನು ಎಲ್ಲರ ಮೇಲೂ ಇಡಲಾಗುವುದಿಲ್ಲ. ನಂಬಿಕೆಯನ್ನು ಉಳಿಸಿಕೊಳ್ಳುವುದು ತಮ್ಮ ತಮ್ಮ ಕೈಯಲ್ಲಿ ಇರುತ್ತದೆ. ಒಂದು ಭಾರಿ ಒಬ್ಬ ವ್ಯಕ್ತಿ ನಂಬಿಕೆ ಕಳೆದುಕೊಂಡರೆ ಮರಳಿ ಪಡೆಯವುದು ತುಂಬಾ ಕಷ್ಟ. ನಂಬಿಕೆಯನ್ನು ಒಬ್ಬ ವ್ಯಕ್ತಿ ಅಥವಾ ವಸ್ತುವಿನ ಮೇಲೆ ಇಡುವುದರ ಮೊದಲು ಮೌಲ್ಯೀಕರಿಸಿ ಮತ್ತು ಪರೀಕ್ಷಿಸಿ ನಂಬುವುದು ಉತ್ತಮ.

**ಯೋಗೇಶ್ ಎಂ.ಪಿ**
**ಪರಶಿವೇಗೌಡ**
ಮಾಂಬಳ್ಳಿ, ಸೋಮನಹಳ್ಳಿ (ಪೋ), ಅಕ್ಕಿಹೆಬ್ಬಾಳು (ಹೋ),
ಕೆ.ಆರ್.ಪೇಟೆ (ತಾ), ಮಂಡ್ಯ (ಜಿ).
ಮೊ : 8495946561

# ಮಾರೇನಹಳ್ಳಿ ಲೋಕೇಶ್ ಅವರ ಮಕ್ಕಳ ಸಾಹಿತ್ಯ

ಅತ್ತಿಗುಪ್ಪೆ ಸಾಹಿತ್ಯ ಬಳಗ, ಅಕ್ಷಯ ಪ್ರಕಾಶನ ಹಾಗೂ ಗ್ರಾಮಭಾರತಿ ವಿದ್ಯಾಸಂಸ್ಥೆಯ ಸಹಯೋಗ ಕೃಷ್ಣರಾಜಪೇಟೆ, ಇವರ ಕಡೆಯಿಂದ ಹಮ್ಮಿಕೊಂಡಿರುವ ಸಾಹಿತ್ಯ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ನನ್ನ ಭಾಗ್ಯವೇ ಸರಿ. ಈ ಸಂಭ್ರಮದಲ್ಲಿ ಭಾಗವಹಿಸಲು ನನಗೆ ಅವಕಾಶ ನೀಡಿದ ನಿಮ್ಮೆಲ್ಲರಿಗೂ ತುಂಬು ಹೃದಯದ ಧನ್ಯವಾದಗಳು.

ಈ ಒಂದು ಸಾಹಿತ್ಯ ಸಂಭ್ರಮ ಕಾರ್ಯಕ್ರಮದಲ್ಲಿ ನಮ್ಮ ಅತ್ತಿಗುಪ್ಪೆ ಸಾಹಿತ್ಯ ಬಳಗದ ಅಧ್ಯಕ್ಷರಾದ ಮಾರೇನಹಳ್ಳಿ ಲೋಕೇಶ್ ಸರ್ ಅವರು ಬರೆದಿರುವ ಮಕ್ಕಳ ಸಾಹಿತ್ಯದ ಕೃತಿಗಳಾದ “ಪುಟ್ಟನ ಪ್ರಾಸಗಳು” ಮತ್ತು “ಈ ಹಾಡು ನಿಮಗಾಗಿ” ಕೃತಿಗಳ ಕುರಿತಾಗಿ ವಿಷಯವನ್ನು ಮಂಡನೆ ಮಾಡುತ್ತಿದ್ದೇನೆ.

ವಿಷಯ ಮಂಡನೆಗೂ ಮುನ್ನ ಲೇಖಕರ ಪರಿಚಯವನ್ನು ತಿಳಿದುಕೊಳ್ಳೋಣ. ಕೃಷ್ಣರಾಜಪೇಟೆ ತಾಲ್ಲೋಕಿನ ಮಾರೇನಹಳ್ಳಿ ಗ್ರಾಮದ ಶ್ರೀ ಲೋಕೇಶ್ (ಮಾರೇನಹಳ್ಳಿ ಲೋಕೇಶ್) ರವರು ವೃತ್ತಿಯಲ್ಲಿ ಶಿಕ್ಷಕರರಾಗಿದ್ದು, ಭಾರತೀಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಾಲೂಕಿನಲ್ಲಿ ಮಕ್ಕಳ ಸಾಹಿತಿಯೆಂದೇ ಗುರುತಿಸಿಕೊಂಡಿರುವ ಶ್ರೀಯುತರು ಪುಟ್ಟನ ಪ್ರಾಸಗಳು, ಈ ಹಾಡು ನಿಮಗಾಗಿ, ಬೆಕ್ಕಿನ ಬೆಟ್ಟ, ನನ್ನದೇಶ ನನ್ನಜನ, ಬಸವಗೀತೆಗಳು, ಸಾಸಲು ಶಂಭುಲಿಂಗೇಶ್ವರ ಭಕ್ತಿಗೀತೆಗಳು ಸೇರಿದಂತೆ ಇದುವರೆಗೂ 40ಕ್ಕೂ ಹೆಚ್ಚು ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ. ಈ ಶಾಲೆಯಲ್ಲೂ ವಿವಿಧ ರೀತಿಯ ಕ್ರಿಯಾತ್ಮಕ ಚಟುವಟಿಕೆಗಳ ಮೂಲಕ ಮಕ್ಕಳ ಮನಗೆದ್ದಿರುವ ಇವರು, ಸದ್ದಿಲ್ಲದೇ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ಪರಿಯು ಅನನ್ಯ. ನಾಡು ನುಡಿ ಸಂಸ್ಕೃತಿಗಳ ಉಳಿವಿಗೆಂದೇ ಜನ್ಮತಾಳಿರುವ ಸಂಸ್ಥೆಗಳು ಬದಲಾದ, ವ್ಯವಸ್ಥೆಯೊಳಗೆ ಬದಲಾದ ರೀತಿಯಲ್ಲಿ ತಮ್ಮ ಕಾರ್ಯದಲ್ಲಿ ತೊಡಗಿರುವ ಸಂದರ್ಭದಲ್ಲಿ ಇವುಗಳಿಂದಾಚೆ ತಾವೇ ಸ್ವತಃ

ಮಕ್ಕಳ ಸಾಹಿತ್ಯ ವೇದಿಕೆ, ಅತ್ತಿಗುಪ್ಪೆ ಸಾಹಿತ್ಯ ಬಳಗ ಎಂಬ ಹೆಸರುಗಳಲ್ಲಿ ಸದ್ದಿಲ್ಲದೇ ನಾಡುನುಡಿಗಳ ಸೇವೆ ಮಾಡುತ್ತಿರುವ ಇವರ ಕಾರ್ಯ ಪ್ರಶಂಸನೀಯ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ 20ನೆಯ ಶತಮಾನ ಅತ್ಯಂತ ವಿಶಿಷ್ಟವಾದದ್ದು. ಈ ಸಂದರ್ಭದಲ್ಲಿ ಮಹಾಕಾವ್ಯ, ಭಾವಗೀತೆ, ಸಣ್ಣಕತೆ, ಕಾದಂಬರಿ, ಪ್ರಬಂಧ ನಾಟಕ, ವಿಚಾರ ಸಾಹಿತ್ಯ ಮೊದಲಾದವುಗಳನ್ನು ಮೈಗೂಡಿಸಿಕೊಂಡು ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ. ಇವುಗಳಲ್ಲಿ ಮಕ್ಕಳ ಸಾಹಿತ್ಯವು ಗಮನಾರ್ಹವಾದುದು. ಇಲ್ಲಿರುವಂತಹ ಎಲ್ಲಾ ಪ್ರಶಿಕ್ಷಣಾರ್ಥಿಗಳು ಕೂಡ ಮಕ್ಕಳ ಸಾಹಿತ್ಯವನ್ನು ಕೇಳುವುದರ ಜೊತೆಗೆ ಓದಿಕೊಂಡು ಕೂಡ ಬಂದಿದ್ದಿವಿ, ಹಾಗಾದರೆ ಮಕ್ಕಳ ಸಾಹಿತ್ಯ ಎಂದರೇನು? ಮಕ್ಕಳ ಸಾಹಿತ್ಯ ಅಂದರೆ ಹೇಗಿರುತ್ತೆ ಎನ್ನುವುದನ್ನು ಯೋಚನೆ ಮಾಡಬೇಕು.

ಮಕ್ಕಳ–ಸಾಹಿತ್ಯ ಎಂದರೆ ಮಕ್ಕಳ ಕುರಿತಾಗಿ ಅಥವಾ ಮಕ್ಕಳಿಗಾಗಿಯೇ ರಚಿಸಿದ ಸಾಹಿತ್ಯ ಎಂದು ಹೇಳಬಹುದು. ಇನ್ನು ವಿಸ್ತರಿಸಿ ಹೇಳುವುದಾದರೆ ಮಕ್ಕಳ ಸಾಹಿತ್ಯವು ಪ್ರಮುಖವಾಗಿ ಮಕ್ಕಳ ಮನೊರಂಜನೆಗಾಗಿ ಮಾತ್ರವಲ್ಲದೆ, ಅವರ ಬೌದ್ಧಿಕ ವಿಕಾಸಕ್ಕಾಗಿ ಮತ್ತು ಭಾಷಾ ಬೆಳವಣಿಗೆಗಾಗಿಯೇ ಇರುವ ಒಂದು ಸಾಹಿತ್ಯ.

ಮಕ್ಕಳ ಸಾಹಿತ್ಯ ರಚನೆಯು ಮಕ್ಕಳಾಟಿಕೆಯ ವಿಷಯವಲ್ಲ, ಮಕ್ಕಳ ಮನೋಭೂಮಿಕೆ ಬೇರೆ ಬೇರೆಯಾಗಿರುತ್ತದೆ. ಇದಕ್ಕೆ ತಕ್ಕ ಹಾಗೆ ಸಾಹಿತ್ಯ ರಚಿಸುವುದು ಒಂದು ಸವಾಲು ಅಂತಹದರಲ್ಲಿಯೂ ನಮ್ಮ ಲೇಖಕರು ಮಕ್ಕಳ ಸಾಹಿತ್ಯ ಕೃತಿಗಳನ್ನು ರಚಿಸಿರುವುದು ಮತ್ತು ಅದನ್ನು ಪ್ರಕಟಿಸಿರುವುದು ಪ್ರಶಂಸನೀಯ, ನಮಗೆ ಮಕ್ಕಳ ಸಾಹಿತಿಗಳು ಎಂದರೆ ನೆನಪಾಗುತ್ತಿದ್ದು ಪಂಜೆಮಂಗೇಶರಾಯರು ಹಾಗೂ ಜಿ.ಪಿ ರಾಜರತ್ನಂ. ಆದರೆ ಈ ಒಂದು ಮಕ್ಕಳ ಸಾಹಿತ್ಯವನ್ನು ಓದಿದ ನಂತರ ನಮ್ಮ ತಾಲ್ಲೂಕಿನಲ್ಲೂ ಮಕ್ಕಳ ಸಾಹಿತಿಗಳು ಇದ್ದಾರೆ ಎಂದು ಹೇಳುವುದು ನಮ್ಮ ತಾಲ್ಲೂಕಿಗೆ ಹಾಗೂ ನಮಗೆ ಹೆಮ್ಮೆಯ ವಿಷಯ.

ಮೊದಲಿಗೆ ನಮ್ಮ ಸಾಹಿತಿಗಳು ರಚಿಸಿರುವ ಮಕ್ಕಳ ಸಾಹಿತ್ಯದ ಕೃತಿಗಳಲ್ಲಿ ಒಂದಾದ "ಪುಟ್ಟನ ಪ್ರಾಸಗಳನ್ನು" ನೋಡುವುದಾದರೆ.

***ಕನ್ನಂಬಾಡಿ***

***ಮಂಡ್ಯ ಜಿಲ್ಲೆಯ ಕನ್ನಂಬಾಡಿ***

***ಊಟಕೆ ಕುಳಿತರೆ ಹೊಟ್ಟೆಕೊಡಿ***

***ಮಂಡ್ಯ ಜಿಲ್ಲೆಯ ಈ ಮೋಡಿ***

***ವಿಶ್ವೇಶ್ವರಯ್ಯನ ಸ್ಮರಣೆ ಮಾಡಿ***

ಈ ಮೇಲಿನ ಸಾಲುಗಳ ಮೂಲಕ ಕನ್ನಂಬಾಡಿ ಮಂಡ್ಯ ಜಿಲ್ಲೆಯಲ್ಲಿದೆ ಮಂಡ್ಯ ಜಿಲ್ಲೆಯ ಜನರು ಎಲ್ಲದರಲ್ಲೂ ಒಂದು ಕೈ ಮೇಲೂ ಅದೇ ರೀತಿ ಊಟದ

ವಿಷಯದಲ್ಲೂ ಕೂಡ ಮತ್ತು ಅದನ್ನು ಕಟ್ಟದವರು ವಿಶ್ವೇಶ್ವರಯ್ಯ ಎಂಬುದನ್ನು ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಪ್ರಾಸಗಳ ಮೂಲಕ ತಿಳಿಸಿದ್ದಾರೆ.

**ಗುಬ್ಬಚ್ಚಿ**

**ಅಯ್ಯೋ......**

**ಪಾಪ ಗುಬ್ಬಚ್ಚಿ**

**ಬಸ್ಸಿಗೆ**

**ಸಿಕ್ಕಿ ಅಪ್ಪಚ್ಚಿ:**

ಈ ಮೇಲಿನ ಸಾಲುಗಳ ಮೂಲಕ ಮಕ್ಕಳಿಗೆ ಒತ್ತಕ್ಷರಗಳ ಪರಿಚಯವನ್ನು ಪ್ರಾಸಬದ್ದವಾಗಿ ಮಕ್ಕಳಿಗೆ ಸಂತೋಷವಾಗುವ ರೀತಿಯಲ್ಲಿ ಬರೆದಿದ್ದಾರೆ.

***ಹಿಂಗೇ..... ಹಿಂಗೇ***

***ಅವ್ವ ದ್ವಾಸೆ ಹುಯ್ಯಂಗೆ***

***ಅಪ್ಪ ಮೀಸೆ ಬಿಟ್ಟಂಗೆ***

***ಛೇರ್ಮನ್ ಬಿದ್ದು ಎದ್ದಂಗೆ***

***ಕದ್ದು ತಂಗಳ ತಿಂದಂಗೆ***

***ತಿನ್ನಲು ಸಿಕ್ಕಿಬಿದ್ದಂಗೆ***

***ಬಿದ್ದೋರೆಲ್ಲಾ ಎದ್ದಂಗೆ***

***ಎದ್ದೋರೆಲ್ಲಾ ಬಿದ್ದಂಗೆ***

***ಮಕ್ಕಳೆಂದರೆ ಹಿಂಗೇ..... ಹಿಂಗೇ......***

ನಮಗೆ ಗೊತ್ತಿರುವ ಹಾಗೆ ಮೂರರಿಂದ ಆರು ವರ್ಷದ ವಯಸ್ಸಿನ ಮಕ್ಕಳಲ್ಲಿ ಭಾಷಾ ಬೆಳವಣಿಗೆ ಕಡಿಮೆ ಇರುತ್ತದೆ ಮತ್ತು ಆ ವಯಸ್ಸಿನ ಮಕ್ಕಳಲ್ಲಿ ಪ್ರಾಣಿ ಪಕ್ಷಿಗಳ ಬಗ್ಗೆ ಕೂತೂಹಲವಿರುತ್ತದೆ. ಅಂತಹ ಸಂದರ್ಭದಲ್ಲಿ ನಮ್ಮ (ಲೇಖಕರು) ಸಾಹಿತಿಗಳು ಅವರು ರಚಿಸಿರುವಂತಹ ಪುಟ್ಟನ ಪ್ರಾಸಗಳಲ್ಲಿ ಸರಳ ಹಾಗೂ ಪ್ರಾಸ ಪದಗಳ ಬಳಕೆ ಮಾಡಿರುವುದರಿಂದ ಮಕ್ಕಳಿಗೆ ಸಂತೋಷವನ್ನು ನೀಡುವುದರ ಜೊತೆಗೆ ಪ್ರಾಸ ಪದಗಳ ಕಲಿಕೆ, ಪದಗಳ ಉಚ್ಚಾರ, ಜ್ಞಾಪಕಶಕ್ತಿ, ಏಕಾಗ್ರತೆಯನ್ನು ಮಕ್ಕಳಲ್ಲಿ ಹೆಚ್ಚಿಸಲು ಸಹಾಯವಾಗಿವೆ.

ಬಹುಶಃ ಲೇಖಕರು, ಶಿಕ್ಷಕಸಾಹಿತಿಗಳು ಆದ ಕಾರಣ ಅವರಿಗೆ ತಮ್ಮ ಮಕ್ಕಳ ಜೊತೆ ಒಡನಾಟ ಇರುತ್ತದೆ ಮತ್ತು ಮಕ್ಕಳ ಮನಃಸ್ಥಿತಿಯನ್ನು ಅರ್ಥಮಾಡಿಕೊಂಡು ಅವರಿಗೆ ಅರ್ಥವಾಗುವ ಸರಳ ಭಾಷೆ ಹಾಗೂ ಪದಗಳನ್ನು ಉಪಯೋಗಿಸುವ ಮೂಲಕ ಎಲ್ಲಾ ಮಕ್ಕಳಿಗೂ ಅರ್ಥವಾಗುವ ರೀತಿಯಲ್ಲಿ ಈ ಒಂದು ಪುಟ್ಟನ ಪ್ರಾಸಗಳು ಕೃತಿಯನ್ನು ರಚನೆ ಮಾಡಿದ್ದಾರೆ ಎಂಬುದು ನನ್ನ ಗ್ರಹಿಕೆ.

ನಂತರ ಸಾಹಿತಿಗಳು ಬರೆದಿರುವ ಇನ್ನೊಂದು ಕೃತಿ "ಈ ಹಾಡು ನಿಮಗಾಗಿ" ಎಶಂಬುದನ್ನು ನೋಡುವುದಾದರೆ, ಒಂಬತ್ತರಿಂದ ಹದಿಮೂರು ವರ್ಷ ವಯಸ್ಸಿನ ಮಕ್ಕಳು ಅಕ್ಷರ ಬಲ್ಲವರು ಹಾಗೂ ಒಂದಿಷ್ಟು ತಿಳುವಳಿಕೆ ಉಳ್ಳವರು ಆಗಿರುತ್ತಾರೆ. ಇಂಥ ಮಕ್ಕಳಿಗೆ ಸ್ನೇಹ, ಸಹಕಾರ, ರಾಷ್ಟ್ರಪ್ರೇಮ , ಗೌರವ ,ಪರಿಸರ ಪ್ರೇಮ, ಪ್ರಾಮಾಣಿಕತೆ  ಮೊದಲಾದ ಮೌಲ್ಯಗಳನ್ನು ಬಿತ್ತುವ ಗೀತೆಗಳ ರಚನೆಯನ್ನು ಕವಿ ಈ ಕೃತಿಯಲ್ಲಿ ರಚನೆ ಮಾಡಿರುವುದನ್ನು ನೋಡಬಹುದು.

*ಪರಿಸರ ಗೀತೆ*

*ಹೂಗಿಡ ಸಸಿಗಳ ಬೆಳೆಸೋಣ*

*ಮಣ್ಣಿನ ಸವೆತವ ತಡೆಯೋಣ*

*ಕಾಡು ಮೃಗಗಳ ಉಳಿಸೋಣ*

*ಪರಿಸರ ರಕ್ಷಣೆ ಮಾಡೋಣ*

*ನಿರ್ಮಲ ಚಿತ್ತದಿ ಬದುಕೋಣ*

*ದುಷ್ಟರ ಮೆಟ್ಟಿ ನಿಲ್ಲೋಣ*

*ಸಹ ಬಾಳ್ವೆಯ ದನಿಯಲಿ ಕೂಡೋಣ*

*ನಾಡಿನ ಉಳಿವಿಗೆ ಸಾಗೋಣ*

*ಹಸಿರೇ ಉಸಿರಿದು ಎನ್ನೋಣ*

*ಹೂಗಿಡ ಸಸಿಗಳ ಬೆಳೆಸೋಣ.*

ಪ್ರಕೃತಿಗೆ ಸೊಬಗು ನೀಡುವಂತಹ ಗಿಡ ಮರಗಳ ನೆಟ್ಟು ಅದರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಕಾಡು ಬೆಳೆಸಿ ನಾಡು ಉಳಿಸಿ, ಹಸಿರೇ ಉಸಿರು ಎಂಬ ಅಂಶಗಳನ್ನು ಮಕ್ಕಳಿಗೆ ತಿಳಿಸುವ ಮೂಲಕ ಮಕ್ಕಳಿಗೆ ಪರಿಸರ ಸಂರಕ್ಷಣೆಯ ಬಗ್ಗೆ ತಿಳಿಸುವಂತಹ ಒಂದು ಕಾರ್ಯವನ್ನು ಈ ಒಂದು ಗೀತೆಯ ಮೂಲಕ ನಮ್ಮ ಸಾಹಿತಿಗಳು ಮಾಡಿದ್ದಾರೆ.

*ದಿಕ್ಕುಗಳು :–*

*ಮೂಡಣ ಮೂಡಣ*

*ಪೂರ್ವ ದಿಕ್ಕು ಕಾಣಣ್ಣ*

*ಪಡುವಣ ಪಡುವಣ*

*ಪಶ್ಚಿಮ ದಿಕ್ಕು ಹೇಳಣ್ಣ*

*ತೆಂಕಣ ತೆಂಕಣ*

*ದಕ್ಷಿಣ ದಿಕ್ಕು ಧರ್ಮಣ್ಣ*

*ಬಡಗಣ ಬಡಗಣ*

*ಉತ್ತರ ದಿಕ್ಕು ತಿಳಿಯಣ್ಣ*

ಇಲ್ಲಿ ದಿಕ್ಕುಗಳ ಪರಿಚಯವನ್ನು ಕವನ ರೂಪದಲ್ಲಿ ಬರೆದಿರುವುದರಿಂದ ಮಕ್ಕಳು ಅದನ್ನು ಹಾಡುವುದರ ಜೊತೆಗೆ ಅವುಗಳ ಬಗ್ಗೆ ತಿಳಿದುಕೊಳ್ಳುತ್ತಾರೆ. ನಾವು ಬಳಸುವಂತಹ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಇವೆಲ್ಲವು ಸಂಸ್ಕೃತ ಪದಗಳು ಮತ್ತು ಮೂಡಣ, ಪಡುವಣ, ತೆಂಕಣ, ಬಡಗಣ ಇವೆಲ್ಲವೂ ಕನ್ನಡದ ಪದಗಳು. ಇವುಗಳನ್ನು ಮಕ್ಕಳು ಪದ್ಯದಲ್ಲಿ ಪ್ರಾಸ ಪದಗಳ ಮುಖಾಂತರ ತಿಳಿದುಕೊಳ್ಳುವುದರಿಂದ ಮಕ್ಕಳು ಕನ್ನಡದಲ್ಲಿಯೂ ಕೂಡ ದಿಕ್ಕುಗಳನ್ನು ತಿಳಿದುಕೊಳ್ಳಲು ಸಾಧ್ಯ.

ಈ ಎರಡು ಕೃತಿಗಳನ್ನು ಒಟ್ಟಾಗಿ ಅವಲೋಕಿಸುವುದಾದರೆ ಮಕ್ಕಳಿಗೆ ನೈತಿಕ ಅಂಶಗಳನ್ನು ತಿಳಿಸುವಂತಹ ಮತ್ತು ಸಂತೋಷವಾಗುವ ರೀತಿಯಲ್ಲಿ ಮಕ್ಕಳ ಮುಗ್ಧತೆಯನ್ನು ಸರಳ ಸುಂದರವಾಗಿ ತಮ್ಮ ಕವಿತೆಗಳಲ್ಲಿ ಹೇಳುವ ಮೂಲಕ ತಮ್ಮ ಸಾಹಿತ್ಯಾಸಕ್ತಿಯನ್ನು ವ್ಯಕ್ತಪಡಿಸಿರುವುದನ್ನು ನೋಡಬಹುದು.

ಕನ್ನಡದಲ್ಲಿ ಸಮೃದ್ಧವಾದ ಮಕ್ಕಳ ಸಾಹಿತ್ಯ ರಚನೆಯಾಗಿದೆ. ಆದರೂ ಮಕ್ಕಳು ಇದರ ಪ್ರಯೋಜನವನ್ನು ಸರಿಯಾಗಿ ಪಡೆದುಕೊಳ್ಳುತ್ತಿಲ್ಲವೆಂದು ಹೇಳಲು ವಿಷಾದವೆನಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಇಂದಿನ ವಿದ್ಯಾಭ್ಯಾಸ, ಇದರಲ್ಲಿ ಪೋಷಕರು ಕೂಡ ಪಾಲುದಾದರೇ ಅಲ್ಲದೇ ವಿದ್ಯುನ್ಮಾನ ಮಾಧ್ಯಮಗಳಿಗೆ ಮಾರು ಹೋದ ಮಕ್ಕಳ ಕವಿತೆಗಳ ಭಾವ ಪ್ರಪಂಚದಿಂದ ವಂಚಿತರಾಗಿ ಯಾಂತ್ರಿಕವಾಗುತ್ತಿದ್ದಾರೆ.

ಹೀಗಾಗಿ ಅವರಲ್ಲಿ ಆದರ್ಶ, ಕಲ್ಪನೆ, ಹೃದಯವಂತಿಕೆಗಳು ಕಡಿಮೆಯಾಗುತ್ತಿವೆ. ನಮಗೆ ಗೊತ್ತಿರುವ ಹಾಗೆ ಭಾರತದಂತಹ ಭವ್ಯ ಭವಿಷ್ಯಗಳ ನಿರ್ಮಾಣ ಶಾಲೆಯ ಕೊಠಡಿಗಳಲ್ಲಿ ಆಗುತ್ತೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಹಾಗಾಗಿ ಭಾರತ ದೇಶಕ್ಕೆ ಸತ್ಪ್ರಜೆಗಳನ್ನು ನೀಡುವಂತಹ ಜವಾಬ್ದಾರಿ ಶಿಕ್ಷಕರಾದ ನಮ್ಮ ಮೇಲೆ ಇದೆ. ಹಾಗಾಗಿ ಆಧುನಿಕ ವಿದ್ಯಾಭ್ಯಾಸದ ಜೊತೆ ಜೊತೆಗೆ ಮಕ್ಕಳಲ್ಲಿ ಕವಿತೆಗಳ ಆಸ್ವಾದನೆಯ ರುಚಿ ತಿಳಿಸಿ ಕೊಟ್ಟರೆ ಅವರು ಇನ್ನು ಉತ್ತಮ ರೀತಿಯಲ್ಲಿ ವಿದ್ಯಾವಂತರು ಹೃದಯವಂತರನ್ನಾಗಿ ಮಾಡುವುದು ಶಿಕ್ಷಕರಾದ ನಮ್ಮ ಕರ್ತವ್ಯ ಮತ್ತು ಜವಾಬ್ಧಾರಿಯೂ ಕೂಡ ಹೌದು.

**ಪೂರ್ಣಿಮ.ಬಿ.ಆರ್**
D/o ರಂಗಸ್ವಾಮಿ
ಬಣ್ಣೇನಹಳ್ಳಿ, ಬೂಕನಕೆರೆ (ಹೋ),
ಕೆ.ಆರ್.ಪೇಟೆ ತಾಲ್ಲೂಕು
ಮೊ : 9741638683

# ಮಾರೇನಹಳ್ಳಿ ಲೋಕೇಶ್ ಅವರ ಕನ್ನಡದ ನಿರೀಕ್ಷೆಗಳು ಕವನ ಕುರಿತು

ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕು ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಐತಿಹಾಸಿಕವಾಗಿ, ಸಾಮಾಜಿಕವಾಗಿ ತನ್ನದೇ ಆದಂತಹ ಇತಿಹಾಸವನ್ನು ಹೊಂದಿದೆ. ಅದರಲ್ಲೂ ಸಾಹಿತ್ಯ ಕ್ಷೇತ್ರದಲ್ಲಿ ತನ್ನದೇ ಆದಂತಹ ಸಾಧನೆಯನ್ನು ಮಾಡಿದೆ ಎಂದರೆ ತಪ್ಪಾಗುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ನಾವು ಹೆಸರಾಂತ ಕವಿಗಳನ್ನು ಕಾಣಬಹುದಾಗಿದೆ. ನಮ್ಮ ತಾಲ್ಲೂಕು ನಮ್ಮ ಹೆಮ್ಮೆ.

ಮಕ್ಕಳ ಸಾಹಿತ್ಯವು ಮಕ್ಕಳ ಮನಸ್ಸನ್ನು ಅರಳಿಸಿ, ಕುತೂಹಲವನ್ನು ಕೆರಳಿಸಿ, ಕಲ್ಪನೆಯನ್ನು ರೂಪಿಸಿ, ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ ಮೀಯಿಸಿ ಅವರ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯ ಎನ್ನಬಹುದು. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಬೇರನ್ನು ಜಾನಪದ ಪರಂಪರೆಯಲ್ಲಿಯೇ ಕಾಣಬಹುದು, ಅಜ್ಜಿ ಹೇಳುವ ಲಾಲಿ ಪದಗಳು, ಪ್ರಾಸಬದ್ಧವಾದ ಆಟದ ಪದಗಳು, ಒಗಟುಗಳು, ಕಥೆಗಳು, ಕಾಗಕ್ಕ ಗೂಬಕ್ಕನ ಕಥೆಗಳು ಇವೆಲ್ಲ ಮಕ್ಕಳ ಮನಸ್ಸನು ಉಲ್ಲಾಸಗೊಳಿಸುತ್ತವೆ, ಅದರಲ್ಲೂ ಇಂದಿನ ಆಧುನಿಕ ಕಾಲದಲ್ಲಿ ಮುದ್ರಣ ಕಲೆ ಬಂದ ಮೇಲೆ ಮಕ್ಕಳ ಸಾಹಿತ್ಯ ವಿಫುಲವಾಗಿ ಬೆಳೆಯಿತು ಎನ್ನಬಹುದು.

ಮಕ್ಕಳ ಸಾಹಿತ್ಯ ಎಂಬುದು ಶಾಲಾ ಮಕ್ಕಳಿಗೆ ಬೇಕಿರುವ ಸಾಧನ. ಕನ್ನಡವನ್ನೆ ಮರೆಯುತ್ತಿರುವ ಈ ಕಾಲದಲ್ಲಿ ಇನ್ನೂ ಸಾಹಿತ್ಯವನ್ನು ಎಲ್ಲಿ ನೆನಪಿಸಿಕೊಳ್ಳುವರು. ಮುಂದಿನ ಭವಿಷ್ಯದಲ್ಲಿ ಆದರೂ ಕನ್ನಡ ಸಾಹಿತ್ಯ ಬೆಳೆದು, ಉಳಿಯಬೇಕೆಂದರೆ ಶಾಲೆಗಳಲ್ಲಿ ಪಠ್ಯದ ಜೊತೆ ಜೊತೆಗೆ ಮಕ್ಕಳ ಸಾಹಿತ್ಯವನ್ನು ಬಳಸಿ ಬೆಳಸಬೇಕು.

ಮಕ್ಕಳ ಸಾಹಿತ್ಯವನ್ನು ಬೆಳೆಸಬೇಕೆಂದರೆ ಮುಂದೆ ಶಿಕ್ಷಕರಾಗುವಂತಹ ಸಂದರ್ಭದಲ್ಲಿ ಯಾವುದೇ ವಿಷಯವನ್ನು ಬೋಧಿಸುತ್ತಿದ್ದರು ಅದರಲ್ಲಿ ಕನ್ನಡ ಸಾಹಿತ್ಯವನ್ನು ಬಳಕೆ ಮಾಡಬೇಕು. ಕನ್ನಡ ಸಾಹಿತ್ಯ ಎಂದರೆ ನಾಟಕ, ಗಾದೆ, ಒಗಟು, ಪ್ರಬಂಧ, ಕಥೆ, ಹಾಡು, ಕವನ, ಕಾದಂಬರಿ ಮುಂತಾದ ಅಂಶಗಳ ಬಗ್ಗೆ ತಿಳಿಸಬೇಕಾಗುತ್ತದೆ.

ಅದರ ಮುಖಾಂತರವಾಗಿ ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡಬಹುದು ಮತ್ತು ಆ ಬೋಧನೆಯು ಮಕ್ಕಳಿಗೆ ಹೆಚ್ಚು ಕಾಲ ನೆನಪಿನಲ್ಲಿ ಉಳಿಯಲು ಸಾಧ್ಯವಾಗುತ್ತದೆ.

ಇಂದು ಹಮ್ಮಿಕೊಂಡಿರುವ ಸಾಹಿತ್ಯ ಸಂಭ್ರಮ ಕಾರ್ಯಕ್ರಮದಲ್ಲಿ ನಾನು " ಮಾರೇನಹಳ್ಳಿಯ ಲೋಕೇಶ್ ಅವರು ರಚಿಸಿರುವಂತಹ ಅದ್ಭುತವಾದಂತಹ ಕೃತಿ ನನ್ನ ದೇಶ ನನ್ನ ಜನ ಕನ್ನಡದ ನಿರೀಕ್ಷೆಗಳು ಕವನ ತೆಗೆದುಕೊಂಡು ವಿಚಾರ ಮಂಡನೆ ಮಾಡಲು ಮುಂದಾಗಿದ್ದೇನೆ. ಇಲ್ಲಿ ಮಾರೇನಹಳ್ಳಿಯ ಲೋಕೇಶ್ ರವರು ರಚಿಸಿರುವಂತಹ ಸಮಗ್ರ ಸಾಹಿತ್ಯದಲ್ಲಿ ಮಕ್ಕಳ ಪ್ರಾಸ ಹಾಡುಗಳು, ಆಧ್ಯಾತ್ಮಿಕತೆ, ರೈತರ ಬಗ್ಗೆ, ದೇಶಪ್ರೇಮದ ಬಗ್ಗೆ, ಧಾರ್ಮಿಕ ಸಂಗತಿಗಳು ಮತ್ತು ಮಕ್ಕಳ ಕುರಿತಾದ ಸಾಹಿತ್ಯವನ್ನು ನಾವು ಕಾಣಬಹುದಾಗಿದೆ.

## ವಿಚಾರ ಮಂಡನೆ – ಮಕ್ಕಳ ಸಾಹಿತ್ಯ

ಒಂದು ತುಣುಕು – ಕನ್ನಡದ ನಿರೀಕ್ಷೆಗಳು = ಈ ಕೃತಿಯಲ್ಲಿ ಬರುವ

"ಬಡ ರಾಷ್ಟ್ರವಾದರೇನಂತೆ, ಶ್ರೀಮಂತವಾಗಿ ಸಾಹಿತ್ಯವಿದೆಯಲ್ಲ" ಎಂಬ ನುಡಿಯನ್ನು ನುಡಿಯುತ್ತ, ಮಾರೇನಹಳ್ಳಿಯ ಲೋಕೇಶ್ ಅವರು ರಚಿಸಿರುವ ಪಕ್ಷದಲ್ಲಿ " ಮಕ್ಕಳ ಸಾಹಿತ್ಯ" ಎಂಬ ಅದ್ಭುತ ಕೃತಿಯಲ್ಲಿ " ಕನ್ನಡದ ನಿರೀಕ್ಷೆಗಳು" ಕನ್ನಡಕ್ಕಿರುವ ಸ್ಥಾನ ಮಾನವೇನು? ಮುಂದಿನ ದಿನಗಳಲ್ಲಿ ಶಿಕ್ಷಕರಾಗಿ ಹೋಗುವ ನಮಗೆ ಕನ್ನಡವನ್ನು ಬೆಳೆಸುವ ಮತ್ತು ಉಳಿಸುವ ಜವಾಬ್ದಾರಿ ಎಷ್ಟಿದೆ ಎಂಬುದನ್ನು ತುಂಬಾ ಸೊಗಸಾಗಿ "ಕನ್ನಡದ ನಿರೀಕ್ಷೆಗಳು" ಕವನದಲ್ಲಿ ವರ್ಣಿಸಿದ್ದಾರೆ.

ಎಲ್ಲಿದೆ ಕನ್ನಡ? ಹೇಗಿದೆ ಕನ್ನಡ? ಏನಾಗಿದೆ ಈ ಕನ್ನಡಿಗರಿಗೆ? ಕರ್ನಾಟಕವಿದೆ ನಮ್ಮ ಸಂಗಡ ಏತಕ್ಕೆ ಬೇಕು ಬೇರೆ ಪಂಗಡ ? ಉಸಿರು ಕನ್ನಡ, ಹಸಿರು ಕನ್ನಡ ನೆಲ, ಜಲ, ಗಾಳಿ, ಬದುಕು ಕನ್ನಡ ಕವಿ ಋಷಿ ಕನ್ನಡ ಜಾನಪದ ಕನ್ನಡ ವಚನ ಸಾಹಿತ್ಯ ಪ್ರಯೋಗ ಕನ್ನಡ, ಶಿವ ಕೋಟ್ಯಾಚಾರ್ಯ, ಪಂಪ, ರನ್ನ, ಪೊನ್ನ, ಜನ್ನರ ಕವಿ ಕಾವ್ಯ ಕನ್ನಡ ಓದದ, ತಿಳಿಯದ ಕೇಳದ ಮಂದಿಗೆ ಪರಿಚಯವೆಲ್ಲಿ?

ಕನ್ನಡ ಎಂಬ ಪದವನ್ನು ಕೇಳಲು ಮೈ ರೋಮಾಂಚನವಾಗುತ್ತದೆ. ಅಂತಹ ಅದ್ಭುತ ಭಾಷೆ ಇಂದು ಎಷ್ಟರ ಮಟ್ಟಿಗೆ ಮಹತ್ವವನ್ನು ಪಡೆದಿದೆ, ಕನ್ನಡ ಎಂಬ ಭಾಷೆಯು ಈಗ ಯಾವ ಸ್ಥಾನವನ್ನು ಪಡೆದಿದೆ, ಅದು ಯಾವ ರೀತಿ ಇದೇ ಎಂಬುದನ್ನು ಈ ಸಾಹಿತ್ಯದಲ್ಲಿ ನಾವು ನೋಡಬಹುದು.

ಇಂದಿನ ಕಾಲಘಟ್ಟದಲ್ಲಿ ನಮ್ಮ ರಾಜ್ಯದಲ್ಲಿಯೇ ನಾವು ಹೆಚ್ಚು ಕನ್ನಡ ಮಾತನಾಡುವ, ಬಳಸುವ ಜನರನ್ನು ಕಾಣುವುದು ಕಡಿಮೆಯಾಗಿದೆ. ಬೇರೆ ಭಾಷೆಗಳ ವ್ಯಾಮೋಹಕ್ಕೆ ಹೋಗಿ ನಮ್ಮ ಜನ ಇಂದು ಕನ್ನಡ ಎಂಬ ಅದ್ಭುತವಾದ ಭಾಷೆ ಇದೆ ಎಂಬುದು ಒಂದು ಕಲ್ಪನೆಯಾಗಿದೆ ಏಕೆಂದರೆ ಇಂದಿನ ಪೋಷಕರು ಕನ್ನಡಕ್ಕೆ ಹೆಚ್ಚು ಪ್ರಾತಿನಿಧ್ಯಯನ್ನು ನೀಡುವುದನ್ನು ಬಿಟ್ಟಿದ್ದಾರೆ ಎಂದರ್ಥವಲ್ಲ, ಬೇರೆ ಭಾಷೆಯನ್ನು ಗೌರವದಿಂದ ಕಾಣಿ ಆದರೆ ನಮ್ಮ ಭಾಷೆಯ ಮೇಲೆ ಬಾಂದವ್ಯವಿರಲಿ ಆಗ ಮಾತ್ರ ನಾವು ಕನ್ನಡವನ್ನು ಉಳಿಸಲು ಬೆಳೆಸಲು ಸಾಧ್ಯ ಇಲ್ಲವಾದರೆ ನಮ್ಮ ಕೈಯಿಂದ ನಾವೇ ನಮ್ಮ ಭಾಷೆಯನ್ನು ಕೊಂದಹಾಗೆ. ಕನ್ನಡ ಭಾಷೆ ಎಂಬುದು ಊಟಕ್ಕೆ ಉಪ್ಪಿನಕಾಯಿಯಾಗಿರದೆ ಊಟವೇ ಆಗಿರಲಿ ಎಂಬುದು ನನ್ನ ಆಕಾಂಕ್ಷೆ.

ಕನ್ನಡ ಎಂಬುದು ನಮಗೆ ಯಾವ ರೀತಿಯಾಗಿರಬೇಕು ಎಂದರೆ ಅದು ನಮ್ಮ ಬದುಕಾಗಿರಬೇಕು ಏಕೆಂದರೆ ನಾವು ಇರುವ ನೆಲ, ಜಲ, ಗಾಳಿ, ಎಲ್ಲವೂ ಕನ್ನಡ ತಾಯಿಯಾ ಭಿಕ್ಷೆ ಅದನ್ನು ನಾವು ಮಣ್ಣಲ್ಲಿ ಮಣ್ಣಾಗುವವರೆಗೂ ಉಳಿಸಿಕೊಳ್ಳಬೇಕು. ಕನ್ನಡ ಎಂಬುದು ಒಂದು ಅದ್ಭುತವಾದ ಜ್ಞಾನ ಭಂಡಾರ ಅದನ್ನು ವಿವರಿಸಲು ಎಂದಿಗೂ ಸಾದ್ಯವಿಲ್ಲ. ನಾವು ಕನ್ನಡದಲ್ಲಿ ಅನೇಕ ಪ್ರಸಿದ್ಧ ಕವಿಗಳನ್ನು ಕಾಣುತ್ತೇವೆ ಅವರು ಬರೆದಿರುವ ಕೃತಿಗಳು ಕನ್ನಡಕ್ಕೆ ಮೆರುಗು ತರುವಂತೆ ಇವೆ. ಒಂದು ಕೃತಿ ಕರ್ನಾಟಕದ ಎಲ್ಲೆಯನ್ನೇಳಿದರೆ ಮತ್ತೊಂದು ಕೃತಿ ಮಹತ್ವವನ್ನು ತಿಳಿಸುತ್ತದೆ.

ಅದೇ ರೀತಿ ಕನ್ನಡದಲ್ಲಿ ನಾವು ಹಲವಾರು ವಚನಕಾರರನ್ನು ಕಾಣಬಹುದು ಉದಾ : ಬಸವಣ್ಣ ಅಕ್ಕಮಹಾದೇವಿ, ಅಲ್ಲಮ ಪ್ರಭು ಮುಂತಾದವರು ಇವರುಗಳು ತಮ್ಮ ವಚನಗಳಲ್ಲಿ ಸರಳ ರೀತಿಯಲ್ಲಿ ಜನರಿಗೆ ತಲುಪುವ ರೀತಿಯಲ್ಲಿ ಅನೇಕ ಸಂದೇಶಗಳನ್ನು ಸಾರಿದ್ದಾರೆ. ಇಂದಿನ ಜನರಿಗೆ ಈ ವಚನ ಸಾಹಿತ್ಯ, ಮಹಾಕಾವ್ಯಗಳು, ದಾಸ ಸಾಹಿತ್ಯ ಇವುಗಳ ಪರಿವಿಲ್ಲದಾಗಿದೆ ಎಂದರೆ ತಪ್ಪಾಗದು ಇಂದಿನ ಮಕ್ಕಳಿಗೆ ನಮ್ಮ ರಾಜ್ಯ ಯಾವುದು? ಎಂಬ ಪ್ರಶ್ನೆ ಹಾಕಿದರೆ ಹೇಳಲು ತಡವರಿಸುತ್ತಾರೆ ನಾವು ಎಂತಹ ಸಮಾಜದಲ್ಲಿದ್ದೇವೆ ಎಂಬುದನ್ನು ನೀವು ಸ್ವಲ್ಪ ಯೋಜಿಸಬೇಕು.

ನಾವೆಲ್ಲ ತಾಯಿ ಭುವನೇಶ್ವರಿಯ ಮಕ್ಕಳು ಆದರೆ ಇಂದು ನಾವು ಅದನ್ನು ಮರೆಯುತ್ತಿದ್ದೇವೆ ಒಂದು ಕಾಲದಲ್ಲಿ ಸಾಹಿತ್ಯ ಹೇಳುವ ಮೇಷ್ಟ್ರುಗಳಿದ್ದರು ಆದರೆ ಇಂದು ಆ ರೀತಿ ಸಾಹಿತ್ಯದ ಬಗ್ಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡುವ ಮೇಷ್ಟ್ರುಗಳು ಕಾಣೆಯಾಗಿದ್ದಾರೆ. ದೂರದರ್ಶನ, ಎಫ್ ಎಂ, ರೇಡಿಯೋದಲ್ಲಿ ಕನ್ನಡದ ಕಾರ್ಯಕ್ರಮಗಳನ್ನು ಕೇಳಿದಾಗ ಏನೋ ಹೇಳಲಾಗದ ಸಂತಸ ಇಂದು ಅದೆಲ್ಲ ಒಂದು ಕನಸಾಗಿದೆ.

ಇಂಗ್ಲೀಷ್ ಎಂಬ ಅಂತರಾಷ್ಟ್ರೀಯ ಭಾಷೆಯ ಕೈಗೊಂಬೆಯಾಗಿ ನಾವು ತಮಿಳು, ತೆಲಗು, ಮರಾಠಿ, ಕನ್ನಡವನ್ನು ಕಾಣಬಹುದಾಗಿದೆ. ಅಂದರೆ ಇಂಗ್ಲೀಷ್ ಎಂಬ

ಪರಕೀಯರ ಭಾಷೆ ಎಂಬುದು ಎಷ್ಟರ ಮಟ್ಟಿಗೆ ನಮ್ಮ ಜನರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತಿದೆ ಎಂದು ನೀವೇ ಆಲೋಚಿಸಬೇಕು.

ಆದರೆ ನಮ್ಮ ರಾಷ್ಟ್ರಕವಿ ಎಂಬ ಬಿರುದಿಗೆ ಅರ್ಹರಾಗಿರುವ ಕುವೆಂಪುರವರು ಏನೇಳಿದ್ದಾರೆ, "ಕನ್ನಡಕ್ಕೆ ಹೋರಾಡು ಕನ್ನಡದ ಕಂದ, ಕನ್ನಡವ ಕಾಪಾಡು ನನ್ನ ಆನಂದ" ಎಂದು ಹೇಳಿದ್ದಾರೆ.

ಇಲ್ಲಿ ಕನ್ನಡ ಎಂಬುದು ಬಹಳ ಮುಖ್ಯ ಕನ್ನಡಿಗರಾದ ನಾವೇ ಕನ್ನಡವನ್ನು ಕೆಳಮಟ್ಟದಲ್ಲಿ ಕಂಡರೆ ಇನ್ನಾರು ಕನ್ನಡವನ್ನು ಉನ್ನತ ಸ್ಥಾನಕ್ಕೆ ತರುವವರು ನಾವೆಲ್ಲ ಕನ್ನಡ ಭಾಷೆಗಾಗಿ ಹೋರಾಡಬೇಕು ಆ ಹೋರಾಟದಿಂದ  ನಾವು ಕನ್ನಡವನ್ನು ಕಾಪಾಡಬೇಕು, ಕನ್ನಡವನ್ನು ಉಳಿಸಿ ನಾವು ಆನಂದ ಪಡಬೇಕು ಎಂದು ಕುವೆಂಪುರವರು ಹೇಳಿದ್ದಾರೆ.

"**ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವ ಇಲ್ಲದಿದ್ದರೆ ನೀನಾಗುವೆ ಪರದೇಶಿ ಶಿವಾ**"

ಅಂದರೆ ಕನ್ನಡವನ್ನು ಉಳಿಸಿ ಬೆಳೆಸದೇ ನೀನು ಇಂದು ಇಂಗ್ಲೀಷ್, ಇಂಗ್ಲೀಷ್ ಎಂದು ಪರಭಾಷೆಯ ಹಿಂದೆ ಹೋದರೆ ನೀನು ಒಂದಲ್ಲ ಒಂದು ದಿನ ಪರದೇಶಿಯಾಗಬೇಕಾದೀತು ಹುಷಾರ್ ಎಂಬ ಎಚ್ಚರಿಕೆಯ ಮಾತನ್ನು ಕುವೆಂಪುರವರು ಸಾಲುಗಳೊಂದಿಗೆ ಹೇಳಿದ್ದಾರೆ.

ಒಟ್ಟಾರೆಯಾಗಿ ಕನ್ನಡ ಎಂಬುದು ಕರ್ನಾಟಕದ ಜನರಿಗೆ ಅಥವಾ ಕನ್ನಡಿಗನಿಗೆ ಎಷ್ಟು ಮುಖ್ಯ ಎಂದು ಮಾರೇನಹಳ್ಳಿ ಲೋಕೇಶ್ ಅವರು ರಚಿಸಿರುವ ಕನ್ನಡದ ನಿರೀಕ್ಷೆಗಳು ಎಂಬ ಕವನದಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.

ಒಂದು ಸಾಂದರ್ಭಿಕ ಮಾತು ಒಂದು ದಿನ ನಾನು ಪ್ರವಾಸಕ್ಕೆ ಹೋದ ಸಂದರ್ಭದಲ್ಲಿ ಸುಮಾರು 21 ವರ್ಷ ನನ್ನ ವಯಸ್ಸು ಅಲ್ಲಿ  ಬೇರೆ ಭಾಷೆಯ ಒಬ್ಬ ವ್ಯಕ್ತಿ ಪರಿಚಯವಾಗಿ  ನಿಮ್ಮ ಕನ್ನಡ ಭಾಷೆ ಏಕೆ ದುಂಡುಗಿದೆ ಎಂದು  ಪ್ರಶ್ನಿಸಿದರು ಅದಕ್ಕೆ ನಾನು ಹೇಳಿದೆ ಅದು ಜಿಲೇಬಿಯ ರೀತಿ ದುಂಡಗಿದ್ದು ಅದನ್ನು ಕಲಿಯಿರಿ ಆಗ ನಿಮಗೆ ಅದರ ರುಚಿ ಏನೆಂದು ತಿಳಿದೀತು ಎಂದು ಹೇಳಿದೆ.

ಈ ರೀತಿಯಾಗಿ ಕನ್ನಡವನ್ನು ಉಳಿಸುವ ಮತ್ತು ಬೆಳೆಸುವ ಒಂದು ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ ಎಂದು. ಸಹ ಕನ್ನಡವನ್ನು ಬಳಸುವ-ಬೆಳಸುವ ಕನ್ನಡಿಗರಾಗಿರೋಣ, ಕನ್ನಡವೇ ಸತ್ಯ, ಕನ್ನಡವೇ ನಿತ್ಯ, ಜೈ ಕರ್ನಾಟಕ ಮಾತೇ..........

**ದೀಪ್ತಿ. ಎನ್ ಕೀರ್ತಿಗೌಡ**

ಹೊಸಹೊಳಲು, ಕೆ.ಆರ್.ಪೇಟೆ ತಾ||, ಮಂಡ್ಯ ಜಿ||

ಮೊ : 7899006461

# ಸಾಹಿತ್ಯ ಸಂಭ್ರಮಾವಲೋಕನ

ಕನ್ನಡ ಸಾಹಿತ್ಯ–ಸಂಸ್ಕೃತಿಯ ಹರವು ಬಲು ವಿಸ್ತಾರ ಹಾಗೂ ವಿಶಿಷ್ಟಮಯವಾದುದು. ಇಂತಹ ಮೌಲಿಕ ಸಂಗತಿಗಳನ್ನು ಇಂದಿನ ಶೈಕ್ಷಣಿಕ ಪರಿಸರಕ್ಕೆ ಪರಿಚಯಿಸಿಕೊಡುವ ನಿರಂತರ ಪ್ರಯತ್ನಗಳು ನಡೆಯುತ್ತಿರುವುದು ಸ್ತುತ್ಯಾರ್ಹ. ಈ ನಿಟ್ಟಿನಲ್ಲಿ ಕೃಷ್ಣರಾಜಪೇಟೆಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಗ್ರಾಮಭಾರತಿ ಶಾಲೆಯಲ್ಲಿ ಸ್ಥಳೀಯ ಅತ್ತಿಗುಪ್ಪೆ ಸಾಹಿತ್ಯ ಬಳಗ ಹಾಗೂ ಅಕ್ಷಯ ಪ್ರಕಾಶನಗಳ ಸಹಯೋಗದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಂಭ್ರಮ ಕಾರ್ಯಕ್ರಮವು ವಿನೂತನವಾಗಿದೆ. ಹೊಸಪ್ರತಿಭೆಗಳ ಅನಾವರಣದೊಂದಿಗೆ, ಆಶಯಗಳೊಂದಿಗೆ ದಿನಾಂಕ 26–06–2023 ರಿಂದ 28–06–2023ರವರೆಗೆ ಪ್ರಾತ:ಸ್ಮರಣೀರಾದ ಶ್ರೀ ಸಾಹುಕಾರ್ ಎಸ್.ಸಿ. ಚಿಕ್ಕಣ್ಣಗೌಡ ಸಭಾಂಗಣದಲ್ಲಿ ವ್ಯವಸ್ಥಿತವಾಗಿ ಆಯೋಜನೆಗೊಂಡಿದ್ದನ್ನು ಸಂಕ್ಷಿಪ್ತವಾಗಿ ಅವಲೋಕಿಸುವುದು ಈ ಬರಹದ ಉದ್ದೇಶವಾಗಿದೆ.

ದಿನಾಂಕ 26–06–23ರ ಸೋಮವಾರದಂದು ನಡೆದ ಉದ್ಘಾಟನಾ ಸಮಾರಂಭವನ್ನು ಗ್ರಾಮಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್‌ಕುಮಾರ್ ಅವರು ಸಸ್ಯಕ್ಕೇ ನೀರೆರೆಯುವ ಮೂಲಕ ಚಾಲನೆ ನೀಡಿ, "ಈ ಕಾರ್ಯಕ್ರಮದ ಪ್ರಸ್ತುತತೆ ಹಾಗೂ ಮಹತ್ವ" ಗಳನ್ನು ವಿವರಿಸಿದರು. ಸಾಹಿತ್ಯ ಸಂಭ್ರಮದ ರೂವಾರಿಗಳಾದ ಶ್ರೀ ಮಾರೇನಹಳ್ಳಿ ಲೋಕೇಶ್ ಅವರು ಮೂರು ದಿನಗಳಲ್ಲಿ ನಡೆಯುವ ಕಾರ್ಯಕ್ರಮದ ಸ್ವರೂಪ–ವ್ಯಾಪ್ತಿಗಳನ್ನು ಪ್ರಸ್ತಾಪಿಸಿ "ನಿಮ್ಮೊಳಗಿನ ಅರಿವು ಮತ್ತಷ್ಟು ದೀಪ್ತವಾಗುವುದಕ್ಕೆ ಈ ವೇದಿಕೆಯನ್ನು ಶ್ರದ್ಧೆಯಿಂದ ಬಳಸಿಕೊಳ್ಳುವಂತಾಗಲೆಂದು ಆಶಿಸಿದರು. ಪ್ರಶಿಕ್ಷಣಾ ವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಪಿ.ಸುರೇಶ್ ಅವರು ನಮ್ಮ ವಿದ್ಯಾರ್ಥಿಗಳಿಗೆ ಈ ಸಾಹಿತ್ಯ ಸಂಭ್ರಮವು ಅಪೂರ್ವ ಪ್ರಾಯೋಗಿಕ ಕಾರ್ಯಕ್ರಮವಾಗಲೆಂದು ಶುಭ ಹಾರೈಸಿದರು.

ಮೊದಲನೆಯ ದಿನದಂದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರರ ಆಯ್ದ ವಚನಗಳನ್ನು ಕುರಿತು ಪ್ರಶಿಕ್ಷಣಾರ್ಥಿಗಳಾದ ಜೆ.ಬಿ. ಸತೀಶ್ ಹಾಗೂ ಸಿಂಧು ಅವರು ಪ್ರಬಂಧಗಳನ್ನು ಪ್ರಸ್ತುತ ಪಡಿಸಿದರು. ಇದಾದ ನಂತರ ಆದ್ಯ ಜಾನಪದ ಸಂಗ್ರಹಕಾರರಾದ ಅರ್ಚಕ ರಂಗಸ್ವಾಮಿಭಟ್ಟರ ಹುಟ್ಟಿದ ಹಳ್ಳಿ–ಹಳ್ಳಿಯ ಹಾಡು ಕೃತಿ ಕುರಿತು ಸಚಿನ್ ಹಾಗೂ ಡಿ.ಸಹನಾ ಅವರಿಂದ ಪ್ರಬಂಧಗಳು ಮಂಡಿತಗೊಂಡವು. ಇವುಗಳನ್ನು ಕುರಿತು ನಿವೃತ್ತ ಪ್ರಾಚಾರ್ಯರಾದ ಶಿ.ಕುಮಾರಸ್ವಾಮಿ ಅವರು ವಿಶ್ಲೇಷಿಸಿದರು.

ಎರಡನೆಯ ದಿನ ಆರು ಪ್ರಬಂಧಗಳು ಮಂಡಿತವಾದವು. ಎ.ಎನ್. ಮೂರ್ತಿರಾಯರ ಆಯ್ದ ಲಲಿತ ಪ್ರಬಂಧಗಳನ್ನು ಕುರಿತು ಅರ್ಪಿತ ಮತ್ತು ಶಿಲ್ಪ; ಕೆ.ಎಸ್. ನರಸಿಂಹಸ್ವಾಮಿ ಅವರ ಆಯ್ದ ಕವನಗಳನ್ನು ಕುರಿತು ಶಾರದ ಮತ್ತು ರಕ್ಷಿತ; ಸ್ಥಳೀಯ ಲೇಖಕ ಶಿ.ಕುಮಾರಸ್ವಾಮಿ ಅವರ ಕವನ–ವಚನಗಳನ್ನು ಕುರಿತು ಪ್ರಿಯಾ ಮತ್ತು ನಿಶ್ಚಿತ್ ಪ್ರಬಂಧ ಮಂಡಿಸಿದರು. ಇವುಗಳ ವಿಶ್ಲೇಷಣೆಯನ್ನು ಶ್ರೀ ಅ.ಮ.ಶ್ಯಾಮೇಶ್ ಅವರು ನೆರವೇರಿಸಿಕೊಟ್ಟರು.

ಮೂರನೆಯ ದಿನ ನಾಲ್ಕು ಪ್ರಬಂಧ ಮಂಡನೆಯೊಂದಿಗೆ ಸಾಹಿತ್ಯ ಸಮಾರೋಪವು ನಡೆಯಿತು. ಸ್ಥಳೀಯ ಲೇಖಕರಾದ ಶ್ರೀ ಬಲ್ಲೇನಹಳ್ಳಿ ಮಂಜುನಾಥ್ ಅವರ ವಸ್ತ್ರಾಪಹರಣ ಮತ್ತು ಇತರ ಕಥೆಗಳನ್ನು ಕುರಿತು ಯೋಗೇಶ್ ಮತ್ತು ಪವನ್; ಶ್ರೀ ಮಾರೇನಹಳ್ಳಿ ಲೋಕೇಶ್ ಅವರ ಮಕ್ಕಳ ಸಾಹಿತ್ಯ ಕುರಿತು ದೀಪ್ತಿ ಮತ್ತು ಪೂರ್ಣಿಮಾ ಪ್ರಬಂಧ ಮಂಡಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕೆ.ಎಸ್.ಸೋಮಶೇಖರ್ ಅವರು ಸಾಹಿತ್ಯ ಸಂಭ್ರಮದ ಚರ್ಚೆಗಳಲ್ಲಿ ಪಾಲ್ಗೊಂಡು ಪ್ರಶಿಕ್ಷಣಾರ್ಥಿಗಳನ್ನು ಪ್ರಶಂಸಿಸಿದರು. ಅಧ್ಯಕ್ಷೀಯ ನುಡಿಗಳನ್ನು ಶ್ರೀ ಬಲ್ಲೇನಹಳ್ಳಿ ವಿಜಯಕುಮಾರ್ ಅವರು ಸಿದ್ಧತೆ–ಬದ್ಧತೆ–ಪ್ರಬುದ್ಧತೆಗಳು ಸಾಹಿತ್ಯದ ಅಧ್ಯಯನದಲ್ಲಿ ಬಹುಮುಖ್ಯವಾದುದೆಂಬುದನ್ನು ವಿವರಿಸಿದರು.

ಒಟ್ಟಾರೆಯಾಗಿ; ಈ ಸಾಹಿತ್ಯ ಸಂಭ್ರಮ ಶಿಸ್ತುಬದ್ಧವಾಗಿ ಪ್ರಶಿಕ್ಷಣಾರ್ಥಿಗಳ: ಪ್ರಾರ್ಥನೆ–ಸ್ವಾಗತ–ವಂದನೆ ನಿರೂಪಣೆ– ಪ್ರಬಂಧ ಮಂಡನೆ – ಪ್ರಶ್ನೋತ್ತರಗಳೆಲ್ಲವೂ ನೆರವೇರಿದವು. ಈ ಸಮಾರಂಭದ ಯಶಸ್ಸಿಗೆ ಸಹಕರಿಸಿದ ಸರ್ವರಿಗೂ ಅಭಿವಂದನೆಗಳನ್ನು ಸಲ್ಲಿಸಲಾಯಿತು.

"ಸಾಹಿತ್ಯದ ತಿಳಿವಳಿಕೆ ಆರಾಧನೆಯಿಂದ ಬೆಳೆಯುವುದಿಲ್ಲ, ಅಧ್ಯಯನದಿಂದ ಬೆಳೆಯುತ್ತದೆ."

ವಂದನೆಗಳೊಂದಿಗೆ,

**ಎಸ್.ಕುಮಾರಸ್ವಾಮಿ (ಶಿಕು)**
ನಿವೃತ್ತ ಪ್ರಾಚಾರ್ಯರು, ಮೈಸೂರು
ಮೊ : 9449148885

# ಅನುಬಂಧ

## ಗ್ರಾಮಭಾರತಿ ಪ್ರಕಟಣೆಗಳು

1. ಕಾವ್ಯದೀಪ – ಕವನ ಸಂಕಲನ : ಕಾವ್ಯ ಎನ್.ಕೆ. 2012
2. ಬೆಳದಿಂಗಳು – ಬಿಡಿ ಬರಹಗಳು : ಅಣ್ಣೇಗೌಡ ಕೆ. 2028
3. ಶೀಲವಂತರಾಜಕಾರಣಿ – ಎಸ್.ಎಂ.ಲಿಂಗಪ್ಪ
   ಸಂಸ್ಮರಣಾ ಗ್ರಂಥ
4. ಸಾಹಿತ್ಯ ಸಂಭ್ರಮ – ಪ್ರಬಂಧ ಸಂಕಲನ – 2023